ಸೋಮವಾರ, ಜನವರಿ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 15 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಕ್ರಾಂತಿ ಹಬ್ಬದ ಶುಭಾಶಯಗಳು

ಶಿಕ್ಷಣ
ಪರೀಕ್ಷೆಗಳು ಹೊಸ್ತಿಲಲ್ಲಿರುವಾಗ ಓದಲು, ಬರೆಯಲು ವಿದ್ಯಾರ್ಥಿಗಳ ವೇಳಾಪಟ್ಟಿ ಹೇಗಿರಬೇಕು? ಹೇಗಿದ್ದರೆ ಯಶಸ್ಸು ಸಾಧ್ಯ?



ಹಾದಿಯುದ್ದಕ್ಕೂ ಜನರ ಮನದ ಮಾತಿಗೆ ಆದ್ಯತೆ ಎಂದು ಹೇಳಿದ ಕಾಂಗ್ರೆಸ್ ನಾಯಕರು

‘ನ್ಯಾಯ ಯಾತ್ರೆ’ಗೆ ಚಾಲನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಖೊಂಗ್‌ಜೊಮ್ (ಮಣಿಪುರ): ಪ್ರಧಾನಿ ನರೇಂದ್ರ ಮೋದಿ ಮತ್ತು ಆಡಳಿತಾರೂಢ ಬಿಜೆಪಿ ನಾಯಕರು ಜನರ ಬವಣೆಗಳನ್ನು ಅಲಕ್ಷಿಸುತ್ತಿದ್ದಾರೆ, ಮತ ಗಳಿಸುವ ಉದ್ದೇಶದಿಂದ ಧರ್ಮದ ಹೆಸರಿನಲ್ಲಿ ಜನರಿಗೆ ಮೋಸ ಮಾಡಲಾಗುತ್ತಿದೆ ಎಂದು ಆರೋಪಿಸಿದ ಕಾಂಗ್ರೆಸ್ ನಾಯಕರು, ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ 66 ದಿನಗಳ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಗೆ ಭಾನುವಾರ ಇಲ್ಲಿ ಚಾಲನೆ ನೀಡಿದರು.

ಇಲ್ಲಿನ ಯುದ್ಧ ಸ್ಮಾರಕದಲ್ಲಿ ಯಾತ್ರೆಗೆ ಚಾಲನೆ ನೀಡಲಾಯಿತು. ವಸಾಹತುಶಾಹಿಗಳನ್ನು ವಿರೋಧಿಸಿ ಹೋರಾಡಿದವರ ನೆನಪಿನ ಯುದ್ಧ ಸ್ಮಾರಕಕ್ಕೆ ಯಾತ್ರೆ ಆರಂಭಕ್ಕೂ ಮೊದಲು ರಾಹುಲ್ ಅವರು ಗೌರವ ಅರ್ಪಿಸಿದರು. ಈ ಯಾತ್ರೆಯ ಸಮಯದಲ್ಲಿ ‘ಜನರ ಮಾತಿಗೆ ಆದ್ಯತೆ ಇರಲಿದೆ’ ಎಂಬ ಸಂದೇಶವನ್ನು ಕಾಂಗ್ರೆಸ್ ನಾಯಕರು ರವಾನಿಸಿದರು.

ಯಾತ್ರೆಗೆ ಚಾಲನೆ ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ತೀಕ್ಷ್ಣ ವಾಗ್ದಾಳಿ ನಡೆಸಿದರು. ರಾಹುಲ್ ಗಾಂಧಿ ಅವರ ಮಾತುಗಳು ಕೂಡ ಮೋದಿ ಅವರನ್ನೇ ಉದ್ದೇಶಿಸಿದ್ದವು. ಯಾತ್ರೆಯು ಮುಂಬೈನಲ್ಲಿ ಮಾರ್ಚ್ 20ರಂದು ಕೊನೆಗೊಳ್ಳಲಿದೆ, ಒಟ್ಟು 6,713 ಕಿ.ಮೀ. ಮಾರ್ಗವನ್ನು ಕ್ರಮಿಸಲಿದೆ.

11ನೇ ಪುಟ ನೋಡಿ



‘ಭಾರತ್ ಜೋಡೊ ನ್ಯಾಯ ಯಾತ್ರೆ’ಯ ಮೊದಲ ದಿನವಾದ ಭಾನುವಾರ ರಾಹುಲ್ ಗಾಂಧಿ ಅವರು ಬೆಂಬಲಿಗರು, ಕಾರ್ಯಕರ್ತರತ್ತ ಕೈಬೀಸಿದರು —ಪಿಟಿಐ ಚಿತ್ರ

> **ಭಾರತವು ಭಾರಿ ಅನ್ಯಾಯದ ಕಾಲಘಟ್ಟದಲ್ಲಿ ಇದೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅನ್ಯಾಯವನ್ನು ಕಾಣುತ್ತಿದ್ದೇವೆ... ಯಾತ್ರೆಯು ಈ ಅನ್ಯಾಯಗಳ ಬಗ್ಗೆ ಮಾತನಾಡಲಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ನ್ಯಾಯ ಯಾತ್ರೆಯು ಒಂದು ಮೋಸ. ರಾಹುಲ್ ಮತ್ತು ಸೋನಿಯಾ ಅವರು ಜನರಿಗೆ ನ್ಯಾಯ ನೀಡಿಕೆ ಕುರಿತು ಮಾತನಾಡುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನಲ್ಲಿರುವ ನಾಯಕರೇ ನ್ಯಾಯ ವಂಚಿತರು**
> **ಅನುರಾಗ್ ಠಾಕೂರ್,** ಕೇಂದ್ರ ಸಚಿವ

ಡ್ಯಾನಿಶ್ ಅಲಿ ಭಾಗಿ

- ಬಿಎಸ್‌ಪಿಯಿಂದ ಉಚ್ಚಾಟಿತರಾಗಿರುವ ಸಂಸದ ಡ್ಯಾನಿಶ್ ಅಲಿ ಅವರು ಯಾತ್ರೆಯ ಆರಂಭದ ದಿನ ಭಾಗಿ
- ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದಲ್ಲಿರುವ 10 ಪಕ್ಷಗಳ ರಾಜ್ಯದ ಘಟಕಗಳ ಪ್ರತಿನಿಧಿಗಳು ಕೂಡ ಯಾತ್ರೆಗೆ ಚಾಲನೆ ನೀಡುವ ಸಮಾರಂಭದಲ್ಲಿ ಹಾಜರು
- ಬಸ್ ಯಾತ್ರೆ ಸಾಗಿದ ಹಾದಿಯ ಉದ್ದಕ್ಕೂ ಜನರು ಸಾಲುಗಟ್ಟಿದ್ದರು. ರಾಹುಲ್ ಜನರೊಂದಿಗೆ ಸಂವಾದ ನಡೆಸಿದರು
- ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಾಲ್ಗೊಂಡಿದ್ದರು
- ಯಾತ್ರೆಯು 6,713 ಕಿ.ಮೀ. ಕ್ರಮಿಸಲಿದೆ. ಒಟ್ಟು 67 ದಿನ ನಡೆಯಲಿದೆ, ಮಾರ್ಚ್ 20 ರಂದು ಮುಂಬೈಯಲ್ಲಿ ಸಮಾರೋಪ



ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ

ಯಾದಗಿರಿ ತಾಲ್ಲೂಕಿನ ಐತಿಹಾಸಿಕ ಮೈಲಾಪುರದ ಮೈಲಾರಲಿಂಗೇಶ್ವರ ಜಾತ್ರೆ ಮಕರ ಸಂಕ್ರಮಣದ ಅಂಗವಾಗಿ ಭಾನುವಾರ ಅದ್ದೂರಿಯಾಗಿ ನಡೆಯಿತು. ಹೊನ್ನಕೆರೆಗೆ ಮಲ್ಲಯ್ಯನ ಉತ್ಸವ ಮೂರ್ತಿಯನ್ನು ಗಂಗಾ ಸ್ನಾನಕ್ಕೆ ತೆಗೆದುಕೊಂಡು ಬರುವಾಗ ಅಪಾರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ/ ರಾಜಕುಮಾರ ನಳ್ಳಿಕರ

ಶಿವಸೇನಾ ಸೇರಿದ ಮಿಲಿಂದ್

ಮುಂಬೈ (ಪಿಟಿಐ): ಕೇಂದ್ರದ ಮಾಜಿ ಸಚಿವ ಮಿಲಿಂದ್ ದೇವರಾ ಅವರು ಕಾಂಗ್ರೆಸ್ ತೊರೆದು ಶಿವಸೇನಾ ಪಕ್ಷವನ್ನು ಭಾನುವಾರ ಸೇರಿದರು.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ತಮ್ಮ ಸರ್ಕಾರಿ ನಿವಾಸ ‘ವರ್ಷಾ’ದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಕಾರ್ಯಕ್ರಮದಲ್ಲಿ ಮಿಲಿಂದ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಮಿಲಿಂದ್ ಅವರು ಸೀಟು ಹಂಚಿಕೆ ವಿಚಾರವಾಗಿ ಕಾಂಗ್ರೆಸ್ ನಾಯಕರ ಜೊತೆ ಅಸಮಾಧಾನ ಹೊಂದಿದ್ದಾರೆ ಎಂಬ ವಿಚಾರವು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಬಳಿಕ, ಶಿವಸೇನಾ ಸೇರಲು ಮಿಲಿಂದ್ ಅವರಿಗೆ ಶಿಂದೆ ಅವರು ಬಹಿರಂಗವಾಗಿ ಆಹ್ವಾನ ನೀಡಿದ್ದರು.

ಶಿವಸೇನಾಕ್ಕೆ ಸೇರುವ ಮುನ್ನ ಮಿಲಿಂದ್ ಅವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿರುವುದಾಗಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

11 ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಾರ್ಚ್ 15ರೊಳಗೆ ಹಿಂದಕ್ಕೆ ಕರೆಸಿ: ಮಾಲ್ದೀವ್ಸ್

ಸೇನೆ ವಾಪಸ್‌ಗೆ ಗಡುವು

ಮಾಲೆ (ಪಿಟಿಐ): ‘ದ್ವೀಪರಾಷ್ಟ್ರ ಮಾಲ್ದೀವ್ಸ್‌ನಲ್ಲಿರುವ ಸೇನಾ ಸಿಬ್ಬಂದಿಯನ್ನು ಮಾರ್ಚ್ 15ರೊಳಗೆ ವಾಪಸು ಕರೆಯಿಸಿಕೊಳ್ಳಬೇಕು’ ಎಂದು ಮಾಲ್ದೀವ್ಸ್‌ನ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಭಾರತ ಸರ್ಕಾರವನ್ನು ಕೋರಿದ್ದಾರೆ. ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಭಾನುವಾರ ಈ ವಿಷಯ ತಿಳಿಸಿದರು. ಸದ್ಯ, ಭಾರತದ 77 ಯೋಧರು ಮಾಲ್ದೀವ್ಸ್‌ನಲ್ಲಿದ್ದಾರೆ.

ದ್ವೀಪರಾಷ್ಟ್ರದಿಂದ ಸೇನೆ ವಾಪಸಾತಿ ಕುರಿತ ಚರ್ಚೆಗೆ ಮಾಲ್ದೀವ್ಸ್ ಮತ್ತು ಭಾರತ ಜಂಟಿಯಾಗಿ ಉನ್ನತ ಮಟ್ಟದ ಸಮಿತಿ ರಚಿಸಿತ್ತು. ಈ ಸಮಿತಿಯ ಸಭೆ ಭಾನುವಾರ ನಡೆಯಿತು. ಭಾರತದ ರಾಯಭಾರಿ ಮುನು ಮಹಾವರ್ ಅವರೂ ಸಭೆಯಲ್ಲಿ ಭಾಗವಹಿಸಿದ್ದರು.

‘ಭಾರತ ಸೇನೆಯ ಯೋಧರು ಮಾಲ್ದೀವ್ಸ್‌ನಲ್ಲಿ ಇರಲು ಅವಕಾಶವಿಲ್ಲ. ಇದು, ಅಧ್ಯಕ್ಷರು ಮತ್ತು ಅವರ ಸರ್ಕಾರದ ನಿರ್ಧಾರವಾಗಿದೆ’ ಎಂದು ಅಧ್ಯಕ್ಷರ ಕಚೇರಿಯ ಸಚಿವ ಅಬ್ದುಲ್ಲಾ ನಜೀಂ ಇಬ್ರಾಹಿಂ ಹೇಳಿದ್ದಾರೆ ಎಂದು ಆನ್‌ಲೈನ್ ದೈನಿಕ ‘ದ ಸನ್’ ವರದಿ ಮಾಡಿದೆ.

2023ರ ನ. 17ರಂದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದ ಮುಯಿಜು, ‘ಭಾರತವು ತನ್ನ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳಬೇಕು. ಈ ಮನವಿ ಸಲ್ಲಿಸಲು ಜನರು ತಮಗೆ ಸ್ಪಷ್ಟ ಬಹುಮತ ನೀಡಿದ್ದಾರೆ’ ಎಂದು ಹೇಳಿದ್ದರು. ಭಾರತದ ಜೊತೆಗಿನ ನೂರಕ್ಕೂ ಹೆಚ್ಚು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಲ್ದೀವ್ಸ್ ಮರುಪರಿಶೀಲನೆ ನಡೆಸುತ್ತಿದೆ.

11ನೇ ಪುಟ ನೋಡಿ

ಮೇಯರ್ ಚುನಾವಣೆ: ಭಾರತ ಪರ ಪಕ್ಷಕ್ಕೆ ಭಾರಿ ಗೆಲುವು

ಮಾಲ್ದೀವ್ಸ್ ರಾಜಧಾನಿ ಮಾಲೆ ಮೇಯರ್ ಚುನಾವಣೆಯಲ್ಲಿ, ಭಾರತ ಪರ ನಿಲುವು ಹೊಂದಿರುವ ಮಾಲ್ದೀವಿಯನ್ ಡೆಮಾಕ್ರಟಿಕ್ ಪಕ್ಷ (ಎಂಡಿಪಿ) ಭಾರಿ ಗೆಲುವು ದಾಖಲಿಸಿದೆ.

ಪ್ರಸ್ತುತ ರಾಜತಾಂತ್ರಿಕ ಭಿನ್ನಭಿಪ್ರಾಯದ ಸಂದರ್ಭದಲ್ಲಿ, ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರಿಗೆ ಈ ಬೆಳವಣಿಗೆಯಿಂದ ತೀವ್ರ ಹಿನ್ನಡೆಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಎಂಡಿಪಿ ಅಭ್ಯರ್ಥಿ ಆದಂ ಅಜೀಂ ಅವರು ಮಾಲೆಯ ನೂತನ ಮೇಯರ್ ಆಗಿ ಆಯ್ಕೆಯಾದರು. ಕಳೆದ ವರ್ಷದವರೆಗೂ ಈ ಸ್ಥಾನದಲ್ಲಿದ್ದ ಮುಯಿಜು ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಲು ರಾಜೀನಾಮೆ ನೀಡಿದ್ದರು. ಭಾರಿ ಬಹುಮತದಿಂದ ಎಂಡಿಪಿ ಗೆಲುವು ದಾಖಲಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

41 ಮತಪೆಟ್ಟಿಗೆಗಳ ಎಣಿಕೆ ಕಾರ್ಯ ಮುಗಿದಿದೆ. ಅಜೀಂ ಅವರು 5,303 ಮತ ಪಡೆದಿದ್ದು, ಇವರ ಪ್ರತಿಸ್ಪರ್ಧಿ, ಪೀಪಲ್ಸ್ ನ್ಯಾಷನಲ್ ಕಾಂಗ್ರೆಸ್‌ನ (ಪಿಎನ್‌ಸಿ) ಆಯಿಷತ್ ಶಕೂರ್ 3,301 ಮತ ಪಡೆದಿದ್ದಾರೆ ಎಂದು ಸ್ಥಳೀಯ ಸುದ್ದಿಸಂಸ್ಥೆ ಮಾಲ್ದೀವ್ಸ್ ಸನ್ ವರದಿ ಮಾಡಿದೆ.

ಕೇಂದ್ರದ ತಿದ್ದುಪಡಿಯ 25 ವರ್ಷಗಳ ಬಳಿಕ ರಾಜ್ಯದಲ್ಲಿ ಹೊಸ ನಿಯಮ ಜಾರಿ

ನೌಕರರ ಗ್ರ್ಯಾಚ್ಯುಯಿಟಿಗೆ ವಿಮೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಸಂಸ್ಥೆಗಳ ಉದ್ಯೋಗಿಗಳ ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ವಿಮೆಯ ರಕ್ಷಣೆಯನ್ನು ಒದಗಿಸಲು ಕೇಂದ್ರ ಸರ್ಕಾರವು ಗ್ರ್ಯಾಚ್ಯುಯಿಟಿ ಕಾಯ್ದೆಗೆ ತಂದಿರುವ ತಿದ್ದುಪಡಿಯು 25 ವರ್ಷಗಳ ಬಳಿಕ ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿದೆ.

‘ಕರ್ನಾಟಕ ಕಡ್ಡಾಯ ಗ್ರ್ಯಾಚ್ಯುಯಿಟಿ ವಿಮಾ ನಿಯಮಗಳು-2024’ ಅನ್ನು ಜಾರಿಗೊಳಿಸಿ ಕಾರ್ಮಿಕ ಇಲಾಖೆಯು ಬುಧವಾರ ರಾಜ್ಯಪತ್ರದ ಮೂಲಕ ಅಧಿಸೂಚನೆ ಹೊರಡಿಸಿದೆ. ಇದರಿಂದ ಖಾಸಗಿ ಉದ್ದಿಮೆಗಳು/ ಉದ್ಯೋಗದಾತ ಸಂಸ್ಥೆಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದರೂ ನೌಕರರ ಗ್ರ್ಯಾಚ್ಯುಯಿಟಿಗೆ ರಕ್ಷಣೆ ಸಿಗಲಿದೆ.

ಉದ್ದಿಮೆಗಳು, ಇತರ ಉದ್ಯೋಗದಾತ ಸಂಸ್ಥೆಗಳು ಆರ್ಥಿಕ ಬಿಕ್ಕಟ್ಟು ಸೇರಿದಂತೆ ವಿವಿಧ ಕಾರಣಗಳಿಂದ ಬಾಗಿಲು ಮುಚ್ಚಿದರೆ ನೌಕರರ ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ರಕ್ಷಣೆ ಸಿಗುತ್ತಿರಲಿಲ್ಲ. ಬಹುತೇಕ ಸಂದರ್ಭಗಳಲ್ಲಿ ನೌಕರರು ಗ್ರ್ಯಾಚ್ಯುಯಿಟಿಯಿಂದ ವಂಚಿತರಾಗುತ್ತಿದ್ದರು.

ಈ ರೀತಿಯ ಸಂಕಷ್ಟದಿಂದ ನೌಕರರನ್ನು ರಕ್ಷಿಸಲು ‘ಗ್ರ್ಯಾಚ್ಯುಯಿಟಿ ಪಾವತಿ ಕಾಯ್ದೆ-1972’ಕ್ಕೆ 1987ರಲ್ಲಿ ತಿದ್ದುಪಡಿ ತಂದಿದ್ದ ಕೇಂದ್ರ ಸರ್ಕಾರ, ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ವಿಮಾ ರಕ್ಷಣೆ ಒದಗಿಸುವುದನ್ನು ಕಡ್ಡಾಯಗೊಳಿಸಿತ್ತು. ಆದರೆ, ಈ ತಿದ್ದುಪಡಿಯನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ನಿಯಮಗಳನ್ನು ರೂಪಿಸಿರಲಿಲ್ಲ.

60 ದಿನಗಳೊಳಗೆ ವಿಮೆ ಕಡ್ಡಾಯ: ಈಗ ನಿಯಮವು ಜಾರಿಯಾದ ದಿನದಿಂದ ಎರಡು ತಿಂಗಳೊಳಗೆ ಎಲ್ಲ ಉದ್ಯೋಗದಾತರು ತಮ್ಮ ನೌಕರರ ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಅಥವಾ ಅದೇ ರೀತಿಯ ಕಾನೂನುಬದ್ಧ ವಿಮಾ ಕಂಪನಿಗಳಿಂದ ಪಾಲಿಸಿ ಖರೀದಿಸುವುದು ಕಡ್ಡಾಯ. ಆ ಬಳಿಕ ತಮ್ಮ ಎಲ್ಲ ನೌಕರರ ಹೆಸರಿನೊಂದಿಗೆ ವಿಮಾ ಕಂತು ಪಾವತಿಸಬೇಕು ಎಂಬ ಅಂಶ ಕಡ್ಡಾಯ ಗ್ರ್ಯಾಚ್ಯುಯಿಟಿ ವಿಮಾ ನಿಯಮಗಳಲ್ಲಿದೆ.

ಎಲ್ಲ ಉದ್ಯೋಗದಾತರು ಗ್ರ್ಯಾಚ್ಯುಯಿಟಿ ವಿವರ ಮತ್ತು ವಿಮಾ ಪಾಲಿಸಿಯ ವಿವರಗಳನ್ನು ಆಯಾ ಪ್ರದೇಶದ ನಿಯಂತ್ರಣ ಪ್ರಾಧಿಕಾರಗಳಲ್ಲಿ ನೋಂದಣಿ ಮಾಡಿಸಬೇಕು. ವಿಮಾ ಕಂಪನಿಯಿಂದ ನೌಕರರಿಗೆ ಗ್ರ್ಯಾಚ್ಯುಯಿಟಿ ಮೊತ್ತ ಪಾವತಿಗೆ ಕ್ರಮ ಕೈಗೊಳ್ಳುವ ಅಧಿಕಾರವನ್ನೂ ನಿಯಂತ್ರಣ ಪ್ರಾಧಿಕಾರಕ್ಕೆ ನೀಡಲಾಗಿದೆ.

10ನೇ ಪುಟ ನೋಡಿ

‘ನೌಕರರ ರಕ್ಷಣೆಗಾಗಿ ನಿಯಮ’



‘ಮುಚ್ಚಿ ಹೋದ ಅಥವಾ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ ಸಂಸ್ಥೆಗಳ ನೌಕರರಿಗೆ ಗ್ರ್ಯಾಚ್ಯುಯಿಟಿ ಪಾವತಿಸದ ನೂರಾರು ಪ್ರಕರಣಗಳು ಇಲಾಖೆಯ ಮುಂದಿವೆ. ಆ ಬಗ್ಗೆ ಪರಿಶೀಲಿಸಿದಾಗ ಗ್ರ್ಯಾಚ್ಯುಯಿಟಿಗೆ ವಿಮೆ ಕಡ್ಡಾಯಗೊಳಿಸುವ ನಿಯಮ ರೂಪಿಸಿಲ್ಲ ಎಂಬುದು ಗಮನಕ್ಕೆ ಬಂತು. ತಕ್ಷಣವೇ ಹೊಸ ನಿಯಮ ರೂಪಿಸಿ, ಜಾರಿಗೆ ತಂದಿದ್ದೇವೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

‘2018-19ರಲ್ಲಿ ಈ ನಿಯಮ ರೂಪಿಸುವ ಪ್ರಯತ್ನ ನಡೆದಿತ್ತು. ಬಳಿಕ ಅದು ಸ್ಥಗಿತಗೊಂಡಿತ್ತು. ಈಗ ಖಾಸಗಿ ವಲಯದ ನೌಕರರ ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ಭದ್ರತೆ ಒದಗಿಸಿ, ಅವರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಹೊಸ ನಿಯಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ’ ಎಂದರು.

ತಡವಾಗಿ ಆಸ್ಪತ್ರೆಗೆ ದಾಖಲು, ಚಿಕಿತ್ಸೆ ವಿಳಂಬ ಸೇರಿ ವಿವಿಧ ಕಾರಣಗಳಿಂದ ರೋಗಿಗಳಿಗೆ ಸಮಸ್ಯೆ

ಕಿದ್ವಾಯಿ: ಕ್ಯಾನ್ಸರ್‌ನಿಂದ ಹೆಚ್ಚಿದ ಮರಣ

• ವರುಣ ಹೆಗಡೆ

ಬೆಂಗಳೂರು: ತಡವಾಗಿ ಆಸ್ಪತ್ರೆಗೆ ದಾಖಲು, ಚಿಕಿತ್ಸೆಯಲ್ಲಿ ವಿಳಂಬ ಸೇರಿ ವಿವಿಧ ಕಾರಣಗಳಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕ್ಯಾನ್ಸರ್ ಮರಣ ಪ್ರಕರಣಗಳು ಹೆಚ್ಚಳವಾಗಿವೆ.

ವಿವಿಧ ಪ್ರಕಾರಗಳ ಕ್ಯಾನ್ಸರ್ ಚಿಕಿತ್ಸೆಗೆ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ನಗರದ ಸಂಸ್ಥೆಗೆ ಪ್ರತಿನಿತ್ಯ ಸಾವಿರಾರು ರೋಗಿಗಳು ಬರುತ್ತಾರೆ. ಇಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಸಂಸ್ಥೆ ಈಗ ಸುವರ್ಣ ವರ್ಷಾಚರಣೆಯ ಸಂಭ್ರಮದಲ್ಲಿದೆ.

ಇದೇ ವೇಳೆ, ಸಂಸ್ಥೆಯಲ್ಲಿ ವರದಿಯಾಗುತ್ತಿರುವ ಮರಣ ಪ್ರಕರಣಗಳು ಏರುಗತಿ ಪಡೆದಿವೆ. ಕಳೆದ ವರ್ಷ ಮರಣ ಪ್ರಕರಣಗಳು ಸಾವಿರದ ಗಡಿ ದಾಟಿವೆ. ಇನ್ನೊಂದೆಡೆ ಸಂಸ್ಥೆಯಲ್ಲಿನ ವೈದ್ಯರೇ ರೋಗಿಗಳಿಗೆ ನೀಡಲಾಗುತ್ತಿರುವ ಚಿಕಿತ್ಸೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ದೂರು ನೀಡಿದ್ದಾರೆ.

ಸಂಸ್ಥೆಯ ಹಾಸಿಗೆಗಳ ಸಾಮರ್ಥ್ಯ 863 ಆಗಿದ್ದು, ಇವುಗಳಲ್ಲಿ ತುರ್ತು ನಿಗಾ ಘಟಕದ (ಐಸಿಯು) 106 ಹಾಸಿಗೆಗಳು ಸೇರಿವೆ. ಕ್ಯಾನ್ಸರ್ ತಪಾಸಣೆ, ಚಿಕಿತ್ಸೆ ಸಂಬಂಧ ನಿತ್ಯ ಸರಾಸರಿ 1,400 ಹೊರರೋಗಿಗಳು ಬರುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಯಲ್ಲಿ ಹಾಸಿಗೆಗಳ ಕೊರತೆ ಸಮಸ್ಯೆ ಗಂಭೀರವಾಗಿದೆ. ರೋಗಿಗಳು ಅಲೆದಾಟ ನಡೆಸಬೇಕಾಗಿದೆ. ಶಿಫಾರಸು ಆಧಾರದಲ್ಲಿ ಕೂಡ ದಾಖಲಾತಿಗೆ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ವಿವಿಧ ಜಿಲ್ಲೆಗಳಿಂದ ಬರುತ್ತಿದ್ದು, ಚಿಕಿತ್ಸೆಯಲ್ಲಿ ವ್ಯತ್ಯಯವಾಗುತ್ತಿದೆ.

ವ್ಯವಸ್ಥೆ ಬಗ್ಗೆ ದೂರು: ಮೂಲಸೌಕರ್ಯ, ಸಿಬ್ಬಂದಿ ಕೊರತೆ ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಸಂಸ್ಥೆ ವೈದ್ಯರೇ 2023ರ ಸೆಪ್ಟೆಂಬರ್‌ನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದರು. ನಾಲ್ಕು ಪುಟಗಳ ದೂರಿನಲ್ಲಿ ರೋಗಿಗಳಿಗೆ ಕಳಪೆ ಗುಣಮಟ್ಟದ ಚಿಕಿತ್ಸೆ, ಔಷಧಗಳ ಕೊರತೆಯ ಬಗ್ಗೆಯೂ ಪ್ರಸ್ತಾಪಿಸಿದ್ದರು. ವೈದ್ಯಕೀಯ ಶಿಕ್ಷಣ ಇಲಾಖೆಯ ಆದೇಶದ ಮೇರೆಗೆ ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ಅಧ್ಯಕ್ಷತೆಯ ಸಮಿತಿ ತನಿಖೆ ನಡೆಸಿ, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

‘ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಸಂಸ್ಥೆಯ ವೈದ್ಯರು, ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಆದರೆ, ಸೌಲಭ್ಯ ಮತ್ತು ನಿರ್ವಹಣೆ ಕೊರತೆಯಿಂದ ಸಮಸ್ಯೆಯಾಗುತ್ತಿದೆ. ಪೆಟ್ ಸ್ಕ್ಯಾನ್ ಸೇರಿ ವಿವಿಧ ಸೇವೆಗಳು ಸಮರ್ಪಕವಾಗಿ ಸಿಗುತ್ತಿಲ್ಲ. ಇದರಿಂದ ಬೇಸರಗೊಂಡು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೂರು ನೀಡಲಾಗಿತ್ತು. ಆದಷ್ಟು ಬೇಗ ತನಿಖಾ ವರದಿ ಬಹಿರಂಗಪಡಿಸಿ, ವ್ಯವಸ್ಥೆ ಸುಧಾರಣೆಗೆ ಕ್ರಮವಹಿಸಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

3–4ನೇ ಹಂತದಲ್ಲಿ ದಾಖಲು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ದಾಖಲಾತಿ ಪ್ರಕಾರ ಶೇ 50 ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3 ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ.

ಸಂಸ್ಥೆಯ ವಿಶ್ಲೇಷಣೆ ಪ್ರಕಾರ ಕ್ಯಾನ್ಸರ್ ಹೊಸ ಪ್ರಕರಣಗಳ ಸಂಖ್ಯೆಯೂ ಏರುಗತಿ ಪಡೆದಿದೆ. ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್, ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಸ್ತನ ಮತ್ತು ಗರ್ಭಕಂಠದ ಗರ್ಭಾಶಯದ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆ.

> **ಕ್ಯಾನ್ಸರ್ ಪೀಡಿತರು ಅಂತಿಮ ಹಂತದಲ್ಲಿ ಬಂದಾಗ ಉಳಿಸಿಕೊಳ್ಳುವುದು ಕಷ್ಟ. ಖಾಸಗಿ ಆಸ್ಪತ್ರೆಗಳು ಕೈಚೆಲ್ಲಿದಾಗ ಕೆಲವರು ಉಪಶಾಮಕ ಚಿಕಿತ್ಸೆಗೆ ಇಲ್ಲಿಗೆ ಬರುತ್ತಾರೆ.**
> **ಡಾ.ವಿ.ಲೋಕೇಶ್,** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸಂಸ್ಥೆಯಲ್ಲಿ ವರದಿಯಾದ ಮರಣ ಪ್ರಕರಣಗಳು

ವರ್ಷ	ಮರಣ ಪ್ರಕರಣ
2020	634
2021	770
2022	875
2023	1015

ಸಂಸ್ಥೆಯಲ್ಲಿ ಹೊಸದಾಗಿ ನೋಂದಣಿಯಾದ ರೋಗಿಗಳು

ವರ್ಷ	ರೋಗಿಗಳು
2020	13,973
2021	16,316
2022	21,059
2023	21,608



ಬಿಸ್ಕತ್ ಫ್ಯಾಕ್ಟರಿಯಲ್ಲಿ ಬಾಯ್ಲರ್ ಸ್ಫೋಟ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದ ಗುಗ್ಗರಹಟ್ಟಿ ಪ್ರದೇಶದಲ್ಲಿರುವ ಬಿಸ್ಕತ್ ಫ್ಯಾಕ್ಟರಿಯಲ್ಲಿ ಭಾನುವಾರ ಸಂಜೆ ಬಾಯ್ಲರ್ ಸ್ಫೋಟಗೊಂಡು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ಕಾರ್ಮಿಕ ಸಲೀಂ ಮೃತರು. ಘಟನೆಯಲ್ಲಿ ಐವರಿಗೆ ಗಾಯಗಳಾಗಿವೆ. ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದ್ದು, ನಗರದ ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಬಳ್ಳಾರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಬಾಯ್ಲರ್ ಸ್ಫೋಟಗೊಳ್ಳಲು ಕಾರಣ ತಿಳಿದುಬಂದಿಲ್ಲ.

ಬಿಎಂಟಿಸಿ: ಸುಳ್ಳು ವರದಿ ನೀಡಿದ್ದ ಆರೋಪ– ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಜಮೀನು ಒತ್ತುವರಿಯಾಗಿದ್ದರೂ, ‘ಒತ್ತುವರಿಯಾಗಿಲ್ಲ’ ಎಂದು ವರದಿ ನೀಡಿದ್ದಾರೆ ಎಂಬ ಆರೋಪದ ಮೇಲೆ ಬಿಎಂಟಿಸಿ ಸಹಾಯಕ ತಾಂತ್ರಿಕ ಎಂಜಿನಿಯರ್ ಕುಮಾರಸ್ವಾಮಿ ಅವರನ್ನು ಅಮಾನತು ಮಾಡಲಾಗಿದೆ.

ಸಂಸ್ಥೆಯ ಜಮೀನು, ಸ್ವತ್ತು ಪರಿಶೀಲಿಸಿ ವರದಿ ಸಲ್ಲಿಸುವಂತೆ ಬಿಎಂಟಿಸಿ ಸ್ಥಿರಾಸ್ತಿ ಶಾಖೆಯಿಂದ ಸುತ್ತೋಲೆ ಹೊರಡಿಸಲಾಗಿತ್ತು. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೆಟ್ಟದಾಸನಪುರ ಗ್ರಾಮದ ಸರ್ವೆ ನಂಬರ್ 20ರಲ್ಲಿ ಸಂಸ್ಥೆಗೆ ಮಂಜೂರಾಗಿರುವ 5 ಎಕರೆ ಖಾಲಿ ಜಾಗದಲ್ಲಿ ಅನಧಿಕೃತ ಒತ್ತುವರಿ ಆಗಿಲ್ಲ ಎಂದು ಆಗ ಬಿಎಂಟಿಸಿ ಘಟಕ 19ರಲ್ಲಿ (ಎಲೆಕ್ಟ್ರಾನಿಕ್ ಸಿಟಿ) ವ್ಯವಸ್ಥಾಪಕರಾಗಿದ್ದ ಕುಮಾರಸ್ವಾಮಿ 2023ರ ಅಕ್ಟೋಬರ್‌ನಲ್ಲಿ ವರದಿ ನೀಡಿದ್ದರು.

ಸ್ಥಿರಾಸ್ತಿ ಶಾಖೆಯ ಅಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ 1 ಎಕರೆ ಜಮೀನನ್ನು ಎಂ.ನಾರಾಯಣ ಸ್ವಾಮಿ ಅವರು ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದಿತ್ತು. ಈ ಬಗ್ಗೆ ದೂರು ನೀಡಲಾಗಿತ್ತು. ಸಂಸ್ಥೆಯ ಜಮೀನನ್ನು ಖಾಸಗಿ ವ್ಯಕ್ತಿ ಒತ್ತುವರಿ ಮಾಡಿಕೊಂಡಿದ್ದರೂಂ ಸುಳ್ಳು ವರದಿಯನ್ನು ನೀಡುವ ಮೂಲಕ ಕುಮಾರಸ್ವಾಮಿ ಅವರು ಕರ್ತವ್ಯಲೋಪ ಎಸಗಿದ್ದಾರೆ. ಈ ಕಾರಣಕ್ಕಾಗಿ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಿ, ಬಿಎಂಟಿಸಿ ವ್ಯವಸ್ಥಾಪಕರು ಆದೇಶ ಹೊರಡಿಸಿದ್ದಾರೆ.

₹ 1 ಸಾವಿರ ಲಂಚ: ಅಮಾನತು

ಕರ್ತವ್ಯ ನಿಯೋಜನೆ ಮಾಡಲು ಬಸ್ ನಿರ್ವಾಹಕ ಮಂಜುನಾಥ್ ಅವರಿಂದ ₹ 1,000 ಲಂಚ ಪಡೆದ ಆರೋಪದ ಮೇರೆಗೆ ಬಿಎಂಟಿಸಿ ಶಾಂತಿನಗರ ಘಟಕದ ಸಹಾಯಕ ಸಂಚಾರ ವ್ಯವಸ್ಥಾಪಕ ಡಿ.ಎಸ್. ರಾಘವೇಂದ್ರ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಅಮಾನತು ಮಾಡಿದ್ದಾರೆ.

ಘಟಕ 34ರಲ್ಲಿ (ಕೊತ್ತನೂರು ದಿಣ್ಣೆ) ಡಿ.ಎಸ್. ರಾಘವೇಂದ್ರ ಘಟಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಅವರು ಲಂಚ ತೆಗೆದುಕೊಂಡಿದ್ದರು. 2019ರಿಂದ 22ರವರೆಗೆ ಚಾಲನಾ ಸಿಬ್ಬಂದಿಯ ಪೋಲಾ ರಿಜಿಸ್ಟರ್ ನಿರ್ವಹಣೆ ಮಾಡಿರಲಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಮಠಗಳ ಅಭಿವೃದ್ಧಿಗೆ ಅನುದಾನ ನೀಡಿದ ಸಮಾಧಾನ’

ಬ್ಯಾಡಗಿ (ಹಾವೇರಿ ಜಿಲ್ಲೆ): ‘ನಾಡಿನ ಮಠ-ಮಾನ್ಯಗಳ ಮೇಲೆ ಅಪಾರ ಭಕ್ತಿ ಹೊಂದಿರುವ ನಾನು ಮುಖ್ಯಮಂತ್ರಿಯಾಗಿದ್ದಾಗ ರೈತರು ಹಾಗೂ ಮಠಗಳ ಅಭಿವೃದ್ಧಿಗಾಗಿ ಅನುದಾನ ನೀಡಿದ ಸಮಾಧಾನವಿದೆ’ ಎಂದು ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ತಾಲ್ಲೂಕಿನ ಚಿಕ್ಕಬಾಸೂರು ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ‘ಗುರು ಶಿವಯೋಗಿ ಸಿದ್ಧರಾಮೇಶ್ವರರ 851ನೇ ಜಯಂತಿ ಮಹೋತ್ಸವ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಸಾಮಾಜಿಕ ಮತ್ತು ವಚನ ಕ್ರಾಂತಿಗಾಗಿ ನಾಡಿನೆಲ್ಲೆಡೆ ಸಂಚರಿಸಿ ಜನರ ನೀರಿನ ದಾಹ ಇಂಗಿಸುವುದರ ಜೊತೆಗೆ ಕಾಯಕ ನಿಷ್ಠೆ, ಉತ್ತಮ ಆದರ್ಶ ಗುಣಗಳನ್ನು ಸಮಾಜಕ್ಕೆ ನೀಡಿದ ಗುರು ಸಿದ್ಧರಾಮೇಶ್ವರರು ಸದಾ ಪ್ರೇರಕ ಶಕ್ತಿ’ ಎಂದು ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಗವಿಗಂಗಾಧರೇಶ್ವರ ದೇವಾಲಯದ ಬಳಿ ಕಸ ಹಾಕಿರುವುದು

‘ದೇವಸ್ಥಾನದ ಬಳಿ ಕಸದ ರಾಶಿ’

ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇವಾಲಯ ಅತ್ಯಂತ ಪುರಾತನವಾದದ್ದಾಗಿದ್ದು, ಇದನ್ನು ‘ದಕ್ಷಿಣ ಕಾಶಿ’ ಎಂದು ಕರೆಯುತ್ತಾರೆ. ಆದರೆ, ಈ ದೇವಾಲಯದ ಸಮೀಪದಲ್ಲಿಯೇ ಹಲವು ದಿನಗಳಿಂದ ಕಸದ ರಾಶಿ ಹಾಗೇ ಉಳಿದಿದೆ. ಈ ಕಸ ಕೊಳೆತು ನಾರುತ್ತಿದೆ. ದೇವಾಲಯದ ಸಮೀಪದಲ್ಲಿನ ರಸ್ತೆಗಳ ಮೇಲೆ ಲಾರಿಗಳು, ಶಾಲಾ ಬಸ್‌ಗಳು, ಹಳೆಯ ಕಾರುಗಳು ಸೇರಿ ವಿವಿಧ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಕೆಲವು ವಾಹನಗಳು ಹಲವು ತಿಂಗಳಿಂದ ಹಾಗೇ ನಿಂತಿದ್ದು, ದೂಳು ಹಿಡಿದಿವೆ. ಇದರಿಂದ ದೇವಾಲಯದ ಸುತ್ತಮುತ್ತಲೂ ಸಂಚಾರಕ್ಕೆ ಕಷ್ಟವಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ



ಪಾಪರೆಡ್ಡಿ ಪಾಳ್ಯ ವೃತ್ತದಲ್ಲಿ ಮಹಿಳೆಯೊಬ್ಬರು ರಸ್ತೆ ದಾಟಲು ಪರದಾಡುತ್ತಿರುವುದು

‘ರಸ್ತೆ ದಾಟಲು ಪರದಾಟ’

ನಾಗರಬಾವಿ 2ನೇ ಹಂತದ (ಹಳೆಯ ರಿಂಗ್ ರಸ್ತೆ) ಪಾಪರೆಡ್ಡಿ ಪಾಳ್ಯ ವೃತ್ತದಲ್ಲಿ ವಿಪರೀತ ವಾಹನ ದಟ್ಟಣೆ ಉಂಟಾಗುತ್ತಿದೆ. ಇದು ಮಾಗಡಿ ರಸ್ತೆಯಿಂದ ಅಂಬೇಡ್ಕರ್ ಕಾಲೇಜು, ಜ್ಞಾನ ಭಾರತಿ ಮೂಲಕ ಮೈಸೂರು ರಸ್ತೆ ಸಂಪರ್ಕಿಸುವ ಮುಖ್ಯ ರಸ್ತೆಯಾಗಿರುವುದರಿಂದ ವಾಹನಗಳು ವೇಗದಲ್ಲಿ ಚಲಿಸುತ್ತವೆ. ಈ ವೃತ್ತದಲ್ಲಿ ತೀರಾ ಹತ್ತಿರದಲ್ಲಿ ಎರಡು ಕಡೆ ರಸ್ತೆ ವಿಭಜಕಗಳನ್ನು ಅಳವಡಿಸಲಾಗಿದೆ. ಆದರೆ, ಜೀಬ್ರಾ ಕ್ರಾಸಿಂಗ್, ಸಂಚಾರ ದೀಪ, ರಸ್ತೆ ಉಬ್ಬುಗಳು ಇಲ್ಲದೆ ಇರುವುದರಿಂದ ರಸ್ತೆ ದಾಟುವವರು ಪರದಾಡಬೇಕಾಗಿದೆ. ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಗಮನಹರಿಸಿ, ಸಮಸ್ಯೆಯನ್ನು ನಿವಾರಿಸಬೇಕು.

ಚಂದ್ರಕಾಂತ ವಡ್ಡು, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗ ಸ್ವಚ್ಛಗೊಳಿಸಿ’

ರಾಜಾಜಿನಗರದಲ್ಲಿರುವ ಕೆ.ಎಲ್.ಇ ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗ ನಿರ್ವಹಣಾ ಕೊರತೆಯಿಂದ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇದು ಕೊಳೆತು ದುರ್ನಾತ ಬೀರುತ್ತಿದೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬಸವರಾಜ ಹುಡೇದಗಡ್ಡಿ, ರಾಜಾಜಿನಗರ 2ನೇ ಹಂತ



ಕೆ.ಎಲ್‌.ಇ ಸಂಸ್ಥೆಯ ಔಷಧ ವಿಜ್ಞಾನ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗದಲ್ಲಿ ಕಸ ಹಾಕಿರುವುದು

‘ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯ’



ರನ್ನ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯಗಳನ್ನು ಹಾಕಿರುವುದು

ಕೆಂಪಾಪುರ ಹೆಬ್ಬಾಳದ ಪಂಪ ಬಡಾವಣೆಯ ರನ್ನ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯಗಳನ್ನು ಹಾಕಲಾಗಿದೆ. ಹಲವು ದಿನಗಳಿಂದ ಈ ತ್ಯಾಜ್ಯವಿದ್ದು, ಪಾದಚಾರಿಗಳು ಮತ್ತು ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಮಳೆ ಬಂದಲ್ಲಿ ರಸ್ತೆಯಲ್ಲಿ ನೀರು ನಿಲ್ಲುತ್ತದೆ. ಕೆಲವರು ಅಲ್ಲಿಯೇ ಕಸವನ್ನೂ ಎಸೆಯುತ್ತಿದ್ದಾರೆ. ಇದರಿಂದಾಗಿ ಕಸವು ಮಧ್ಯರಸ್ತೆಯನ್ನೂ ಆವರಿಸಿಕೊಳ್ಳುತ್ತಿದೆ. ಆದ್ದರಿಂದ ಸಂಬಂಧಪಟ್ಟವರು ಈ ಬಗ್ಗೆ ಗಮನಿಸಿ, ತ್ಯಾಜ್ಯ ವಿಲೇವಾರಿಗೆ ಕ್ರಮವಹಿಸಬೇಕು.

ಶಿವಪ್ರಸಾದ್ ಎಸ್., ಕೆಂಪಾಪುರ ಹೆಬ್ಬಾಳ

‘ವಾಹನ ಸಂಚಾರ ಕಷ್ಟ’



ಕುಮಾರಪಾರ್ಕ್ ಪಶ್ಚಿಮ ಬಡಾವಣೆಯ ಹತ್ತನೆ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು

ಕುಮಾರಪಾರ್ಕ್ ಪಶ್ಚಿಮ ಬಡಾವಣೆಯ ಹತ್ತನೆ ರಸ್ತೆಯಲ್ಲಿ ಒಳಚರಂಡಿ ಪೈಪ್ ಲೈನ್ ಅಳವಡಿಕೆ ಸಂಬಂಧ ವರ್ಷದ ಹಿಂದೆ ಅಗೆಯಲಾಗಿತ್ತು. ಪೈಪ್ ಲೈನ್ ಅಳವಡಿಕೆ ಬಳಿಕ ಸರಿಯಾಗಿ ಮುಚ್ಚದಿದ್ದರಿಂದ ರಸ್ತೆ ತುಂಬ ಗುಂಡಿಗಳು ಬಿದ್ದಿವೆ. ಇದರಿಂದಾಗಿ ಈ ರಸ್ತೆಯಲ್ಲಿ ಸಂಚಾರ ದುಸ್ತರವಾಗಿದೆ. ದ್ವಿಚಕ್ರ ವಾಹನ ಸವಾರರು ಇಲ್ಲಿ ಬಿದ್ದು, ಗಾಯಗೊಂಡ ಘಟನೆಗಳೂ ನಡೆದಿವೆ. ಇಷ್ಟಾದರೂ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ಮಳೆ ಬಂದಲ್ಲಿ ಇಲ್ಲಿ ನೀರು ನಿಂತು, ರಸ್ತೆ ಹೊಳೆಯಂತಾಗುತ್ತಿದೆ. ಬಿಸಿಲು ಬಂದಲ್ಲಿ ದೂಳು ಆವರಿಸಿಕೊಳ್ಳುತ್ತದೆ. ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು.

ಕುಮಾರಪಾರ್ಕ್ ಹತ್ತನೆ ರಸ್ತೆ ನಿವಾಸಿಗಳು

‘ಅಸಮರ್ಪಕ ನೀರು ಸರಬರಾಜು’

ಬಾಪೂಜಿನಗರದ ನಾಲ್ಕನೆ ಮುಖ್ಯರಸ್ತೆ, ಮೂರನೆ ಮುಖ್ಯರಸ್ತೆ, ಮೂರನೆ ಎ ಮುಖ್ಯರಸ್ತೆ ಮತ್ತು ಮೂರನೆ ಬಿ ಮುಖ್ಯರಸ್ತೆಯ ನಿವಾಸಿಗಳಿಗೆ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿಲ್ಲ. ಈ ಸಮಸ್ಯೆಯನ್ನು ಜಲಮಂಡಳಿಯ ಪಶ್ಚಿಮ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಗಮನಕ್ಕೂ ತರಲಾಗಿತ್ತು. ಆದರೆ, ಈವರೆಗೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಇದರಿಂದ ಸ್ಥಳೀಯ ನಿವಾಸಿಗಳು ಪ್ರತಿನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಈಗಲಾದರೂ ಈ ಬಗ್ಗೆ ಕ್ರಮವಹಿಸಿ, ಸಮಸ್ಯೆ ನಿವಾರಿಸಬೇಕು.

ಪ್ರಸನ್ನ ಚಂದ್ರ, ಬಾಪೂಜಿನಗರ

ಮುಖ್ಯ ಚುನಾವಣಾಧಿಕಾರಿಗೆ ದೂರು

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರರ ನೋಂದಣಿಗೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಅಧಿಕಾರಿಗಳು ಬಾಕಿ ಇರಿಸಿಕೊಂಡು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಜೆಡಿಎಸ್ ಮುಖಂಡ, ವಕೀಲ ಎ.ಪಿ. ರಂಗನಾಥ್ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದ್ದಾರೆ.

ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ಶುಕ್ರವಾರ ದೂರು ಸಲ್ಲಿಸಿರುವ ಅವರು, ‘ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಮತ್ತು ಬಿಬಿಎಂಪಿ ಅಧಿಕಾರಿಗಳು ವಿವಿಧ ಶಿಕ್ಷಣ ಸಂಸ್ಥೆಗಳಿಂದ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತಮ್ಮ ಬಳಿಯೇ ಇರಿಸಿಕೊಂಡಿದ್ದಾರೆ. ಅವುಗಳನ್ನು ಆಯಾ ಪ್ರದೇಶದ ಹೆಚ್ಚುವರಿ ಮತದಾರರ ನೋಂದಣಿ ಅಧಿಕಾರಿಗಳಿಗೆ ಕಳುಹಿಸಿಲ್ಲ’ ಎಂದು ದೂರಿದ್ದಾರೆ.

ಕೆಲವು ಶಾಲೆ, ಪದವಿಪೂರ್ವ ಕಾಲೇಜುಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಸಲ್ಲಿಸಿರುವ ಮತದಾರರ ನೋಂದಣಿ ಅರ್ಜಿಗಳು ಅಧಿಕಾರಿಗಳ ಬಳಿಯೇ ಉಳಿದಿವೆ. ಇದರಿಂದ ಮತದಾರರ ಪಟ್ಟಿಗೆ ಸೇರಲು ಅರ್ಹರಾಗಿರುವವರಿಗೆ ಅನ್ಯಾಯವಾಗಲಿದೆ ಎಂದಿದ್ದಾರೆ.

‘ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಈ ವಿಷಯವನ್ನು ತಂದಿದ್ದರೂ, ಸಮಸ್ಯೆಗೆ ಪರಿಹಾರ ಒದಗಿಸಿಲ್ಲ. ತಾವು ತಕ್ಷಣ ಮಧ್ಯ ಪ್ರವೇಶಿಸಿ ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಿ, ಮತದಾರರ ನೋಂದಣಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಚುನಾವಣಾಧಿಕಾರಿಯವರನ್ನು ಆಗ್ರಹಿಸಿದ್ದಾರೆ.

सत्यमेव जयते
Government of India

ಮೋದಿ ಸರ್ಕಾರ
ಆದಿವಾಸಿಗಳ ಕ್ಷೇಮಾಭಿವೃದ್ಧಿಗೆ ಕಂಕಣಬದ್ಧವಾಗಿದೆ



ಭಾರತದಾದ್ಯಂತ

188 ಜಿಲ್ಲೆಗಳ

ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನದ (ಪಿಎಂ ಜನಮನ)

ಫಲಾನುಭವಿಗಳ ಜೊತೆಗೆ

ಪ್ರಧಾನಮಂತ್ರಿ ನರೇಂದ್ರ ಮೋದಿಯವರ

ಸಂವಾದ

(ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ)

15ನೇ ಜನವರಿ 2024 12:00 ಗಂಟೆ

ಪಿಎಂ ಜನಮನ ಮೂಲಕ ಆದಿವಾಸಿ ಸಮುದಾಯಗಳ ಸಬಲೀಕರಣ

ಪ್ರಧಾನಮಂತ್ರಿ ಆವಾಸ ಯೋಜನಾ (ಗ್ರಾಮೀಣ)

1 ಲಕ್ಷ
ಪಕ್ಕಾ ಮನೆಗಳಿಗೆ ಮಂಜೂರಾತಿ
ವೆಚ್ಚ: ರೂ.2390 ಕೋಟಿ

ಜಲ ಜೀವನ್ ಮಿಷನ್ (ಜೆಜೆಎಂ)

ಇನ್ನುಳಿದ 1830
ಗ್ರಾಮಗಳಿಗೆ ಸ್ವಚ್ಛ ನಲ್ಲಿ ನೀರು ಯೋಜನೆಗೆ ಮಂಜೂರಾತಿ
ವೆಚ್ಚ: ರೂ.220 ಕೋಟಿ

ಸಂಶೋಧಿತ ವಿತರಣಾ ಕ್ಷೇತ್ರ ಯೋಜನೆ

70,000
ಮನೆಗಳಿಗೆ ವಿದ್ಯುತ್ ಸಂಪರ್ಕ
ವೆಚ್ಚ: ರೂ.300 ಕೋಟಿ

ಪಿಎಂ ಜನಮನ ವಿಕಾಸ ಯೋಜನೆ

450
ಬಹುಪಯೋಗಿ ಕೇಂದ್ರಗಳ ಮಂಜೂರಾತಿ
ವೆಚ್ಚ: ರೂ.270 ಕೋಟಿ

ಯೂನಿವರ್ಸಲ್ ಸರ್ವೀಸ್ ಆಬ್ಲಿಗೇಶನ್ ಫಂಡ್

503 ಗ್ರಾಮಗಳನ್ನು ವ್ಯಾಪ್ತಿಗೆ ಪಡೆಯುವ
206
ಮೊಬೈಲ್ ಟವರ್‌ಗಳಿಗೆ ಅನುಮೋದನೆ
ವೆಚ್ಚ: ರೂ.240 ಕೋಟಿ

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ

1200 ಕಿ.ಮೀ.
ರಸ್ತೆಗೆ ಮಂಜೂರಾತಿ
ವೆಚ್ಚ: ರೂ.900 ಕೋಟಿ

ಪಿಎಂ ಜನಜ್ಯೋತಿ ವಿಕಾಸ ಮಿಷನ್

405
ವನ ಧನ ವಿಕಾಸ ಕೇಂದ್ರಗಳ ಮಂಜೂರಾತಿ
ವೆಚ್ಚ: ರೂ.20 ಕೋಟಿ

ಸಮಗ್ರ ಶಿಕ್ಷಣ ಅಭಿಯಾನ

ಆದಿವಾಸಿ ವಿದ್ಯಾರ್ಥಿಗಳಿಗಾಗಿ
100 ಹಾಸ್ಟೇಲ್‌ಗಳು
ವೆಚ್ಚ: ರೂ.275 ಕೋಟಿ

ಅಂಗನವಾಡಿ ಸೇವೆಗಳು

916
ಅಂಗನವಾಡಿ ಕೇಂದ್ರಗಳಿಗೆ ಅನುಮೋದನೆ
ವೆಚ್ಚ: ರೂ.125 ಕೋಟಿ

ನ್ಯಾಷನಲ್ ಹೆಲ್ತ್ ಮಿಷನ್

100
ಮೊಬೈಲ್ ಮೆಡಿಕಲ್ ಘಟಕಗಳನ್ನು ಕ್ರಿಯಾಶೀಲಗೊಳಿಸಲಾಗುತ್ತದೆ
ವೆಚ್ಚ: ರೂ.34 ಕೋಟಿ

8,000ಕ್ಕೂ ಅಧಿಕ ಶಿಬಿರಗಳಲ್ಲಿ
10 ಲಕ್ಷಕ್ಕೂ ಅಧಿಕ ಜನ ಫಲಾನುಭವಿಗಳಾಗಿದ್ದಾರೆ

ಕಿಸಾನ್ ಸಮ್ಮಾನ ನಿಧಿಗೆ
2.5 ಲಕ್ಷ
ಫಲಾನುಭವಿಗಳನ್ನು ಗುರುತಿಸಲಾಗಿದೆ

ಸ್ಯಾಚುರೇಶನ್ ಅಭಿಯಾನದ ಮೂಲಕ
82,000ಕ್ಕೂ
ಅಧಿಕ ಹೊಸ ಆಯುಷ್ಮಾನ್ ಕಾರ್ಡ್‌ಗಳನ್ನು ನೀಡಲಾಗಿದೆ

ಮತ್ತು
70,000
ಹೊಸ ಆಧಾರ್ ಕಾರ್ಡ್‌ಗಳನ್ನು ನೀಡಲಾಗಿದೆ

CBC 43101/13/0019/2324

ಜನಜಾತೀಯ ಸಬಲೀಕರಣ
ವಿಕಸಿತ ಭಾರತ

ಡಿಡಿ ಸುದ್ದಿವಾಹಿನಿಯಲ್ಲಿ ನೇರಪ್ರಸಾರ ವೀಕ್ಷಿಸಿ

ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆಯಿಂದ ವಿನೂತನ ಪ್ರಯತ್ನ

ಪೊಲೀಸರಿಗೆ ಸಿಪಿಆರ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆ ನಗರದ ಕಂಠೀರವ ಒಳಾಂಗಣ ಕ್ರೀಡಾಂಗಣ ದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2,200ಕ್ಕೂ ಅಧಿಕ ಪೊಲೀಸರಿಗೆ ಹೃದಯ ಮತ್ತು ಶ್ವಾಸಕೋಶ ಕಾಯಿಲೆಗೆ ಸಂಬಂಧಿಸಿದ ತರಬೇತಿ (ಸಿಪಿಆರ್) ಹಾಗೂ ಪ್ರಥಮ ಚಿಕಿತ್ಸೆ ಬಗ್ಗೆ ತರಬೇತಿ ನೀಡಲಾಯಿತು.

ಒಂದೇ ಸ್ಥಳದಲ್ಲಿ ಅತೀ ಹೆಚ್ಚು ಮಂದಿಗೆ ತರಬೇತಿ ನೀಡಿದ ಸಂಸ್ಥೆಯ ಈ ಕಾರ್ಯಕ್ಕೆ ವರ್ಲ್ಡ್ ರೆಕಾರ್ಡ್ ಆಫ್ ಲಂಡನ್ ಸಂಸ್ಥೆಯು 'ವಿಶ್ವ ದಾಖಲೆ'ಯ ಪ್ರಮಾಣ ಪತ್ರ ನೀಡಿತು.

ಸಂಸ್ಥೆ ಹಮ್ಮಿಕೊಂಡಿದ್ದ ಈ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಈ ಪ್ರಥಮ ಚಿಕಿತ್ಸೆಯ ತರಬೇತಿಯನ್ನು ಪ್ರತಿಯೊಬ್ಬರೂ ಪಡೆಯಬೇಕು. ಇದರಿಂದ ತುರ್ತು ಸಂದರ್ಭದಲ್ಲಿ ವ್ಯಕ್ತಿಯ ಜೀವ ಉಳಿಸಲು ಸಾಧ್ಯ. ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಈ ಬಗ್ಗೆ ತರಬೇತಿ ನೀಡುವ ಅಗತ್ಯವಿದೆ' ಎಂದು ಹೇಳಿದರು.

'ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಪೊಲೀಸರು ಪ್ರತಿನಿತ್ಯ ವಿವಿಧ ರೀತಿಯ ಘಟನೆಗಳನ್ನು ನೋಡುತ್ತಾರೆ. ಆದ್ದರಿಂದ ಪ್ರಥಮ ಚಿಕಿತ್ಸೆ ಬಗ್ಗೆ ಅವರಿಗೆ ತರಬೇತಿ ನೀಡುವುದು ಅತ್ಯಗತ್ಯ. ಬಸ್ ನಿಲ್ದಾಣ ಸೇರಿ ವಿವಿಧ ಸಾರ್ವಜನಿಕ ಸ್ಥಳದಲ್ಲಿ ಹೃದಯಾಘಾತ ಸಂಭವಿಸಿದಲ್ಲಿ ವ್ಯಕ್ತಿಯ ಜೀವ ಉಳಿಸಲು ಸಾಧ್ಯ ವಾಗುತ್ತದೆ' ಎಂದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ಸಿಪಿಆರ್ ಹಾಗೂ ಪ್ರಥಮ ಚಿಕಿತ್ಸೆ ತರಬೇತಿಯು ಜೀವ ಉಳಿಸಲು ಸಹಕಾರಿಯಾಗಲಿದೆ. ನಮ್ಮ ಸಿಬ್ಬಂದಿ ಯನ್ನು ರಕ್ಷಿಸಲು ಸಹ ಇದರಿಂದ ಸಾಧ್ಯವಾಗಲಿದೆ. ಸಾಮಾನ್ಯ ನಾಗರಿಕರ ರಕ್ಷಣೆಗೂ ಇದು ಪ್ರಯೋಜನಕಾರಿ' ಎಂದರು.

ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆ ಅಧ್ಯಕ್ಷ ಡಾ. ರಾಜಶೇಖರ್ ಸಿ. ಜಕ್ಕಾ, 'ಹಠಾತ್ ಹೃದಯಾಘಾತದ ಸಂದರ್ಭದಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಿಪಿಆರ್ ಸಹಾಯಕ. ನಮ್ಮ ಸಂಸ್ಥೆಯ 50ನೇ ವರ್ಷಾಚರಣೆ ಪ್ರಯುಕ್ತ ವರ್ಷ ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.



ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪೊಲೀಸರಿಗೆ ಸಿಪಿಆರ್ ತರಬೇತಿ ನೀಡಲಾಯಿತು – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- 2,200ಕ್ಕೂ ಅಧಿಕ ಪೊಲೀಸರು ತರಬೇತಿಯಲ್ಲಿ ಭಾಗಿ
- ವರ್ಲ್ಡ್ ರೆಕಾರ್ಡ್ ಆಫ್ ಲಂಡನ್ ಸಂಸ್ಥೆಯಿಂದ ವಿಶ್ವ ದಾಖಲೆಯ ಪ್ರಮಾಣ ಪತ್ರ

ಸಂಚಾರ ನಿಯಮಗಳ ಅರಿವು ಮೂಡಿಸಲು ಧರೆಗಿಳಿದ ಯಮ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸು ವುದಕ್ಕಾಗಿ ಉಪ್ಪಾರಪೇಟೆ ಸಂಚಾರ ಪೊಲೀಸರು ನಗರದಲ್ಲಿ ಭಾನುವಾರ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ನಗರದ ಮೈಸೂರು ಬ್ಯಾಂಕ್ ವೃತ್ತ ದಲ್ಲಿ ಗುಬ್ಬಿ ವೀರಣ್ಣ ಕಂಪನಿಯ ರಂಗಭೂಮಿ ಕಲಾವಿದ ನಾಗೇಂದ್ರ ಯಮರಾಜನ ವೇಷ ಧರಿಸಿದರೆ, ರಂಗಪ್ಪ ಅವರು ಚಿತ್ರಗುಪ್ತನ ವೇಷ ಧರಿಸಿ ಗಮನ ಸೆಳೆದರು. ಕೈಯಲ್ಲೊಂದು ಗದೆ ಹಿಡಿದು ಓಡಾಡಿ ಸವಾರರಿಗೆ ಸಂಚಾರ ನಿಯಮಗಳ ಅರಿವು ಮೂಡಿಸಿದರು.

ವಾಹನಗಳನ್ನು ತಡೆದು ನಿಲ್ಲಿಸಿದ್ದ ಯಮ ಮತ್ತು ಚಿತ್ರಗುಪ್ತ ವೇಷಧಾರಿ, ಪ್ರತಿಯೊಬ್ಬರಿಗೂ ಗುಲಾಬಿ ಹೂವು ನೀಡಿ ನಿಯಮ ಪಾಲಿಸುವಂತೆ ಮನವಿ ಮಾಡಿದರು. ಹೆಲ್ಮೆಟ್ ಧರಿಸದ ಹಾಗೂ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಬೈಕ್ ಓಡಿಸುತ್ತಿದ್ದ ಸವಾರರನ್ನು ಬೆನ್ನಟ್ಟಿ ಹಿಡಿದರು. ರಸ್ತೆಯಲ್ಲೇ ಅವರಿಗೆ ಸಂಚಾರ ನಿಯಮಗಳ ಪಾಠ ಮಾಡಿದರು. 'ತಲೆ ಹುಷಾರು... ಇಲ್ಲದಿದ್ದರೆ ನನ್ನ ಲೋಕಕ್ಕೆ ಬರುತ್ತಿಯಾ' ಎಂದು ಹಾಸ್ಯವಾಗಿ ಹೇಳಿ ಗುಲಾಬಿ ಹೂವು ಕೊಟ್ಟು ಬೀಳ್ಕೊಟ್ಟರು.

ಕಲಾವಿದ ನಾಗೇಂದ್ರ, 'ಪ್ರತಿಯೊಬ್ಬರ ಜೀವವೂ ಅಮೂಲ್ಯವಾದದ್ದು. ಮನೆಯಿಂದ ಹೊರಗೆ ಬಂದ ಸವಾರರು, ವಾಪಸ್ ಹೋಗುವವರೆಗೂ ಕುಟುಂಬದವರು ಕಾಯುತ್ತಿರುತ್ತಾರೆ. ಸಂಚಾರ ನಿಯಮಗಳನ್ನು ಪಾಲಿಸಿದರೆ ಎಲ್ಲರ ಜೀವನ ಸುಖಕರವಾಗಿರುತ್ತದೆ' ಎಂದು ಹೇಳಿದರು.



ಮೈಸೂರು ಬ್ಯಾಂಕ್ ವೃತ್ತದಲ್ಲಿ ಹೆಲ್ಮೆಟ್ ಧರಿಸದ ಸವಾರನೊಬ್ಬನಿಗೆ ಜಾಗೃತಿ ಮೂಡಿಸಿದ ಯಮ ವೇಷಧಾರಿ

ಬಸ್ ನಿರ್ವಾಹಕಿಗೆ ಪರಚಿದ ಮಹಿಳೆ

ಬೆಂಗಳೂರು: ಮಹಿಳಾ ಪ್ರಯಾಣಿಕರೊಬ್ಬರು ಬಿಎಂಟಿಸಿ ನಿರ್ವಾಹಕಿಯ ಮುಖವನ್ನು ಪರಚಿ, ಹಲ್ಲೆ ಮಾಡಿದ್ದು ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚಿಕ್ಕಬಾಣಾವರದ ನಿವಾಸಿ ಮೋನಿಶಾ (30) ಆರೋಪಿ. ಬಿಎಂಟಿಸಿ ಬಸ್‌ನಲ್ಲಿ ದಾಸರಹಳ್ಳಿಯಿಂದ ಮೆಜೆಸ್ಟಿಕ್‌ಗೆ ತೆರಳುತ್ತಿದ್ದ ಮೋನಿಶಾ ಟಿಕೆಟ್ ಪಡೆಯುವ ಬದಲು ಮೊಬೈಲ್‌ನಲ್ಲಿ ಮಾತನಾಡುವುದರಲ್ಲಿ ನಿರತರಾಗಿದ್ದರು. ಆಧಾರ್ ಕಾರ್ಡ್ ತೋರಿಸಿ ಟಿಕೆಟ್ ಪಡೆಯುವಂತೆ ನಿರ್ವಾಹಕಿ ಪದೇ ಪದೇ ಹೇಳಿದಾಗ ಸಿಟ್ಟಿಗೆದ್ದ ಮೋನಿಶಾ ಜಗಳಕ್ಕೆ ಇಳಿದಿದ್ದಾರೆ. ಬಳಿಕ ಮೋನಿಶಾ ನಿರ್ವಾಹಕಿಯನ್ನು ತಳ್ಳಿ ಮುಖಕ್ಕೆ ಪರಚಿದ್ದಾರೆ. ನಿರ್ವಾಹಕಿ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಾಗಲಗುಂಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಫೆ.1ಕ್ಕೆ ಜನಾಗ್ರಹ ಧರಣಿ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಹಾಗೂ ರಾಜ್ಯದ ಎಲ್ಲ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಎಐಟಿಯುಸಿ ರಾಜ್ಯ ಸಮಿತಿಯು 'ಬಜೆಟ್ ಪೂರ್ವ ಜನಾಗ್ರಹ' ಧರಣಿ ಸತ್ಯಾಗ್ರಹವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಫೆ.1ರಂದು ಮಧ್ಯಾಹ್ನ 3ಕ್ಕೆ ಹಮ್ಮಿಕೊಂಡಿದೆ.

ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ನಾಲ್ಕು ನಿಗಮಗಳ ಕಾರ್ಮಿಕರಿಗೆ ನಾಲ್ಕು ವರ್ಷಗಳಿಂದ ನೀಡಬೇಕಿರುವ ವೇತನ ಹೆಚ್ಚಳದ ಬಾಕಿ, ತುಟ್ಟಿಭತ್ಯೆ ಬಾಕಿ, ರಜೆ ನಗದೀಕರಣದ ಬಾಕಿ, ಭವಿಷ್ಯನಿಧಿ, ಜೀವವಿಮಾ ಕಂತು, ಸಹಕಾರ ಸಂಘಗಳ ವಂತಿಗೆ ಬಾಕಿ ಹಾಗೂ ಶಕ್ತಿ ಯೋಜನೆಯ ಅನುಷ್ಠಾನದ ಬಾಕಿ ಹಣ ಕೂಡಲೇ ಬಿಡುಗಡೆ ಮಾಡಬೇಕು. ಶಕ್ತಿಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲಕ ಹಾಗೂ ನಿರ್ವಾಹಕರಿಗೆ ನಿತ್ಯ ಆಗುತ್ತಿರುವ ಕಿರುಕುಳಗಳನ್ನು ತಪ್ಪಿಸಲು ಜಂಟಿ ಕ್ರಿಯಾ ಸಮಿತಿಯ ಜೊತೆ ಸಂಧಾನ ನಡೆಸಿ, ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

'ಅಪಘಾತ ನಡೆಸಿ ಪರಾರಿ' ಪ್ರಕರಣದಲ್ಲಿ 10 ವರ್ಷ ಜೈಲು ಹಾಗೂ ₹7 ಲಕ್ಷ ದಂಡ ವಿಧಿಸುವ ಕೇಂದ್ರ ಸರ್ಕಾರದ ರಸ್ತೆ ಸಂಚಾರ ಕಾನೂನು ತಿದ್ದುಪಡಿಯನ್ನು ರದ್ದು ಮಾಡಲು ರಾಜ್ಯ ಸರ್ಕಾರ ಒತ್ತಾಯ ಮಾಡಬೇಕು. ನಿಗಮಗಳ ಎಲ್ಲ ಘಟಕಗಳಲ್ಲಿ ವಾಹನಗಳನ್ನು ಸ್ವಚ್ಛಗೊಳಿಸುತ್ತಿರುವ ಕಾರ್ಮಿಕರನ್ನು ಕಾಯಂಗೊಳಿಸಬೇಕು. ಎಲ್ಲ ಕಾರ್ಮಿಕರಿಗೆ ಶೇ 8.33ರಷ್ಟು ಬೋನಸ್ ನೀಡಬೇಕು ಎಂದು ಆಗ್ರಹಿಸಲಾಯಿತು.

ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್, ಗೌರವಾಧ್ಯಕ್ಷ ಸಿದ್ದನಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ ಡಿ.ಎ., ಕಾರ್ಯಾಧ್ಯಕ್ಷರಾದ ಜಿ.ಟಿ. ರಂಗೇಗೌಡ, ಎಂ. ವಿಜಯಕುಮಾರ್, ಸಿದ್ಧಪ್ಪ ಪಾಲ್ಕಿ, ಆರ್.ಎಫ್. ಕವಳಿಕಾಯಿ ಭಾಗವಹಿಸಿದ್ದರು.

ಬೈಕ್ ಉರುಳಿ ಬಿದ್ದು ಹಿಂಬದಿ ಸವಾರ ಸಾವು

ಬೆಂಗಳೂರು: ಸುಮನಹಳ್ಳಿ ಹೊರವರ್ತುಲ ರಸ್ತೆಯ ಮಾಳಗಾಳ ಮೇಲ್ಸೇತುವೆ ಮೇಲೆ ಭಾನುವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ಸ್ಕೂಟರ್ ಪಲ್ಟಿಯಾಗಿದ್ದು, ಹಿಂಬದಿ ಸವಾರ ಮೃತಪಟ್ಟಿದ್ದಾರೆ.

ಉತ್ತರಾಖಂಡದ ನಿವಾಸಿ ದಿನೇಶ್ ಭಟ್ (34) ಮೃತಪಟ್ಟವರು. ನೇಪಾಳದ ಟೀಕರಾಜ ಭಟ್ (33) ಗಾಯಗೊಂಡಿದ್ದಾರೆ. ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದೆ.

'ದಿನೇಶ್ ಭಟ್ ಖಾಸಗಿ ಕಾಲೇಜಿನ ಕ್ಯಾಂಟಿನ್‌ನಲ್ಲಿ ಅಡುಗೆ ಕೆಲಸ ಮಾಡುತ್ತಿದ್ದರು. ಟೀಕಾರಾಜ ಭಟ್ ಅವರೊಂದಿಗೆ ಸುಮನಹಳ್ಳಿ ಹೊರ ವರ್ತುಲ ರಸ್ತೆಯಲ್ಲಿ ನಾಯಂಡಹಳ್ಳಿಯಿಂದ ತುಮಕೂರು ರಸ್ತೆಯ ಕಡೆಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಮಾಳಗಾಳ ಮೇಲ್ಸೇತುವೆಯಲ್ಲಿ ಸವಾರನ ನಿಯಂತ್ರಣ ತಪ್ಪಿ ಸ್ಕೂಟರ್ ಪಲ್ಟಿಯಾಯಿತು. ಹಿಂಬದಿ ಸವಾರ ದಿನೇಶ್ ಭಟ್ ರಸ್ತೆಗೆ ಬಿದ್ದಿದ್ದು, ಹಿಂದಿನಿಂದ ಬಂದ ಇನ್ನೊಂದು ವಾಹನದ ಚಕ್ರ ಅವರ ಮೇಲೆ ಹರಿದಿದೆ. ಅವರು ಸ್ಥಳದಲ್ಲಿಯೇ ಮೃತ ಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ದಿನೇಶ್ ಭಟ್ ಅವರ ಮೃತದೇಹವನ್ನು ನೋಡಿ ಗಾಬರಿಗೊಂಡ ಟೀಕರಾಜ ಭಟ್ ಮೇಲ್ಸೇತುವೆಯಿಂದ ಕೆಳಗೆ ಹಾರಿದ್ದು, ಕಾಲಿಗೆ ಗಾಯಗಳಾಗಿವೆ. ಸ್ಕೂಟರ್ ಸವಾರ ಮದ್ಯಸೇವಿಸಿ ಸ್ಕೂಟರ್ ಚಲಾಯಿಸಿದ್ದರಿಂದ ಅಪಘಾತ ಉಂಟಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಜಕ್ಕೂರು ಮೈದಾನದಲ್ಲಿ ಜನಪದ ಕಲೆಗಳ ಅನಾವರಣ

'ಸುಗ್ಗಿ–ಹುಗ್ಗಿ' ಸಂಕ್ರಾಂತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಅಲಂಕೃತಗೊಂಡಿದ್ದ ಎತ್ತುಗಳು, ರಾಶಿಪೂಜೆ, ಚಿತ್ತಾರದ ರಂಗೋಲಿಗಳು, ಬಾನಂಗಳಲ್ಲಿ ಹಾರಾಡಿದ ಗಾಳಿಪಟಗಳು, ಹಳ್ಳಿ ಆಟಗಳು, ಜಾನಪದ ಕಲೆಗಳ ಅನಾವರಣ, ಕರಕುಶಲ ವಸ್ತುಗಳು, ಸಿರಿಧಾನ್ಯಗಳ ಉತ್ಪನ್ನಗಳು ಮತ್ತು ತಿಂಡಿ–ತಿನಿಸುಗಳ ಮಾರಾಟ, ಅಲಂಕೃತಗೊಂಡಿದ್ದ ಎತ್ತಿನ ಬಂಡಿಯಲ್ಲಿ ಸವಾರಿಮಾಡಿ ಖುಷಿಪಟ್ಟ ನಾಗರಿಕರು....

ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆ.ಬಿ.ಜಿ ಸ್ವಯಂಸೇವಕರ ತಂಡದ ಸಹಯೋಗದಲ್ಲಿ ಜಕ್ಕೂರಿನ ಅರ್ಕಾವತಿ ಬಡಾವಣೆಯ ಮೈದಾನದಲ್ಲಿ ಆಯೋಜಿಸಿದ್ದ 'ಸುಗ್ಗಿ–ಹುಗ್ಗಿ' ಕಾರ್ಯ ಕ್ರಮದಲ್ಲಿ ಕಂಡುಬಂದ ದೃಶ್ಯಗಳಿವು.

ಮೈದಾನದಲ್ಲಿ ಗ್ರಾಮೀಣ ಸೊಗಡಿನ ಸಂಕ್ರಾಂತಿ ಹಬ್ಬದ ವಾತಾವರಣವೇ ಮನೆಮಾಡಿತ್ತು. ಮಕ್ಕಳು ಮತ್ತು ಪೋಷಕರು ಗಾಳಿಪಟಗಳನ್ನು ಹಾರಿಸಿ ಖುಷಿಪಟ್ಟರು. ಅಲಂಕೃತಗೊಂಡಿದ್ದ ಎತ್ತಿನ ಬಂಡಿ, ಎತ್ತುಗಳು ಹಾಗೂ ಕುರಿ ಮತ್ತು ಮೇಕೆಗಳು ಜನರ ಗಮನ ಸೆಳೆದವು.

ಜನರು ಎಳ್ಳು–ಬೆಲ್ಲ, ಬೇಯಿಸಿದ ಕಡಲೆಕಾಯಿ, ಅವರೆಕಾಯಿ, ಗೆಣಸು, ಕಬ್ಬಿನ ಜಲ್ಲೆ, ಸ್ಥಳದಲ್ಲೇ ತಯಾರಿಸಿದ ಸಿಹಿ–ಖಾರ ಪೊಂಗಲ್ ರುಚಿಯನ್ನು ಸವಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಹಳ್ಳಿ ಸೊಗಡಿನ ಅನ್ನ, ಕಾಳುಸಾರು, ಮೊಸರನ್ನ ಹಾಗೂ ಸಿಹಿ ಪೊಂಗಲ್ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಕುಟುಂಬ ಸದಸ್ಯರೆಲ್ಲರೂ ಅಲಂಕೃತ ಎತ್ತಿನ ಬಂಡಿಯಲ್ಲಿ ಕುಳಿತು ಸವಾರಿ ಮಾಡಿ ಸಂಭ್ರಮಿಸಿದರು.

ರಾಶಿಪೂಜೆ: ಕಬ್ಬಿನ ಜಲ್ಲೆ, ಅಲಂಕಾರಿಕ ಮಡಕೆಗಳು, ನವಧಾನ್ಯ ಮತ್ತು ಸಿರಿಧಾನ್ಯಗಳು, ಮನೆಯಲ್ಲಿ ಬಳಸುತ್ತಿದ್ದ ಹಳೆಯಕಾಲದ ಸಾಮಗ್ರಿಗಳು ಹಾಗೂ ರೈತರು ಬಳಸುತ್ತಿದ್ದ ಕೃಷಿ ಸಾಮಾಗ್ರಿಗಳಿಂದ ಅಲಂಕರಿಸಿದ್ದ ರಾಶಿಪೂಜೆಯು ಜನರನ್ನು ಆಕರ್ಷಿಸಿತು.

ಸಿರಿಧಾನ್ಯ, ಕೃತಕ ಆಭರಣಗಳು, ತೆಂಗಿನ ಚಿಪ್ಪಿನಿಂದ ತಯಾರಿಸಿದ ಅಲಂಕಾರಿಕ ವಸ್ತುಗಳು, ಇಳಕಲ್ ಸೀರೆ, ಮಂಡ್ಯ ಕೃಷಿ ಇಲಾಖೆಯ ಬೆಲ್ಲದ ಪರಿಷೆ ಸೇರಿದಂತೆ 100ಕ್ಕೂ ಹೆಚ್ಚು ಮಳಿಗೆಗಳಿದ್ದವು. ಹಣ್ಣುಗಳ ಐಸ್ ಕ್ರೀಂ, ಶೇಂಗಾ ಹೋಳಿಗೆ ಸೇರಿದಂತೆ ತಿಂಡಿತಿನಿಸುಗಳ ಮಾರಾಟ ಜೋರಾಗಿ ನಡೆಯಿತು. ಗಾಯಕ ರಘು ದೀಕ್ಷಿತ್ ತಂಡದಿಂದ ಸಂಜೆ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ರಾಸುಗಳಿಂದ ಕಿಚ್ಚುಹಾಯಿಸಲಾಯಿತು.

ಈ ವೇಳೆ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ನಗರ ಪ್ರದೇಶದವರಿಗೆ ಗ್ರಾಮೀಣ ಸಂಸ್ಕೃತಿ ಮತ್ತು ಜಾನಪದ ಕಲೆಗಳನ್ನು ಪರಿಚಯಿಸುವ ಉದ್ದೇಶದಿಂದ ಕ್ಷೇತ್ರದಲ್ಲಿ ಪ್ರತಿವರ್ಷ ಸುಗ್ಗಿ – ಹುಗ್ಗಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಎನ್.ಕೆ.ಮಹೇಶ್ ಕುಮಾರ್, ಶಿವರಾಜ್, ಪಿ.ವಿ.ಮಂಜುನಾಥಬಾಬು, ವಿ.ವಿ.ಪಾರ್ತಿಬರಾಜನ್, ಟಿ.ಜಿ.ಚಂದ್ರು, ಎಂ.ಹನುಮಂತೇಗೌಡ, ಎಂ.ಆನಂದ್, ಆರ್.ಎಂ.ಶ್ರೀನಿವಾಸ್ ಮತ್ತಿತರರಿದ್ದರು.



ರಾಶಿಪೂಜೆ ನೆರವೇರಿಸುವ ಮೂಲಕ 'ಸುಗ್ಗಿ–ಹುಗ್ಗಿ' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ: ಪ್ರತಿಕೂಲ ಹವಾಮಾನ

44 ವಿಮಾನ ಹಾರಾಟ ವಿಳಂಬ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ಭಾನುವಾರ 44 ವಿಮಾನಗಳ ಸಂಚಾರ ವ್ಯತ್ಯಯವಾಗಿದೆ.

ವಿಮಾನ ನಿಲ್ದಾಣದ ಸುತ್ತಮುತ್ತ ಮುಂಜಾನೆ ದಟ್ಟವಾದ ಮಂಜು ಕವಿದಿದ್ದರಿಂದ ರನ್ ವೇ ಗೋಚರಿಸು-ತ್ತಿರಲಿಲ್ಲ. ಇದರಿಂದ ಬೆಳಗಿನ ಜಾವ 3 ಗಂಟೆಯಿಂದ 8.30ರವರೆಗೂ ಯಾವ ವಿಮಾನವೂ ಹಾರಾಟ ನಡೆಸಲಿಲ್ಲ. ದೆಹಲಿಗೆ ತೆರಳಬೇಕಿದ್ದ ಏಳು ವಿಮಾನಗಳು ತಡವಾಗಿ ಸಂಚರಿಸಿದವು ಎಂದು ವಿಮಾನ ನಿಲ್ದಾಣ ಪ್ರಾಧಿಕಾರ ತಿಳಿಸಿದೆ.

ಬೆಂಗಳೂರಿನಿಂದ ತೆರಳಬೇಕಿದ್ದ ಹೆಚ್ಚಿನ ವಿಮಾನಗಳು ನಿಗದಿತ ಸಮಯಕ್ಕಿಂತ ಬಹಳ ತಡವಾಗಿ ಸಂಚರಿಸಿದ್ದರಿಂದ ಪ್ರಯಾಣಿಕರು ಸಂಕಷ್ಟಕ್ಕೆ ಒಳಗಾದರು. ಎರಡೂ ಟರ್ಮಿನಲ್‌ಗಳಲ್ಲಿ ಪ್ರಯಾಣಿಕರ ದಟ್ಟಣೆ ಕಂಡುಬಂತು.

ಹೈದರಾಬಾದ್‌ನಿಂದ ಬೆಂಗಳೂರಿಗೆ ಮಾರ್ಗ ಬದಲಾವಣೆ ಮಾಡಿದ ವಿಮಾನಗಳು ಸಹ ರನ್ ವೇ ಗೋಚರಿಸದೆ ಕೆಲ ಹೊತ್ತು ವಿಮಾನ ನಿಲ್ದಾಣದ ಸುತ್ತ ಸುತ್ತಬೇಕಾಯಿತು.

ದೆಹಲಿ, ಚೆನ್ನೈನಲ್ಲೂ ವ್ಯತ್ಯಯ

ನವದೆಹಲಿ/ಚೆನ್ನೈ (ಪಿಟಿಐ): ದೆಹಲಿಯಲ್ಲಿ ಕವಿದ ಹೊಂಜಿನ ಕಾರಣಕ್ಕೆ ಮತ್ತು ಚೆನ್ನೈನಲ್ಲಿ ಭೋಗಿ ಹಬ್ಬದ ವೇಳೆ ಆವರಿಸಿದ ದಟ್ಟ ಹೊಗೆಯಿಂದಾಗಿ ಶನಿವಾರ ಹಲವು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಈ ಎರಡು ನಗರಗಳ ನಿಲ್ದಾಣಗಳಲ್ಲಿ ಇಳಿಯಬೇಕಿದ್ದ ಕೆಲವು ವಿಮಾನಗಳ ಮಾರ್ಗ ಬದಲಾವಣೆ ಮಾಡಿ, ಬೇರೆ ನಿಲ್ದಾಣಗಳಲ್ಲಿ ಇಳಿಸಲಾಗಿದೆ. ಅಲ್ಲದೆ, 100ಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲೂ ವಿಳಂಬವಾಗಿದೆ.



ರಾಜಧಾನಿಯಲ್ಲಿ ದಟ್ಟ ಮಂಜು ಕವಿದು ಪ್ರತಿಕೂಲ ಹವಾಮಾನ ಉಂಟಾಗಿದ್ದರಿಂದ ಭಾನುವಾರ ಬೆಳಿಗ್ಗೆ ದೆಹಲಿ ವಿಮಾನ ನಿಲ್ದಾಣದಲ್ಲಿ 10 ವಿಮಾನಗಳ ಮಾರ್ಗ ಬದಲಾಯಿಸಲಾಗಿದೆ. ಸುಮಾರು 100 ವಿಮಾನಗಳ ಕಾರ್ಯಾಚರಣೆ ವಿಳಂಬವಾಗಿದೆ. ಕೆಲವು ವಿಮಾನಗಳ ಸಂಚಾರ ರದ್ದುಗೊಳಿಸಲಾಗಿದೆ. ಎರಡು ಅಂತರರಾಷ್ಟ್ರೀಯ ವಿಮಾನಗಳು ಸೇರಿ ಒಟ್ಟು 10 ವಿಮಾನಗಳನ್ನು ಬೆಳಿಗ್ಗೆ 4.30 ರಿಂದ ಮಧ್ಯಾಹ್ನ 12 ಗಂಟೆಯ ನಡುವೆ ಜೈಪುರಕ್ಕೆ ಮಾರ್ಗ ಬದಲಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಲೀಲಾವತಿ ಸ್ಮಾರಕ ನಿರ್ಮಾಣಕ್ಕೆ ಸಹಕಾರ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಮೇರು ನಟಿ ಲೀಲಾವತಿ ಅವರ ಸ್ಮಾರಕ ನಿರ್ಮಾಣಕ್ಕೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ’ ಎಂದು ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ತಾಲ್ಲೂಕಿನ ಸೋಲದೇವನಹಳ್ಳಿ-ಯಲ್ಲಿರುವ ತಮ್ಮ ತೋಟದಲ್ಲಿ ನಟ ವಿನೋದ್‌ರಾಜ್ ಅವರು ₹60 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಲೀಲಾವತಿ ಅವರ ಸ್ಮಾರಕ ನಿರ್ಮಾಣಕ್ಕೆ ಭಾನುವಾರ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

’ತುಂಬು ಜೀವನ ನಡೆಸಿದ ಲೀಲಾವತಿ ಅವರು ಅನುಕರಣೀಯ ಸಂದೇಶದ ಪಾತ್ರಗಳ ಮೂಲಕ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ’ ಎಂದರು.

ನಟ ವಿನೋದ್ ರಾಜ್ ಅವರು, ಲೀಲಾವತಿ ಸ್ಮಾರಕದ ರೂಪುರೇಷೆ ಬಗ್ಗೆ ವಿವರಿಸಿ, ಸ್ಮಾರಕದ ನೀಲನಕ್ಷೆಯನ್ನು ಪ್ರದರ್ಶಿಸಿದರು. ’ಅಗತ್ಯ ಬಿದ್ದಾಗ ಸರ್ಕಾರದ ಸಹಕಾರ ಕೋರುತ್ತೇನೆ. ಸ್ಮಾರಕದ ಸುತ್ತಲೂ ತಾಯಿಯವರು ನಟಿಸಿರುವ ಸಿನಿಮಾಗಳ ಪೋಟೊಗಳು ಹಾಗೂ ಅವರಿಗೆ ಸಂದಿರುವ ಪ್ರಶಸ್ತಿ ಪುರಸ್ಕಾರಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು ನನ್ನ ಕನಸಾಗಿದೆ’ ಎಂದರು.

ತಹಶೀಲ್ದಾರ್ ಅಮೃತ್ ಅತ್ರೇಶ್, ನಾಗರತ್ನಮ್ಮ ಭಾಗವಹಿಸಿದ್ದರು.

ಶೀಘ್ರ ಜನಸಂಪರ್ಕ ಸಭೆ: ಭರವಸೆ

’ಅರಣ್ಯ ಇಲಾಖೆಯವರು ಈ ಭಾಗದಲ್ಲಿನ ರೈತರನ್ನು ಒಕ್ಕಲೆಬ್ಬಿಸುತ್ತಿ-ದ್ದಾರೆ. 1919ರ ಕಂದಾಯ ಕಾಯ್ದೆ ಅನ್ವಯ ಮಂಜೂರಾದ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದ ನಮಗೆ, ಇಲಾಖೆಯವರು ಮೇಲಿಂದ ಮೇಲೆ ತೊಂದರೆ ಕೊಡುತ್ತಿದ್ದಾರೆ’ ಎಂದು ರೈತರೊಬ್ಬರು ಸಚಿವ ಕೆ.ಎಚ್.ಮುನಿಯಪ್ಪ ಅವರ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಅರಣ್ಯ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಸರ್ವೆ ಮಾಡಿಸಿ ರೈತರ ಹಿತ ಕಾಪಾಡುವ ಭರವಸೆ ನೀಡಿದರು. ಪೌತಿ ಖಾತೆ, ಪೋಡಿ ಹಾಗೂ ಇತರೆ ಸಮಸ್ಯೆಗಳನ್ನು ಬಗೆಹರಿಸಲು ಶೀಘ್ರವೇ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಜನಸಂಪರ್ಕ ಸಭೆ ನಡೆಸುವುದಾಗಿ ತಿಳಿಸಿದರು.

ಶಾಸಕ ಎನ್.ಶ್ರೀನಿವಾಸ್ ಮಾತನಾಡಿ, ‘ಪ್ರತಿ ಶುಕ್ರವಾರ ತಹಶೀಲ್ದಾರ್ ಕಚೇರಿಯಲ್ಲಿ ಜನಸಂಪರ್ಕ ಸಭೆ ನಡೆಸುತ್ತಿದ್ದೇನೆ. ಈ ಭಾಗದ ರೈತರ ಸಮಸ್ಯೆಗಳ ಬಗ್ಗೆ ದೂರುಗಳು ಬಂದಿಲ್ಲ’ ಎಂದರು.



ಸ್ಮಾರಕ ನಿರ್ಮಾಣಕ್ಕೆ ವಿನೋದ್‌ರಾಜ್ ದಂಪತಿ ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕಿಸಾನ್ ಸಂಘಟನೆ ರಾಜ್ಯ ಉಪಾಧ್ಯಕ್ಷ ಕೆ.ಭೀಮಯ್ಯ, ಚಿಕ್ಕಣ್ಣ, ಮಿಲ್ಟ್ರಿ ಮೂರ್ತಿ, ಸಚಿವ ಕೆ.ಎಚ್.ಮುನಿಯಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ಗೌಡ, ತಾಲ್ಲೂಕು ಅಧ್ಯಕ್ಷ ವಜ್ರಘಟ್ಟ ನಾಗರಾಜು, ಪುರಸಭೆ ಮಾಜಿ ಅಧ್ಯಕ್ಷ ನಾರಾಯಣಗೌಡ ಭಾಗವಹಿಸಿದ್ದರು

ಜೈನ ಅಭಿವೃದ್ಧಿ ಮಂಡಳಿ ರಚಿಸಲು ಸಿ.ಎಂ.ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ ಸಮುದಾಯದ ಅಭಿವೃದ್ಧಿಗಾಗಿ ಮಂಡಳಿ ಅಥವಾ ನಿಗಮ ರಚಿಸಬೇಕು ಎಂದು ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ’ ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ತಿಳಿಸಿದರು.


‘ಉತ್ತರ ಕರ್ನಾಟಕ ಜೈನ ಬಾಂಧವರು’ ಸಂಘಟನೆ ಮತ್ತು ಕರ್ನಾಟಕ ಪುರಾತತ್ವ ಮತ್ತು ಸಾಹಿತ್ಯ ಪರಿಷತ್ತು ಭಾನುವಾರ ಹಮ್ಮಿಕೊಂಡಿದ್ದ ಸಂಕ್ರಾಂತಿ ಸಂಭ್ರಮಾಚರಣೆಯಲ್ಲಿ ‘ಜನಮೆಚ್ಚಿದ ನಾಯಕ’ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ವಿವಿಧ ಸಮುದಾಯಗಳ ಅಭಿವೃದ್ಧಿಗೆ ನಿಗಮ, ಮಂಡಳಿಗಳನ್ನು ರಚಿಸಲಾಗಿದೆ. ಜೈನ ಸಮುದಾಯಕ್ಕೂ ಮಾಡಬೇಕು ಎಂಬುದು ಬಹುಕಾಲದ ಬೇಡಿಕೆ ಎಂದು ವಿವರಿಸಿದರು.

ಕರ್ನಾಟಕ ಜೈನ ಅಸೋಸಿಯೇಷನ್ ಅಧ್ಯಕ್ಷ ಬಿ. ಪ್ರಸನ್ನಯ್ಯ ಮಾತನಾಡಿ, ‘ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯದ ಜೊತೆಗೆ, ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ ನಿಲಯಗಳನ್ನು ತೆರೆಯುವ ಗುರಿ ಇದೆ ಎಂದು ತಿಳಿಸಿದರು.

ಭಾರತೀಯ ಜೈನ ಮಿಲನದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಮಾತನಾಡಿ, ‘ಸಮುದಾಯದ ಜನರು ಒಟ್ಟಾಗಿ ಸೇರಿ ಚರ್ಚಿಸಲು ಸಂಘಟನೆ ಅಗತ್ಯ’ ಎಂದು ಪ್ರತಿಪಾದಿಸಿದರು.

ಉದ್ಯಮಿ ಸಭಾಶ ಜಿನಗೌಡ ಅಧ್ಯಕ್ಷತೆ ವಹಿಸಿದ್ದರು. ಕೆಜೆಎ ಮಾಜಿ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಅವರಿಗೆ ಆದರ್ಶ ಜೈನ ಸಮಾಜ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಹಾವೀರ ಪಡನಾಡ, ಡಾ. ನೇಮಿನಾಥ ಮದ್ದಂ ಮತ್ತು ಬಿ. ಪ್ರಸನ್ನಯ್ಯ ಅವರಿಗೆ ‘ದಾನ ಚಿಂತಾಮಣಿ’ ಪ್ರಶಸ್ರಿ ನೀಡಿ ಸನ್ಮಾನಿ-ಸಲಾಯಿತು. ಉತ್ತರ ಕರ್ನಾಟಕ ಜೈನ ಬಾಂಧವರು ಸಂಘಟನೆಯ ಉಪಾಧ್ಯಕ್ಷ ಶಾಂತಿನಾಥ ಹುದ್ದಾರ, ಕಾರ್ಯಾಧ್ಯಕ್ಷ ಅಜಿತ ಮುರುಗುಂಡೆ, ಕಾರ್ಯದರ್ಶಿ ಬಾಹುಬಲಿ ಗೌರಾಜ ಭಾಗವಹಿಸಿದ್ದರು.



ನಗರದಲ್ಲಿ ಭಾನುವಾರ ನಡೆದ ‘ಸಂಕ್ರಾಂತಿ ಸಂಭ್ರಮಾಚರಣೆ’ ಕಾರ್ಯಕ್ರಮದಲ್ಲಿ ಎಸ್. ಜಿತೇಂದ್ರ ಕುಮಾರ್ ಅವರಿಗೆ ‘ಆದರ್ಶ ಜೈನ ಸಮಾಜ ರತ್ನ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ‘ಭಾರತೀಯ ಜೈನ ಮಿಲನ’ದ ರಾಷ್ಟ್ರೀಯ ಅಧ್ಯಕ್ಷ ಡಿ. ಸುರೇಂದ್ರ ಕುಮಾರ್, ಉದ್ಯಮಿ ಸುಭಾಶ ಜಿನಗೌಡ, ಮಹಾವೀರ ಪಡನಾಡ, 'ಕರ್ನಾಟಕ ಜೈನ ಅಸೋಸಿಯೇಷನ್'ನ ಅಧ್ಯಕ್ಷ ಬಿ. ಪ್ರಸನ್ನಯ್ಯ ಇದ್ದರು

ಪ್ರಜಾವಾಣಿ ಚಿತ್ರ

ಸಂಸದ ಹೆಗಡೆ ವಿರುದ್ಧ ಪ್ರಕರಣ ದಾಖಲು



ಕಾರವಾರ: ಪ್ರಚೋದನಕಾರಿ ಭಾಷಣ ಮಾಡಿದ ಆರೋಪದಡಿ ಸಂಸದ ಅನಂತ ಕುಮಾರ ಹೆಗಡೆ ಮೇಲೆ ಕುಮಟಾ ಠಾಣೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣವನ್ನು ಭಾನುವಾರ ದಾಖಲಿಸಿಕೊಂಡಿದ್ದಾರೆ.

‘ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಹೇಳಿಕೆ ನೀಡಿರುವುದರ ಜತೆಗೆ ಸಾಮಾಜಿಕ ಅಶಾಂತಿಗೆ ಕಾರಣವಾಗುವ ಮಾತುಗಳನ್ನಾಡಿರುವುದರಿಂದ ಸೆಕ್ಷನ್ 153ಎ, 505 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ ತಿಳಿಸಿದ್ದಾರೆ.

ಕುಮಟಾದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶನಿವಾರ ಮಾತನಾಡಿದ್ದ ಅವರು, ‘ಭಟ್ಕಳ, ಶಿರಸಿ, ಶ್ರೀರಂಗಪಟ್ಟಣದ ಮಸೀದಿಗಳು ಹಿಂದೆ ದೇವಾಲ-ಯಗಳಾಗಿದ್ದವು. ಅವುಗಳನ್ನು ಬಾಬರಿ ಮಸೀದಿ ಮಾದರಿಯಲ್ಲಿ ಕೆಡವಬೇಕು. ಹಿಂದೂಗಳು ತಮಗಾದ ಅಪಮಾನಕ್ಕೆ ಸೇಡು ತೀರಿಸಿಕೊಳ್ಳುವವರೆಗೆ ಸುಮ್ಮನಿರಬಾರದು’ ಎಂದು ಹೇಳಿದ್ದರು.

‘ಹಸಿರು ರಕ್ಷಕ’, ‘ಕೆರೆ ಮಿತ್ರ’ ಅಪ್ಲಿಕೇಷನ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಉದ್ಯಾನಗಳು, ಕೆರೆಗಳ ಸಂರಕ್ಷಣೆ, ನಗರ ಹಸಿರೀ-ಕರಣದಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲು ಪಾಲಿಕೆ ತಯಾರಿಸಿದ ‘ಹಸಿರು ರಕ್ಷಕ’, ‘ಉದ್ಯಾನ ಮಿತ್ರ’ ಹಾಗೂ ‘ಕೆರೆ ಮಿತ್ರ’ ಎಂಬ ಮೊಬೈಲ್ ಆ್ಯಪ್ ಮತ್ತು ಮೂರು ವೆಬ್ ಲಿಂಕ್ (ಜಾಲತಾಣ) ಸಾರ್ವಜನಿಕರ ಬಳಕೆಗೆ ಸಿದ್ಧವಾಗಿದೆ.

ಈ ಮೂರು ಮೊಬೈಲ್ ಆ್ಯಪ್ ಮತ್ತು ಜಾಲತಾಣಗಳನ್ನು ಕೆಲವು ದಿನಗಳ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದ್ದರು.

ಶಾಲಾ-ಕಾಲೇಜು ಮಕ್ಕಳನ್ನು ಒಳಗೊಂಡು ಗಿಡಗಳನ್ನು ನೆಟ್ಟು ಪೋಷಿಸುವುದಕ್ಕಾಗಿ ‘ಹಸಿರು ರಕ್ಷಕ‘ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಪರಿಸರ ಹಾಗೂ ಮರಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಜಾಗೃತಿಗೊಳಿಸಲು, ಅವರೇ ಗಿಡನೆಟ್ಟು ಪೋಷಿಸಲು hasirurakshaka.bbmpgov.in ವೆಬ್ ಲಿಂಕ್ ಆ್ಯಪ್ ಆರಂಭಿಸಲಾಗಿದೆ.

ಉದ್ಯಾನ ನಿರ್ವಹಣೆಯನ್ನು ವೀಕ್ಷಿಸಲು https://pms.bbmpgov.in/park ವೆಬ್ ಲಿಂಕ್ ಬಳಸಬಹುದು. ತುರ್ತಾಗಿ ದೈನಂದಿನ ನಿರ್ವಹಣೆಯ ಕುರಿತು ಮೇಲಧಿಕಾರಿಗಳು ಕಾಲಕಾಲಕ್ಕೆ ವರದಿಯನ್ನು ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಈ ಅಪ್ಲಿಕೇಷನ್ ಅನ್ನು ಉದ್ಯಾನ ಅಧಿಕಾರಿಗಳು, ನಿರ್ವಹಣೆಯ ಗುತ್ತಿಗೆದಾರರು, ನೋಡಲ್ ಅಧಿಕಾರಿಗಳು ಹಾಗೂ ಹಸಿರು ಮಿತ್ರರು ಬಳಕೆ ಮಾಡಬಹುದು.


ಕೆರೆ ನಿರ್ವಹಣೆ ಕಾಮಗಾರಿಯ ತಪಾಸಣೆ ನಡೆಸಲು ‘ಕೆರೆಮಿತ್ರ’ ಮೊಬೈಲ್ ಅಪ್ಲೀಕೇಷನ್ ಬಳಸಬಹುದು. ims.bbmpgov.in/lake ಲಿಂಕ್ ಮೂಲಕ ಅಧಿಕಾರಿಗಳು, ಗುತ್ತಿಗೆದಾರರು, ನೋಡಲ್ ಅಧಿಕಾರಿಗಳು ಹಾಗೂ ಕೆರೆ ಮಿತ್ರರು ಬಳಸಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

’ಹಸಿರು ಮಿತ್ರ’ಕ್ಕಾಗಿ ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಜಿ.ಎಲ್.ಸ್ವಾಮಿ (94806 83047), ‘ಕೆರೆಮಿತ್ರ’ಕ್ಕಾಗಿ ಬಿಬಿಎಂಪಿ ಕೆರೆಗಳ ವಿಭಾಗ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ (94806 83059), ‘ಉದ್ಯಾನ ಮಿತ್ರ’ಕ್ಕಾಗಿ ಬಿಬಿಎಂಪಿ ತೋಟಗಾರಿಕೆ ಉಪ ನಿರ್ದೇಶಕ ಚಂದ್ರಶೇಖರ್ (95350 15189) ಅವರನ್ನು ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಬಸವೇಶ್ವರಸ್ವಾಮಿ ರಥೋತ್ಸವ ಹಾಗೂ ಕಡಲೆಕಾಯಿ ಪರಿಷೆ: ಚಾಲನೆ: ಬಿ.ವೈ. ವಿಜಯೇಂದ್ರ, ಕುಸ್ತಿ ಪಂದ್ಯಾವಳಿ ಉದ್ಘಾಟನೆ: ದರ್ಶನ್, ಆಯೋಜನೆ: ಬಸವೇಶ್ವರಸ್ವಾಮಿ ದೇವಸ್ಥಾನ ಸಮಿತಿ, ಸ್ಥಳ: ಬಸವೇಶ್ವರಸ್ವಾಮಿ ದೇವಸ್ಥಾನ, ಸೋಂಪುರ, ಚನ್ನವೀರಯ್ಯಪಾಳ್ಯ, ಬೆಳಿಗ್ಗೆ 6ರಿಂದ

ಸಂಗೀತ ವಿದ್ವಾನ್ ಚಿಂತಲಪಲ್ಲಿ ವೆಂಕಟರಾಮಯ್ಯನವರ ಜನ್ಮ ಶತಮಾನೋತ್ಸವ ಸಮಾರಂಭ: ಸಾನ್ನಿಧ್ಯ: ವಿದ್ಯಾಶ್ರೀತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅಧ್ಯಕ್ಷತೆ: ಆರ್. ಕೆ. ಪದ್ಮನಾಭ, ಮುಖ್ಯ ಅತಿಥಿಗಳು: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಸುಮಾ ಸುಧೀಂದ್ರ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಲವಂತರಾವ್ ಪಾಟೀಲ, ಚಿಂತಲಪಲ್ಲಿ ಕೆ. ರಮೇಶ್, ರಾಜಕುಮಾರ್ ಹೆಬ್ಬಾಳೆ, ಅಶೋಕ ಹಾರನಹಳ್ಳಿ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಬೆಳಿಗ್ಗೆ 10



ಯದುಗಿರಿ ಜೀಯರ್ ಸ್ವಾಮೀಜಿ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಸಂಕ್ರಾಂತಿ ಸಂಭ್ರಮ: ವಿವಿಧ ಸ್ಪರ್ಧೆಗಳ ಆಯೋಜನೆ: ಅತಿಥಿಗಳು: ಆರ್. ಅಶೋಕ್, ಧನಂಜಯ್, ಆಯೋಜನೆ: ಸಂಕ್ರಾಂತಿ ಸೇವಾ ಸಮಿತಿ, ಸ್ಥಳ: ಮಹಾಲಕ್ಷ್ಮಿ ದೇವಸ್ಥಾನದ ಹತ್ತಿರ, 80 ಅಡಿ ರಸ್ತೆ, ಭುವನೇಶ್ವರಿ ನಗರ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10.30ರಿಂದ

‘ಶ್ರೀಮದ್ ರಾಮಾಯಣ’ ಧಾರ್ಮಿಕ ಪ್ರವಚನ: ದ್ವೈಪಾಯನಾಚಾರ್ ಜೋಶಿ, ಆಯೋಜನೆ ಹಾಗೂ ಸ್ಥಳ: ಉತ್ತರಾದಿ ಮಠ, ಬಸವನಗುಡಿ, ಸಂಜೆ 6.30

‘ಶ್ರೀಮನ್ ಮಹಾಭಾರತ’ ಪ್ರವಚನ: ವಿನಾಯಕಾಚಾರ್ ನಾಮಣ್ಣವರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಚಿದಾನಂದಮೂರ್ತಿ ಸ್ಮರಣೆ ಕಾರ್ಯಕ್ರಮದಲ್ಲಿ ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಬೇಸರ

‘ಕಾವೇರಿ ನೀರು: ನಿರಂತರ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನೀರಿನ ಹಕ್ಕಿನಲ್ಲಿ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದ್ದು, ಜಲ ವಿವಾದಗಳ ವಿಷಯದಲ್ಲಿ ಕರ್ನಾಟಕದಷ್ಟು ನತದೃಷ್ಟ ರಾಜ್ಯ ಇನ್ನೊಂದಿಲ್ಲ’ ಎಂದು ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಬೇಸರ ವ್ಯಕ್ತಪಡಿಸಿದರು.

ಎಂ. ಚಿದಾನಂದಮೂರ್ತಿ ಸ್ಮರಣಾರ್ಥ ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಕರ್ನಾಟಕದ ಜಲ ವಿವಾದಗಳು:ಪರಿಹಾರ’ ವಿಷಯದ ಬಗ್ಗೆ ಅವರು ಮಾತನಾಡಿದರು.

‘ಐತಿಹಾಸಿಕವಾಗಿ ನೋಡಿದರೆ ಕಾವೇರಿ ನೀರು ಹಂಚಿಕೆ ವಿವಾದದಲ್ಲಿ ನ್ಯಾಯವು ಕರ್ನಾಟಕದ ಪರವಾಗಿಯೇ ಇದೆ. ಆದರೆ, ಸುಪ್ರೀಂಕೋರ್ಟ್ ತೀರ್ಪಿನ ನಂತರವೂ ರಾಜ್ಯಕ್ಕೆ ಸಂಪೂರ್ಣ ನ್ಯಾಯ

ಮುಖ್ಯಾಂಶಗಳು

- ಸುಪ್ರೀಂಕೋರ್ಟ್ ತೀರ್ಪಿನ ನಂತರವೂ ರಾಜ್ಯಕ್ಕೆ ಸಂಪೂರ್ಣ ನ್ಯಾಯ ಸಿಕ್ಕಿಲ್ಲ
- ರಾಜ್ಯದ ಪರ ವಕೀಲರೂ ಪರಿಣಾಮಕಾರಿ ವಾದಮಾಡಿಲ್ಲ
- ಸಂಕಷ್ಟ ಸೂತ್ರ, ನೀರು ಹಂಚಿಕೆಯಲ್ಲಿ ಸ್ಪಷ್ಟತೆಯಿಲ್ಲ

ಸಿಕ್ಕಿಲ್ಲ. ತಮಿಳುನಾಡು ಸಹಜವಾಗಿಯೇ ಹೆಚ್ಚು ಅಂತರ್ಜಲ ಹೊಂದಿದೆ. ಆದರೂ ನ್ಯಾಯಾಧಿಕರಣ ಮತ್ತು ನ್ಯಾಯಾಲಯಗಳು ಇದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ರಾಜ್ಯದ ಪರವಾಗಿ ವಾದಿಸಿದ ವಕೀಲರೂ ಪರಿಣಾಮಕಾರಿಯಾಗಿ ವಾದಿಸಿದ ಉದಾಹರಣೆಗಳಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಬರಗಾಲ ಬಂದ ವರ್ಷಗಳಲ್ಲಿ ಕರ್ನಾಟಕ ಮತ್ತು ತಮಿಳುನಾಡು ಯಾವ ಸಂಕಷ್ಟ ಸೂತ್ರ ಅನುಸರಿಸಬೇಕು ಎಂಬ ಸಂಗತಿ ಸ್ಪಷ್ಟವಾಗಿಲ್ಲ. ಹೆಚ್ಚುವರಿ ನೀರನ್ನು ಯಾವ ರೀತಿ ಹಂಚಿಕೊಳ್ಳಬೇಕು ಎನ್ನುವುದರ ಬಗ್ಗೆಯೂ ಸ್ಪಷ್ಟತೆಯಿಲ್ಲ. ಮೇಕೆದಾಟು ಯೋಜನೆಯ ಸಮಸ್ಯೆಯ ಮೂಲ ಇಲ್ಲಿದೆ’ ಎಂದು ವಿಶ್ಲೇಷಿಸಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ‘ಕೇವಲ ಪ್ರತಿಕ್ರಿಯಾತ್ಮಕವಾಗಿದ್ದ ಕನ್ನಡ ಹೋರಾಟವನ್ನು ನಿರಂತರ ಕ್ರಿಯಾಶೀಲತೆಯ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಚಿದಾನಂದಮೂರ್ತಿ ಅವರಿಗೆ ಸಲ್ಲುತ್ತದೆ. ಇತ್ತೀಚೆಗೆ ಸರ್ಕಾರ ಜಾರಿಗೆ ತಂದಿರುವ ಸಮಗ್ರ ಕನ್ನಡ ಭಾಷಾ ಕಾಯ್ದೆ ಕೂಡ ಚಿದಾನಂದಮೂರ್ತಿ ಅವರ ಚಿಂತನೆಯ ಮುಂದುವರಿದ ಭಾಗವೇ ಆಗಿದೆ. ಅವರ ಕನ್ನಡಪರ ಚಿಂತನೆಯು ಕೇವಲ ಕನ್ನಡ ಭಾಷೆ ಮಾತ್ರವಲ್ಲದೆ, ರಾಜ್ಯದ ನೀರಿನ ಹಕ್ಕು, ಉದ್ಯೋಗದ ಪಾಲು, ಕನ್ನಡ ವಿಶ್ವವಿದ್ಯಾಲಯ ಮುಂತಾದ ಆಯಾಮಗಳನ್ನು ಒಳಗೊಂಡಿತ್ತು’ ಎಂದು ಸ್ಮರಿಸಿದರು.



ಕಾರ್ಯಕ್ರಮದಲ್ಲಿ ಕ್ಯಾಪ್ಟನ್ ರಾಜಾರಾವ್ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ, ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ರಾ.ನಂ. ಚಂದ್ರಶೇಖರ, ಸ್ಮಿತಾ ರೆಡ್ಡಿ ಪಾಲ್ಗೊಂಡಿದ್ದರು

ನಾನು ಟಿಕೆಟ್ ಆಕಾಂಕ್ಷಿ: ಅಲೋಕ್ ವಿಶ್ವನಾಥ್

ವಿಜಯಪುರ(ದೇವನಹಳ್ಳಿ): ‘ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಅವಕಾಶ ನೀಡುವಂತೆ ರಾಜ್ಯ ನಾಯಕರಿಗೆ ಮನವಿ ಮಾಡಿದ್ದೇನೆ’ ಎಂದು ಯಲಹಂಕ ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಪುತ್ರ, ವಿಶ್ವವಾಣಿ ಫೌಂಡೇಷನ್ ನಿರ್ದೇಶಕ ಅಲೋಕ್ ವಿಶ್ವನಾಥ್ ಭಾನುವಾರ ಪಟ್ಟಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯು 39 ಸಂಘಟನಾತ್ಮಕ ಜಿಲ್ಲಾ ಘಟಕಗಳ ನೂತನ ಅಧ್ಯಕ್ಷರ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಮೈಸೂರು ನಗರ- ಎಲ್. ನಾಗೇಂದ್ರ, ಮೈಸೂರು ಗ್ರಾಮಾಂತರ- ಎಲ್.ಆರ್.ಮಹಾದೇವಸ್ವಾಮಿ, ಚಾಮರಾಜನಗರ-ಸಿ.ಎಸ್.ನಿರಂಜನ ಕುಮಾರ್, ಮಂಡ್ಯ- ಇಂದ್ರೇಶ್ ಕುಮಾರ್, ಹಾಸನ- ಸಿದ್ದೇಶ್ ನಾಗೇಂದ್ರ, ಕೊಡಗು- ರವಿ ಕಾಳಪ್ಪ, ದಕ್ಷಿಣ ಕನ್ನಡ- ಸತೀಶ್ ಕುಂಪಲ, ಉಡುಪಿ-ಕಿಶೋರ್ ಕುಂದಾಪುರ, ಚಿಕ್ಕಮಗಳೂರು- ದೇವರಾಜ ಶೆಟ್ಟಿ, ಶಿವಮೊಗ್ಗ- ಟಿ.ಡಿ.ಮೇಘರಾಜ್, ಉತ್ತರಕನ್ನಡ- ಎನ್.ಎಸ್,ಹೆಗಡೆ, ಹಾವೇರಿ- ಅರುಣ್ ಕುಮಾರ್ ಪೂಜಾರ, ಹುಬ್ಬಳ್ಳಿ-ಧಾರವಾಡ- ತಿಪ್ಪಣ್ಣ ಮಜ್ಜಗಿ, ಧಾರವಾಡ ಗ್ರಾಮಾಂತರ- ನಿಂಗಪ್ಪ ಸುತ್ತಗಟ್ಟಿ, ಗದಗ- ರಾಜು ಕುರಡಗಿ, ಬೆಳಗಾವಿ ನಗರ-ಗೀತಾ ಸುತಾರ್, ಬೆಳಗಾವಿ ಗ್ರಾಮಾಂತರ- ಸುಭಾಷ್ ಪಾಟೀಲ, ಚಿಕ್ಕೋಡಿ- ಸತೀಶ್ ಅಪ್ಪಾಜಿಗೋಳ್, ಬಾಗಲಕೋಟೆ-ಶಾಂತಗೌಡ ಪಾಟೀಲ, ವಿಜಯಪುರ- ಆರ್.ಎಸ್.ಪಾಟೀಲ.

ಬೀದರ್- ಸೋಮನಾಥ ಪಾಟೀಲ, ಕಲಬುರಗಿ ನಗರ- ಚಂದ್ರಕಾಂತ ಪಾಟೀಲ, ಕಲಬುರಗಿ ಗ್ರಾಮಾಂತರ-ಶಿವರಾಜ ಪಾಟೀಲ ರದ್ದೇವಾಡಿ, ಯಾದಗಿರಿ- ಅಮೀನ್ ರೆಡ್ಡಿ, ರಾಯಚೂರು- ಡಾ.ಶಿವರಾಜ ಪಾಟೀಲ, ಕೊಪ್ಪಳ- ನವೀನ್ ಗುಳಗಣ್ಣನವರ್, ಬಳ್ಳಾರಿ- ಅನಿಲ್ ಕುಮಾರ್ ಮೋಕಾ, ವಿಜಯನಗರ- ಚನ್ನಬಸವನಗೌಡ ಪಾಟೀಲ, ದಾವಣಗೆರೆ- ರಾಜಶೇಖರ್, ಚಿತ್ರದುರ್ಗ-ಎ.ಮುರಳಿ, ತುಮಕೂರು- ಎಚ್.ಎಚ್. ರವಿಶಂಕರ (ಹೆಬ್ಬಾಕ), ಮಧುಗಿರಿ- ಬಿ.ಸಿ.ಹನುಮಂತೇಗೌಡ, ರಾಮನಗರ- ಆನಂದಸ್ವಾಮಿ, ಬೆಂಗಳೂರು ಗ್ರಾಮಾಂತರ-ರಾಮಕೃಷ್ಣಪ್ಪ, ಚಿಕ್ಕಬಳ್ಳಾಪುರ-ರಾಮಲಿಂಗಪ್ಪ, ಕೋಲಾರ- ಡಾ.ಕೆ.ಎನ್. ವೇಣುಗೋಪಾಲ, ಬೆಂಗಳೂರು ಉತ್ತರ- ಎಸ್.ಹರೀಶ್, ಬೆಂಗಳೂರು ಕೇಂದ್ರ-ಸಪ್ತಗಿರಿಗೌಡ, ಬೆಂಗಳೂರು ದಕ್ಷಿಣ- ಸಿ.ಕೆ.ರಾಮಮೂರ್ತಿ.

ಪ್ರಕೋಷ್ಠಗಳ ರಾಜ್ಯ ಸಂಯೋಜಕ- ಎಸ್.ದತ್ತಾತ್ರಿ, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ- ಲೋಕೇಶ್ ಅಂಬೇಕಲ್ಲು, ರಾಜ್ಯ ಕಾರ್ಯಾಲಯ ಸಹ ಕಾರ್ಯದರ್ಶಿ-ಬಿ.ಎಚ್.ವಿಶ್ವನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೋಂಗಿ ಯಾತ್ರೆ: ಅಶೋಕ ಟೀಕೆ

ಬೆಂಗಳೂರು:‘ದೇಶದಲ್ಲಿ ನ್ಯಾಯಾಂಗವನ್ನು ದಮನ ಮಾಡಿದ ಕಾಂಗ್ರೆಸ್ ನಾಯಕರು ಈಗ ನ್ಯಾಯಯಾತ್ರೆ ಮಾಡುತ್ತಿರುವುದು ಡೋಂಗಿತನ. ತುರ್ತು ಪರಿಸ್ಥಿತಿ ಹೇರಿಕೆ ಮೂಲಕ ಪ್ರಜಾಪ್ರಭುತ್ವವನ್ನು ಹೊಸಕಿದ ಇವರ ಪಕ್ಷದ ಯಾತ್ರೆಗೆ ಮೂರು ಕಾಸಿನ ಬೆಲೆಯೂ ಇಲ್ಲ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹರಿಹಾಯ್ದರು.

ಜಯನಗರ 4 ನೇ ಹಂತದ ಗಣೇಶ ದೇವಾಲಯದ ಆವರಣದಲ್ಲಿ ಭಾನುವಾರ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು. ಅಯೋಧ್ಯೆಯ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಪ್ರಯುಕ್ತ ಇದೇ 14 ರಿಂದ ದೇವಾಲಯಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

‘ಕಾಂಗ್ರೆಸ್ ನಾಯಕರು ದಕ್ಷಿಣ ಭಾರತದಿಂದ ಭಾರತ್ ಜೋಡೊ ಯಾತ್ರೆ ಮಾಡಿದರು. ಆಗ ಉತ್ತರ ಭಾರತದ ಮೂರು ರಾಜ್ಯಗಳಲ್ಲೂ ಸೋತು ಹೋದರು. ರಾಹುಲ್‌ಗಾಂಧಿ ಎಲ್ಲೆಲ್ಲಿ ಪಾದಯಾತ್ರೆ ಮಾಡಿ ನೆಲವನ್ನು ಸ್ಪರ್ಶಿಸುತ್ತಾರೋ ಅಲ್ಲೆಲ್ಲ ಕಾಂಗ್ರೆಸ್ ಅವನತಿ ಕಾಣುತ್ತಿದೆ. ಈಗ ನ್ಯಾಯಯಾತ್ರೆ ಮಾಡುತ್ತಿರುವ ಇವರು ಈ ಹಿಂದೆ ಸರ್ವಾಧಿಕಾರಿ ಆಡಳಿತವನ್ನು ದೇಶದ ಮೇಲೆ ಹೇರಿದ ಕುಖ್ಯಾತಿ ಹೊಂದಿದ್ದಾರೆ. ನ್ಯಾಯಾಂಗ ಮತ್ತು ಪತ್ರಿಕಾರಂಗವನ್ನು ದಮನ ಮಾಡಿದ ಕಾಂಗ್ರೆಸ್ ನಾಯಕರಿಗೆ ನ್ಯಾಯ ಕೇಳಲು ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದರು.

ರಕ್ತದಾನ: 105 ಯುನಿಟ್ ರಕ್ತ ಸಂಗ್ರಹ

ಕೆ.ಆರ್.ಪುರ: ‘ಯುವ ಸಮೂಹ ರಕ್ತದಾನ ಮಾಡಿದರೆ ದೇಶ ಸೇವೆ ಮಾಡಿದಂತೆ’ ಎಂದು ವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ.ಕೆ.ವಿ.ಮುನಿಸ್ವಾಮಿ ಹೇಳಿದರು.

ಕೆ.ಆರ್.ಪುರದ ಶ್ರೀವೆಂಕಟೇಶ್ವರ ಕಾಲೇಜಿನಲ್ಲಿ ಯುವ ರೆಡ್ ಕ್ರಾಸ್, ಎಸ್.ಎಸ್.ಎಸ್ ಘಟಕ, ರಾಷ್ಟ್ರೋತ್ಥಾನ ರಕ್ತ ಭಂಡಾರ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

105 ಯುನಿಟ್ ರಕ್ತ ಸಂಗ್ರಹವಾಯಿತು. ಕಾಲೇಜು ಸಂಯೋಜನಾಧಿಕಾರಿ ಪ್ರೊ.ವಿ.ಎಂ.ರವಿ ಮಾತನಾಡಿದರು. ಪ್ರಾಚಾರ್ಯ ಡಾ.ಪ್ರಕಾಶ್ ಜೆ.ಇ. ಉಪ ಪ್ರಾಚಾರ್ಯ ಪ್ರೊ.ಚಂದ್ರಯ್ಯ, ರಮೇಶ್, ಮಂಜುನಾಥ್, ಚಂದ್ರಶೇಖರ, ಸುರೇಶ್ ಇದ್ದರು.





ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿ ಉತ್ತಮ ಸಾಧನೆ ಮಾಡಲು ನಿಯಮಿತ ಹಾಗೂ ಶಿಸ್ತುಬದ್ಧ ಅಧ್ಯಯನ ಅಗತ್ಯವಾಗಿದೆ. ನಿಮ್ಮ ಅಧ್ಯಯನ ಹವ್ಯಾಸ, ವಿಷಯವಾರು ಆಸಕ್ತಿ, ಬಲ-ದೌರ್ಬಲ್ಯಗಳಿಗೆ ಅನುಗುಣವಾಗಿ ನಿಮ್ಮ ಪೋಷಕರ, ಗುರುಗಳ ಮಾರ್ಗದರ್ಶನದಲ್ಲಿ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಅಧ್ಯಯನ ನಿರತರಾಗುವುದು ಅಗತ್ಯವಾಗಿದೆ.

ಶಿಸ್ತುಬದ್ಧ ಅಧ್ಯಯನಕ್ಕೆ ವೇಳಾಪಟ್ಟಿ

ಚನ್ನಬಸಪ್ಪ ರೊಟ್ಟಿ

ಪರೀಕ್ಷಾ ತಯಾರಿಗೆ ಸಮಯದ ಅಭಾವವಿದೆ ಎಂದು ಧೃತಿಗೆಡದೇ ಇಂದಿನಿಂದ, ಈ ಕೂಡಲೇ ವೇಳಾಪಟ್ಟಿಗೆ ಅನುಗುಣವಾಗಿ ಪರೀಕ್ಷಾ ಸಿದ್ಧತೆ ಆರಂಭಿಸಿ. ಪ್ರತಿದಿನ ಅಧ್ಯಯನಕ್ಕಾಗಿ ಮೀಸಲಿಡಬೇಕಾದ ಅವಧಿ, ಯಾವ ವಿಷಯಕ್ಕೆ ಎಷ್ಟು ಆದ್ಯತೆ ನೀಡಬೇಕು ಎಂಬುದನ್ನು ನಿರ್ಧರಿಸಿ ಅದಕ್ಕೆ ಅನುಗುಣವಾಗಿ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಿ. ಬೇರೆಯವರ ವೇಳಾಪಟ್ಟಿಯನ್ನು ನಕಲು ಮಾಡದೇ ನಿಮ್ಮ ಆದ್ಯತೆ, ಭಿನ್ನತೆಗೆ ಅನುಗುಣವಾದ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಿ. ಈ ಸಮಯದಲ್ಲಿ ಏನು ಓದಬೇಕು? ಎಷ್ಟು ಓದಬೇಕು? ಪ್ರಶ್ನೆಗಳ ಸ್ವರೂಪ ಹೇಗಿರುತ್ತದೆ? ಎಂಬುದನ್ನು ಗಮನಿಸಿ.

ಹೀಗಿರಲಿ ಅಧ್ಯಯನ ಕೊಠಡಿ...

- ಅಧ್ಯಯನಕ್ಕೆ ಸಾಕಷ್ಟು ಗಾಳಿ, ಬೆಳಕು, ಕೂರಲು ಸಮರ್ಪಕ ಸ್ಥಳ ಇರುವ ಜಾಗ / ಕೊಠಡಿಯನ್ನು ಆಯ್ದುಕೊಳ್ಳಿ.
- ವೇಳಾಪಟ್ಟಿಯನ್ನು ನಿಮ್ಮ ಅಧ್ಯಯನ ಕೊಠಡಿಯಲ್ಲಿ ನಿಮ್ಮ ಕಣ್ಣಿಗೆ ಬೀಳುವಂತೆ ತೂಗಿಹಾಕಿಕೊಳ್ಳಿ.
- ಅಗತ್ಯವಾಗಿರುವ ಪಠ್ಯಪುಸ್ತಕ, ತರಗತಿಯಲ್ಲಿ ಬರೆದುಕೊಂಡ ಟಿಪ್ಪಣಿ, ಪೂರಕ ಅಧ್ಯಯನ ಸಾಮಗ್ರಿ ಇವೆಲ್ಲವುಗಳನ್ನೂ ಸುಲಭವಾಗಿ ಸಿಗುವಂತೆ ನಿಮ್ಮ ಅಧ್ಯಯನ ಸ್ಥಳದಲ್ಲಿ ವಿಷಯವಾರು ಜೋಡಿಸಿಟ್ಟುಕೊಳ್ಳಿ.
- ಮಹತ್ವದ ಪ್ರಮೇಯಗಳು, ಸೂತ್ರಗಳು, ವಿಜ್ಞಾನದ ಪ್ರಯೋಗಗಳು, ಜೀವಶಾಸ್ತ್ರದ ಚಿತ್ರಗಳು, ನಕ್ಷೆಗಳನ್ನು ಒಳಗೊಂಡ ಚಾರ್ಟ್‌ಗಳನ್ನು ನಿಮ್ಮ ಅಧ್ಯಯನ ಸ್ಥಳದ ಗೋಡೆಗಳಿಗೆ ನೇತುಹಾಕಿ. ಆಗಾಗ ಅವುಗಳ ಮೇಲೆ ಕಣ್ಣಾಡಿಸಿ.

ಪ್ರತಿದಿನ ಕನಿಷ್ಠ 6 ಗಂಟೆ ಅಧ್ಯಯನ ಅಗತ್ಯ

ನಿರ್ಣಾಯಕವಾದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಭಾಷಾ ವಿಷಯಗಳೂ ಸೇರಿ ಆರು ವಿಷಯಗಳ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಹೀಗಾಗಿ, ಆ ಆರೂ ವಿಷಯಗಳ ಅಧ್ಯಯನಕ್ಕೆ ಸಂಬಂಧಿಸಿ ವೇಳಾಪಟ್ಟಿ ಹಾಕಿಕೊಳ್ಳಿ. ತಜ್ಞರ ಅಭಿಪ್ರಾಯದಂತೆ ಶಾಲಾ ಅವಧಿಯ ದಿನಗಳಲ್ಲಿ ಬೆಳಗ್ಗೆ ಕನಿಷ್ಠ 3 ಗಂಟೆ, ಸಂಜೆ ಕನಿಷ್ಠ 3 ಗಂಟೆ ಅಧ್ಯಯನಕ್ಕೆ ಮೀಸಲಿಡುವುದು ಅಗತ್ಯ. ನಿಮ್ಮ ಆಸಕ್ತಿಗೆ ಅನುಗುಣವಾಗಿ ಒಂದು ದಿನಕ್ಕೆ ಒಂದೇ ವಿಷಯವನ್ನು ಅಧ್ಯಯನ ಮಾಡಿ ಅಥವಾ ಪ್ರತಿ ವಿಷಯಕ್ಕೂ ಪ್ರತಿದಿನ ನಿಗದಿತ ಸಮಯವನ್ನು ಮೀಸಲಿಡಿ. ರಜಾ ದಿನಗಳಲ್ಲಿ ಹೆಚ್ಚಿನ ಅಧ್ಯಯನ ಅವಶ್ಯವಿರುವ ಅಥವಾ ಕ್ಲಿಷ್ಟ ವಿಷಯಗಳ ಅಧ್ಯಯನಕ್ಕೆ ಮೀಸಲಿಡಿ. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಒಂದು ಪರೀಕ್ಷೆ ಮುಗಿದ ನಂತರ ಸಾಮಾನ್ಯವಾಗಿ 2-3 ದಿನ ರಜೆ ಇರುತ್ತದೆ. ಈ ಅವಧಿಯಲ್ಲಿ ಮುಂಬರುವ ಪರೀಕ್ಷಾ ವಿಷಯದ ಸಿದ್ಧತೆಗೆ ಆದ್ಯತೆ ನೀಡಿ. ಆ ವಿಷಯ ಸುಲಭವಾಗಿದ್ದರೆ ಇತರ ವಿಷಯಗಳ ಮೇಲೂ ಕಣ್ಣಾಡಿಸಿ.

> "ಪರೀಕ್ಷೆಯ ದಿನಗಳು ಹತ್ತಿರ ಬಂದಂತೆ ಓದಿನ ಸಮಯವನ್ನು ದಿಢೀರ್ ಹೆಚ್ಚಿಸುವುದು ಖಂಡಿತ ಒಳ್ಳೆಯದಲ್ಲ. ಅಧ್ಯಯನ ರಜೆಯ ಸಮಯದಲ್ಲಿ ದಿನದ 24 ಗಂಟೆಗಳನ್ನೂ ಸರಿಯಾದ ರೀತಿಯಲ್ಲಿ ವಿಭಾಗಿಸಿಕೊಳ್ಳಿ. ಓದು, ಬರವಣಿಗೆ ಮತ್ತು ಪುನಾರಾವರ್ತನೆಗೆ ಸಮಯ ಮೀಸಲಿಡಿ. ನೀವು ಹಾಕಿಕೊಂಡ ವೇಳಾಪಟ್ಟಿಯನ್ನು ಪ್ರಾಮಾಣಿಕವಾಗಿ ಪಾಲಿಸಿ."
>
> **ಮೋಹನ ದಂಡಿನ**
> ಕ್ಷೇತ್ರ ಶಿಕ್ಷಣಾಧಿಕಾರಿ, ಸವದತ್ತಿ

ಅಧ್ಯಯನದ ನಡುವೆ ಅಲ್ಪವಿರಾಮವಿರಲಿ

ಯಾವುದೇ ಕಾರಣಕ್ಕೂ ಹಲವು ಗಂಟೆಗಳ ಸತತ ಅಧ್ಯಯನ ಮಾಡದಿರಿ. ಇದರಿಂದ ಏಕತಾನತೆ, ಒತ್ತಡ ಹೆಚ್ಚಿ, ಏಕಾಗ್ರತೆಗೆ ಭಂಗವಾಗುತ್ತದೆ. ಒಂದು ಗಂಟೆಯ ಅಧ್ಯಯನದ ನಂತರ ಕನಿಷ್ಠ ಐದು ನಿಮಿಷ ವಿರಾಮ ಪಡೆದುಕೊಳ್ಳಿ. ಸಣ್ಣಪುಟ್ಟ ವ್ಯಾಯಾಮ ಮಾಡಿ, ಕೆಲ ಹೊತ್ತು ಓಡಾಡಿ. ಇಷ್ಟವಾದ ಸಂಗೀತ ಕೇಳಿ, ನೀರು ಕುಡಿದು ನಿರಮ್ಮಳರಾಗಿ. ರಾತ್ರಿ ನಿದ್ದೆಗೆಟ್ಟು ಓದುವುದಕ್ಕಿಂತ, ಬೆಳಗ್ಗೆ ಬೇಗ ಎದ್ದು ಓದುವುದು ಉತ್ತಮ. ಪರೀಕ್ಷೆ ಸಮೀಪಿಸುತ್ತಿದ್ದಂತೆ ನಿಮ್ಮ ದೇಹಕ್ಕೆ, ವಿಶೇಷವಾಗಿ ಮೆದುಳಿಗೆ ವಿಶ್ರಾಂತಿ ಅಗತ್ಯ. ನಿಮ್ಮ ವಯಸ್ಸಿಗೆ ಕನಿಷ್ಠ ಆರು ಗಂಟೆ ನಿದ್ರೆ ಅವಶ್ಯ.

ನೀಟ್, ಎನ್‌ಇಟಿ ತಯಾರಿ ಹೀಗಿರಲಿ...

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಈ ವರ್ಷ ಪಿಯುಸಿ ಮುಗಿಸುತ್ತಿದ್ದು ಎಂಬಿಬಿಎಸ್ ಮಾಡಲು ನೀಟ್ ಪರೀಕ್ಷೆಗೆ ತಯಾರಿ ಮಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್ ಸೀಟ್ ಪಡೆಯಲು ನೀಟ್ ಪರೀಕ್ಷೆಯಲ್ಲಿ ಎಷ್ಟು ಅಂಕಗಳು ಪಡೆಯಬೇಕು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಈ ವರ್ಷದ ನೀಟ್ ಪರೀಕ್ಷೆಯ ಪಠ್ಯಕ್ರಮದಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಭೌತಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಜೀವಶಾಸ್ತ್ರ ವಿಭಾಗಗಳಿಂದ ಕೆಲವು ವಿಷಯಗಳನ್ನು ತೆಗೆದು; ಕೆಲವನ್ನು ಸೇರಿಸಲಾಗಿದೆ. ಒಟ್ಟಾರೆ, ಕಳೆದ ವರ್ಷ 97 ಅಧ್ಯಾಯಗಳಿದ್ದು, ಈ ವರ್ಷ 79 ಅಧ್ಯಾಯಗಳಿವೆ ಎನ್ನಲಾಗಿದೆ. ಈ ವರ್ಷದ ರ‍್ಯಾಂಕ್ ಮತ್ತು ಅಂಕಗಳಲ್ಲಿ ವ್ಯತ್ಯಾಸಗಳಾಗುವ ನಿರೀಕ್ಷೆಯಿದ್ದು, ಸರ್ಕಾರಿ ಕಾಲೇಜುಗಳ ಕಟ್ ಆಫ್ ರ‍್ಯಾಂಕ್ ಅನ್ನು ನಿಖರವಾಗಿ ಅಂದಾಜಿಸುವುದು ಕಷ್ಟಸಾಧ್ಯ. ಅಖಿಲ ಭಾರತ ಮಟ್ಟದ ಈ ಪರೀಕ್ಷೆಯಲ್ಲಿ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳು 650 ಅಂಕಗಳನ್ನು ಪಡೆದರೆ, ಸರ್ಕಾರಿ ಕಾಲೇಜುಗಳಲ್ಲಿ ಸೀಟ್ ಸಿಗಬಹುದು.

ಪರಿಷ್ಕರಿಸಿದ ಪಠ್ಯಕ್ರಮದ ವಿವರಗಳಿಗಾಗಿ: https://www.nmc.org.in/MCIRest/open/getDocument?path=/Documents/Public/Portal/LatestNews/NEET%20UG%202024_Approved_Final.pdf

2. ನಾನು ಕೆಎಎಸ್ ಪರೀಕ್ಷೆಗೆ ತಯಾರಾಗುತ್ತಿದ್ದೀನಿ. ಯಾವ ರೀತಿ ಓದಬೇಕು ತಿಳಿಯುತ್ತಿಲ್ಲ.

ಹೆಸರು, ಊರು ತಿಳಿಸಿಲ್ಲ.

ಕೆಎಎಸ್ ಮುಖ್ಯ ಪರೀಕ್ಷೆಯ ತಯಾರಿಗೆ ಈ ಸಲಹೆಗಳನ್ನು ಗಮನಿಸಿ:

- ಪದವಿ ಕೋರ್ಸ್‌ಗಳಿಗೆ ಮಾಡುವ ಅಧ್ಯಯನಕ್ಕೂ ಕೆಎಎಸ್ ಪರೀಕ್ಷೆಗೆ ಮಾಡಬೇಕಾದ ಅಧ್ಯಯನಕ್ಕೂ ಇರುವ ವ್ಯತ್ಯಾಸಗಳನ್ನು ಗಮನಿಸಿ, ಪರಿಣಾಮಕಾರಿ ಅಧ್ಯಯನದ ಕಾರ್ಯತಂತ್ರವನ್ನು ರೂಪಿಸಬೇಕು.
- ಪರೀಕ್ಷೆಯ ಮಾದರಿಯನ್ನು ಅರ್ಥೈಸಿಕೊಂಡು, ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ, ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಾಗಬಹುದು.
- ಕರ್ನಾಟಕ ರಾಜ್ಯದ ಇತಿಹಾಸ, ಭೂಗೋಳ, ಯೋಜನೆಗಳು, ಆರ್ಥಿಕ ಸ್ಥಿತಿ ಮತ್ತು ಪ್ರಸ್ತುತ ವಿದ್ಯಮಾನಗಳು ವಿಷಯಗಳನ್ನು ಕೂಲಂಕಷವಾಗಿ ಓದಿ, ಅರ್ಥೈಸಿಕೊಳ್ಳಬೇಕು.
- ಕಳೆದ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ, ಅಣಕು-ಪರೀಕ್ಷೆ ಆಧಾರಿತ ತಯಾರಿಯನ್ನು ಮಾಡುತ್ತಿರಬೇಕು.
- ಯೂಟ್ಯೂಬಿನಲ್ಲಿ ತಯಾರಿ ಕುರಿತ ಮಾಹಿತಿಯುಳ್ಳ ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ.
- ಸಾಮಾಜಿಕ ಜಾಲತಾಣದಿಂದ ದೂರವಿದ್ದರೆ ಏಕಾಗ್ರತೆ ಸುಲಭ.
- ಈ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಸಮಗ್ರವಾದ ಮತ್ತು ಆಳವಾದ ಓದುವಿಕೆ ಇರಬೇಕು. ಜೊತೆಗೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ.

ಪರಿಣಾಮಕಾರಿ ಅಧ್ಯಯನ ಕಾರ್ಯತಂತ್ರದ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

3. ನಾನು ಬಿ.ಎಸ್ಸಿ, ಬಿ.ಇಡಿ ಮಾಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿದ್ದೇನೆ. ನಂತರ ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣದ ಮೂಲಕ ಎಂ.ಎಸ್ಸಿ ಮಾಡಿರುತ್ತೇನೆ. ಎನ್‌ಇಟಿ ತಯಾರಿ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

4. ಕನ್ನಡದಲ್ಲಿ ಸಹಾಯಕ ಪ್ರಾಧ್ಯಾಪಕರಾಗಬೇಕಾದರೆ ನನ್ನ ತಯಾರಿ ಹೇಗೆ ಇರಬೇಕು?

ಹೆಸರು, ಊರು ತಿಳಿಸಿಲ್ಲ.

ಉತ್ತಮ ಸಹಾಯಕ ಪ್ರಾಧ್ಯಾಪಕರಾಗಲು ವಿಷಯದ ಕುರಿತ ಆಳವಾದ ಜ್ಞಾನದ ಜೊತೆಗೆ ಸಂವಹನ ಕೌಶಲ, ಸಮಯದ ನಿರ್ವಹಣೆ, ತಾಳ್ಮೆ, ಸಹನೆ, ನಾಯಕತ್ವದ ಕೌಶಲ ಮತ್ತು ಈ ವೃತ್ತಿಯ ಬಗ್ಗೆ ಅಭಿರುಚಿಯಿರಬೇಕು. ಇವೆಲ್ಲವೂ ನಿಮ್ಮಲ್ಲಿದ್ದು, ಈ ವೃತ್ತಿಯನ್ನು ಸಮರ್ಥವಾಗಿ ನಿಭಾಯಿಸುವ ಆತ್ಮವಿಶ್ವಾಸವಿದ್ದರೆ, ಈ ವೃತ್ತಿಯನ್ನು ಅನುಸರಿಸಬಹುದು. ಎಂಎ (ಕನ್ನಡ) ದಲ್ಲಿ ಕನಿಷ್ಠ ಶೇ 55 ಅಂಕಗಳನ್ನು ಪಡೆದು, ಎನ್‌ಇಟಿ (ರಾಷ್ಟ್ರೀಯ ಅರ್ಹತಾ ಪರೀಕ್ಷೆ) ಅಥವಾ ಕೆಸ್‌ಇಟಿ (ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ) ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಎನ್‌ಇಟಿ /ಕೆಸ್‌ಇಟಿ ಪರೀಕ್ಷೆಯಲ್ಲಿ ಒಟ್ಟು ಎರಡು ಪ್ರಶ್ನೆ ಪತ್ರಿಕೆಗಳಿರುತ್ತದೆ. ಮೂರು ಗಂಟೆಗಳ ಅವಧಿಯ ಈ ಪರೀಕ್ಷೆಯಲ್ಲಿ ಒಟ್ಟು 150 ಪ್ರಶ್ನೆಗಳಿರುತ್ತದೆ (300 ಅಂಕಗಳು). ಮೊದಲನೇ ಪತ್ರಿಕೆ ಭೋಧನೆ/ ಸಂಶೋಧನಾ ಕ್ರಮ, ಅಭಿರುಚಿ ಇತ್ಯಾದಿ ಕುರಿತದ್ದಾಗಿದ್ದು, ಎರಡನೇ ಪತ್ರಿಕೆ ನೀವು ಭೋಧಿಸುವ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ. ವಿಷಯಸೂಚಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣದಲ್ಲಿ ಲಭ್ಯ.

ಈ ಸಲಹೆಗಳನ್ನು ಗಮನಿಸಿ:

- ಈ ಪರೀಕ್ಷೆಗಳು ಸ್ಪರ್ಧಾತ್ಮಕವಾಗಿರುತ್ತದೆ. ಹಾಗಾಗಿ, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ವಿಷಯಸೂಚಿಯ ಪ್ರಕಾರ ಅಗತ್ಯವಾದ ಪುಸ್ತಕಗಳು ಮತ್ತು ಇನ್ನಿತರ ಅಧ್ಯಯನದ ಮಾಹಿತಿಯನ್ನು ಸಂಗ್ರಹಿಸಿ.
- ಕಳೆದ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ, ಅಣಕು-ಪರೀಕ್ಷೆ ಆಧಾರಿತ ತಯಾರಿಯನ್ನು ಮಾಡುತ್ತಿರಬೇಕು.
- ಪರೀಕ್ಷೆಯಲ್ಲಿ ಯಶಸ್ವಿಯಾಗಲು ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಮತ್ತು ಆಳವಾದ ಓದುವಿಕೆ, ಪುನರಾವರ್ತನೆ ಮತ್ತು ಉತ್ಕೃಷ್ಟ ಬರವಣಿಗೆ ಇರಬೇಕು. ನಿಮ್ಮ ಬರವಣಿಗೆ ಕಾಗುಣಿತ, ವ್ಯಾಕರಣ ದೋಷ ಮುಕ್ತವಾಗಿರಲಿ; ಓದಲು ಸುಲಭವಾಗಿರಲಿ.
- ಜೊತೆಗೆ ಸಮಯದ ನಿರ್ವಹಣೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ.

ಪರಿಣಾಮಕಾರಿ ಓದುವಿಕೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk


ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ


ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

13) ಚಿತ್ರದಲ್ಲಿ ΔPQRನಲ್ಲಿ PS ಇದು QPRನ ಕೋನಾರ್ಧಕ ರೇಖೆಯಾಗಿದೆ $\frac{QS}{SR} = \frac{QP}{PR}$ ಎಂದು ಸಾಧಿಸಿ



ಪರಿಹಾರ:– SP ರೇಖೆಗೆ ಸಮಾಂತರವಾಗಿ RT ರೇಖೆಯನ್ನು ರಚಿಸಿ Pಯನ್ನು T ವರೆಗೆ ವಿಸ್ತರಿಸಿದೆ. ಕೊಟ್ಟಿರುವ ಹೇಳಿಕೆಯಂತೆ QPRನ ಕೋನಾರ್ಧಕ ರೇಖೆಯಾಗಿದೆ

$\angle QPS = \angle SPR$ ....(i)



$\angle SPR = \angle PRT$ (PS||TR)...............(ii)
$\angle QPS = \angle QRT$ (PS||TR) ....(iii)

ಮೇಲಿನ ಸಮೀಕರಣಗಳಿಂದ ನಮಗೆ ಕೆಳಗಿನ ಅಂಶ ತಿಳಿಯುತ್ತದೆ.

$\angle PRT = \angle QTR$
$\angle PRT = \angle QTR$
$PT = PR$
$PS \parallel TR$

ΔQTRದಲ್ಲಿ ಮೂಲ ಸಮಾನತೆ ಪ್ರಮೇಯದಿಂದ

$$\frac{QS}{SR} = \frac{QP}{PT}$$

$$\Rightarrow \frac{QS}{SR} = \frac{PQ}{PR} \quad (PT = TR)$$

ಸಾಧಿಸಿದೆ

14) ಒಬ್ಬ ಜೀವ ವಿಮಾ ಏಜೆಂಟರು ಪಡೆದ 100 ಪಾಲಿಸಿದಾರರ ವಯಸ್ಸುಗಳ ವಿವರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಪಾಲಿಸಿಗಳನ್ನು 18 ವರ್ಷ ದಾಟಿದ ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿರುವ ಜನರಿಗೆ ಮಾತ್ರ ನೀಡಿದ್ದರೆ ವಯಸ್ಸುಗಳ ಮಧ್ಯಾಂಕವನ್ನು ಲೆಕ್ಕಾಚಾರ ಮಾಡಿ

ವಯಸ್ಸು (ವರ್ಷಗಳಲ್ಲಿ)	ಪಾಲಿಸಿದಾರರ ಸಂಖ್ಯೆ
Below 20	2
Below 25	6
Below 30	24
Below 35	45
Below 40	78
Below 45	89
Below 50	92
Below 55	98
Below 60	100

ಪರಿಹಾರ:–

ವರ್ಗಾಂತರ	ಆವೃತ್ತಿ	ಸಂಚಿತ ಆವೃತ್ತಿ
15-20	2	2
20-25	4	6
25-30	18	24
30-35	21	45
35-40	33	78
40-45	11	89
45-50	3	92
50-55	6	98
55-60	2	100

N = 100 ಮತ್ತು N/2 = 50
ಮಧ್ಯಾಂಕದ ವರ್ಗ(Median class) = 35-40
ಈಗ $l = 35$, cf = 45, f = 33 ಮತ್ತು h = 5

ಮಧ್ಯಾಂಕ(Median) = 35 + [(50 – 45)/33] × 5
= 35 + (25/33)
= 35.76

ವಯಸ್ಸುಗಳ ಮಧ್ಯಾಂಕ = 35.76 ವರ್ಷಗಳು

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

REVISION : MODEL QUESTIONS

I. Select the correct alternative from the choices given below:

1) Haploid conditionis not observed in which of the following cells
a) Synergids and Egg b) Zygote and PEN
c) Antipodal and Egg
d) Antipodal and Synergids
Ans:- (b) Zygote and PEN

2. **Assertion** :In some species of asteraceae and poaceae, seeds are formed without fertilisation.
Reason: Formation of fruit without fertilization is called parthenocarpy.
A) Both Assertion and Reason are correct and Reason is the correct explanation for Assertion
B) Both Assertion and Reason are correct but Reason is not the correct explanation for Assertion
C) Assertion is correct but Reason is incorrect
D) Both Assertion and Reason are incorrect
Ans:- (B) Both Assertion and Reason are correct but Reason is not the correct explanation for Assertion

3. During gestation the foetus develops limbs and digits by the end
a) First month b) Second month
c) Third month d) Fifth month
Ans:- (b) Second month

4. The secondary oocyte after ovulation is covered by a non-cellular layer of
a) Cumulus oophorus b) Corona radiate
c) Zona pellucida d) Cortical layer
Ans:- (c) Zona pellucida

5. An example of hormone releasing IUD among the following
a) Cu – 7 b) Lippes loop
c) LNG – 20 d) Multiload 375
Ans:-(c) LNG – 20

6. Which of the following is a foetal sex determination test?
a) ZIFT b) GIFT
c) MTP d) Amniocentesis
Ans:- (d) Amniocentesis

7. Which of the following Mendelian gene disorder is the representation of allosomal recessive trait?
a) Hemophilia b) Thalassemia
c) Sickle cell anemia d) Myotonic dystrophy
Ans:- (b) Thalassemia

8. The process of removal of introns and joining of exons in a defined order in a primary transcripts occurs in
a) Prokaryotes b) Eukaryotes
c) Prokaryotes and Eukaryotes
d) Prokaryotes and Protista
Ans:- (d) Prokaryotes and Protista

9. A type of Natural selection in which more individuals acquire mean character value is called
a) Stabilizing selection
b) Disruptive selection
c) Directional selection
d) Dominant selection
Ans:- (a) Stabilizing selection

10. Drug called "Heroin is synthesized by
a) Methylation of Morphine
b) demethylation of Morphine
c) Acetylation of Morphine
d) deacytalation of Morphine
Ans:- (c) Acetylation of Morphine

11. The fungus not used in the production of any Industrial product is
a) Penicillium b) Aspergillus
c) Trichoderma polysporum
d) Glomus
Ans:- (c) Trichoderma polysporum

12. Significance of Insertional inactivation method in Recombinant DNA technology is to
a) Introduce the recombinants
b) Isolate gene of Interest
c) Select the recombinants
d) Select the gene of interest
Ans:-(c) Select the recombinants

13. Which of the following organisms are studied by Cornell's in his elegant field experiments to study competition
a) Warbler species
b) Chathamalus and Balanus
c) Cucko and Crow
d) Cattle egret and grazing cattle
Ans:- (b) Chathamalus and Balanus

14. The correct sequence in the process of decomposition is
a) Humification----Leaching----Catabolism---- Mineralisation ----Fragmentation
b) Catabolism----Leaching----Fragmentation---- Humification---- Mineralisation
c) Leaching----Fragmentation ----Catabolism---- Humification---- Mineralisation
d) Fragmentation ----Leaching----Catabolism----- Humification----Mineralisation
Ans:-(d) Fragmentation----Leaching----Catabolism-- Humification----Mineralisation

15. Western Ghats have a greater diversity of
a) Amphibians b) Reptiles
c) Aves d) Mammals
Ans:- (a) Amphibians

(Contd.....)

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ: ಸಣ್ಣ ಸಮುದಾಯಕ್ಕೆ ಹೆಚ್ಚು ಮನ್ನಣೆ ● ಕಾಂಗ್ರೆಸ್, ದಳ ನೆಲದಲ್ಲಿ ಅರಳಿದ ಕಮಲ

ಒಕ್ಕಲಿಗರು ಗೆದ್ದದ್ದು ಎರಡೇ ಬಾರಿ

● ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಒಕ್ಕಲಿಗ ಸಮುದಾಯದ ಮತದಾರರೇ ನಿರ್ಣಾಯಕರಾಗಿರುವ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಈ ಸಮುದಾಯದ ಅಭ್ಯರ್ಥಿಗಳು ಗೆದ್ದದ್ದು ಕೇವಲ ಎರಡು ಬಾರಿ ಮಾತ್ರ. ಮೊದಲಿನಿಂದಲೂ ಈ ಕ್ಷೇತ್ರದಿಂದ ಸಣ್ಣಪುಟ್ಟ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳೇ ಆಯ್ಕೆ ಯಾಗಿದ್ದಾರೆ.

ಕ್ಷೇತ್ರದಲ್ಲಿ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳು ಎರಡು ಬಾರಿ ಮಾತ್ರ ಗೆಲುವು ಸಾಧಿಸಿದ್ದಾರೆ. ತೀರಾ ಕಡಿಮೆ ಸಂಖ್ಯೆಯಲ್ಲಿರುವ ಸಮುದಾಯಗಳ ಅಭ್ಯರ್ಥಿಗಳು ಹಲವು ಬಾರಿ, ಭಾರಿ ಅಂತರದಿಂದಲೇ ಗೆಲುವು ದಾಖಲಿಸಿದ್ದಾರೆ. ಇದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಇತಿಹಾಸದ ವೈಶಿಷ್ಟ್ಯ.



ಕ್ಷೇತ್ರದ ಇಂದಿನ ರಾಜಕೀಯ ಸನ್ನಿವೇಶ, ಲೆಕ್ಕಾಚಾರ ಬದಲಾಗಿದೆ. 'ಪ್ರಬಲ' ಸಮುದಾಯದ ಅಭ್ಯರ್ಥಿಗಳೇ ಗೆಲ್ಲುವ ಕುದುರೆಗಳು ಎನ್ನುವ ಪರಿಸ್ಥಿತಿ ಇದೆ. ಸಣ್ಣ ಪುಟ್ಟ ಸಮುದಾಯಗಳ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆ ಕ್ಷೀಣವಾಗುತ್ತಿದೆ.

ಅವಿಭಜಿತ ಕೋಲಾರ ಜಿಲ್ಲೆಯ ಭಾಗವಾಗಿದ್ದ ಚಿಕ್ಕಬಳ್ಳಾಪುರ 2008ರಲ್ಲಿ ಜಿಲ್ಲೆಯಾಗಿ ರೂಪು ಗೊಂಡಿತು. ಹಿಂದೆ ಮಧುಗಿರಿ, ಹೊಸಕೋಟೆ ಲೋಕಸಭಾ ಕ್ಷೇತ್ರಗಳ ಭಾಗವಾಗಿದ್ದ ಚಿಕ್ಕಬಳ್ಳಾಪುರ 1977ರಲ್ಲಿ ಸ್ವತಂತ್ರ ಲೋಕಸಭಾ ಕ್ಷೇತ್ರವಾಗಿ ಅಸ್ತಿತ್ವಕ್ಕೆ ಬಂದಿತು.

ಅಂದಿನಿಂದ ಇಲ್ಲಿಯವರೆಗೆ ಎರಡು ಬಾರಿ ಒಕ್ಕಲಿಗರು ಗೆಲುವು ಸಾಧಿಸಿದ್ದಾರೆ. ನಾಲ್ಕು ಬಾರಿ ಈಡಿಗರು, ಮೂರು ಬಾರಿ ಬ್ರಾಹ್ಮಣರು, ಎರಡು ಬಾರಿ ದೇವಾಡಿಗರು, ಒಮ್ಮೆ ವೈಶ್ಯ ಸಮುದಾಯದ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

ಕ್ಷೇತ್ರಕ್ಕೆ ನಡೆದ ಮೊದಲ ಚುನಾವಣೆಯಲ್ಲಿ ಒಕ್ಕಲಿಗ ಸಮುದಾಯದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ಕೃಷ್ಣಪ್ಪ ಗೆಲುವು ದಾಖಲಿಸಿದರು. ತರುವಾಯ 2019ರ ಚುನಾವಣೆಯವರೆಗೂ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳು ಗೆಲ್ಲಲೇ ಇಲ್ಲ. 2019ರಲ್ಲಿ ಬಿ.ಎನ್. ಬಚ್ಚೇಗೌಡ ಗೆಲ್ಲುವ ಮೂಲಕ ಹಲವು ಹೊಸ ದಾಖಲೆ ಸೃಷ್ಟಿಸಿದರು.

1980ರ ಚುನಾವಣೆಯಲ್ಲಿ ವೈಶ್ಯ ಸಮುದಾಯದ ಎಸ್.ಎನ್.ಪ್ರಸನ್ನ ಕುಮಾರ್, 1984ರಿಂದ 1991 ರವರೆಗೂ ಬ್ರಾಹ್ಮಣ ಸಮುದಾಯದ ವಿ. ಕೃಷ್ಣರಾವ್, 1996ರಿಂದ 2004 ರವರೆಗೆ ಈಡಿಗ ಸಮುದಾಯದ ಆರ್.ಎಲ್.ಜಾಲಪ್ಪ, 2009 ಮತ್ತು 2014ರಲ್ಲಿ ದೇವಾಡಿಗ ಸಮುದಾಯದ ಎಂ.ವೀರಪ್ಪ ಮೊಯಿಲಿ ಗೆದ್ದಿದ್ದರು.

ಬಿಜೆಪಿ ಖಾತೆ ತೆರೆದ ಬಚ್ಚೇಗೌಡ

2019ರ ಲೋಕಸಭೆ ಚುನಾವಣೆಯಲ್ಲಿ ಬಿ.ಎನ್.ಬಚ್ಚೇಗೌಡರ ಗೆಲುವು ನಾನಾ ರೀತಿಯ ಬೆಳವಣಿಗೆಗೆ ಕಾರಣವಾಯಿತು. ಮೊದಲ ಬಾರಿಗೆ ಕ್ಷೇತ್ರದಲ್ಲಿ ಕಮಲ ಅರಳಿತು. ಅಲ್ಲಿಯವರೆಗೂ ಕಾಂಗ್ರೆಸ್ ಜನತಾದಳ ಹೊರತುಪಡಿಸಿದರೆ ಮೂರನೇ ಪಕ್ಷ ಇಲ್ಲಿ ಗೆದ್ದಿರಲಿಲ್ಲ.

1980ರಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಅತಿ ಹೆಚ್ಚು ಮತಗಳ ಅಂತರದಿಂದ ಗೆದ್ದ ದಾಖಲೆ ವೈಶ್ಯ ಸಮುದಾಯದ ಎಸ್.ಎನ್. ಪ್ರಸನ್ನಕುಮಾರ್ ಹೆಸರಿನಲ್ಲಿ ಇತ್ತು. ಅವರು 4,08,214 ಮತ ಪಡೆದಿದ್ದರು. 2019ರ ಚುನಾವಣೆಯಲ್ಲಿ ಬಚ್ಚೇಗೌಡರು 7,45,912 ಮತ ಪಡೆದು ಪ್ರತಿಸ್ಪರ್ಧಿ ವಿರುದ್ಧ 1,82,110 ಮತಗಳಿಂದ ಗೆಲುವು ದಾಖಲಿಸಿದರು.

ಒಕ್ಕಲಿಗರ ಬಹುಸಂಖ್ಯೆಯ ಮತಗಳು ಒಂದೇ ತೆಕ್ಕೆಗೆ ಜಾರಿದ್ದು ಬಚ್ಚೇಗೌಡರು ಈ ಪ್ರಮಾಣದಲ್ಲಿ ಮತ ಗಳಿಸಲು ಕಾರಣ ಎನ್ನುತ್ತಾರೆ ಜಿಲ್ಲೆಯ ರಾಜಕೀಯ ಅಂತರಾಳ ಬಲ್ಲವರು. ಹಲವು ದಶಕಗಳ ನಂತರ ಮತ್ತೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ 'ಗೌಡ'ರ ಕೈವಶವಾಗಿದೆ. ಕ್ಷೇತ್ರವನ್ನು ಮತ್ತೆ ಉಳಿಸಿಕೊಳ್ಳಬೇಕು ಎನ್ನುವ ಪ್ರತಿಷ್ಠೆ ಸಹ ಒಕ್ಕಲಿಗ ಸಮುದಾಯದಲ್ಲಿದೆ. ಮತ್ತೊಂದು ಕಡೆ 'ಅಹಿಂದ' ಸಮುದಾಯಗಳು ಸಹ ರಾಜಕೀಯವಾಗಿ ಜಾಗೃತವಾಗಿವೆ.

ಯಾರ ಬಲ ಎಷ್ಟು?

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಒಕ್ಕಲಿಗ, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಬಲಿಜ ಸಮುದಾಯದ ಮತಗಳು ಹೆಚ್ಚಿನ ಸಂಖ್ಯೆಯಲ್ಲಿವೆ.

ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯದ ಅಂದಾಜು 4.50 ಲಕ್ಷ, ಪರಿಶಿಷ್ಟ ಜಾತಿ ಮತ್ತು ಪಂಗಡದ 5 ಲಕ್ಷ ಮತ್ತು ಬಲಿಜ ಸಮುದಾಯದ 1.80 ಲಕ್ಷ ಮತ ಇವೆ. ಈ ಬಾರಿ ಪ್ರಬಲ ಸಮುದಾಯಗಳ ಒಗ್ಗಟ್ಟು, ಅಹಿಂದ ಮತಗಳ ಧ್ರುವೀಕರಣ ಹೀಗೆ ನಾನಾ ವಿಚಾರ ಈಗಲೇ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಿವೆ.



ಬೆಂಗಳೂರಿನ ಜಯನಗರ ನಾಲ್ಕನೇ ಬ್ಲಾಕಿನ ಗಣಪತಿ ದೇವಸ್ಥಾನದಲ್ಲಿ ಭಾನುವಾರ ನಡೆದ ಸ್ವಚ್ಛತಾ ಕಾರ್ಯಕ್ರಮದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಭಾಗವಹಿಸಿದ್ದರು.

'ಸೋಮಣ್ಣಗೆ ರಾಜ್ಯಸಭೆ ಟಿಕೆಟ್; ನಮ್ಮ ಆಕ್ಷೇಪ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿ.ಸೋಮಣ್ಣ ಅವರಿಗೆ ರಾಜ್ಯಸಭೆಗೆ ಟಿಕೆಟ್ ನೀಡುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಹೈಕಮಾಂಡ್ ಟಿಕೆಟ್ ನೀಡಿದರೆ ಅದನ್ನು ಸ್ವಾಗತಿಸುತ್ತೇವೆ' ಎಂದು ಆರ್.ಅಶೋಕ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಸೋಮಣ್ಣ ಅವರು ದೆಹಲಿಯಿಂದ ಮರಳಿದ ತಕ್ಷಣವೇ ನನಗೆ ದೂರವಾಣಿ ಕರೆ ಮಾಡಿ ಮಾತನಾಡಿದರು. ಎಲ್ಲವೂ ಒಳ್ಳೆಯದಾಗಿದೆ. ಸಮಸ್ಯೆ ಏನಿಲ್ಲ. ಪಕ್ಷದಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ. ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸೋಣ' ಎಂದು ಹೇಳಿದ್ದಾಗಿ ವಿವರಿಸಿದರು.

'ರಾಜ್ಯಸಭಾ ಟಿಕೆಟ್ ವಿಚಾರವನ್ನೂ ಸೋಮಣ್ಣ ಪ್ರಸ್ತಾಪಿಸಿದ್ದು, ಹೈಕಮಾಂಡೇ ಹೇಳಿರುವುದರಿಂದ ನಮ್ಮ ತಕರಾರೇನೂ ಇಲ್ಲ' ಎಂದೂ ಸ್ಪಷ್ಟಪಡಿಸಿದರು.

ತುಮಕೂರಿನಿಂದ ಶೋಭಾ?

ಪ್ರಜಾವಾಣಿ ವಾರ್ತೆ

ತುಮಕೂರು: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತುಮಕೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆ ಎಂದು ಸಂಸದ ಜಿ.ಎಸ್.ಬಸವರಾಜು ಹೊಸ ಹೆಸರು ತೇಲಿ ಬಿಟ್ಟಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ಟಿಕೆಟ್ ನೀಡಿದರೆ ಫಲಿತಾಂಶದ ಬಗ್ಗೆ ಈಗಲೇ ಏನೂ ಹೇಳಲು ಆಗುವುದಿಲ್ಲ' ಎಂದು ಹೇಳಿದ್ದಾರೆ.

'ವಿಧಾನಸಭಾ ಚುನಾವಣೆಯಲ್ಲಿ ಮಾಧುಸ್ವಾಮಿ ಸೋತಿದ್ದಾರೆ. ದುರಹಂಕಾರದವರಿಗೆ ಜನ ಮತ ಹಾಕುವುದಿಲ್ಲ. ಹೈಕಮಾಂಡ್ ನಾಯಕರು ಜನಾಭಿಪ್ರಾಯ ನೋಡಿಕೊಂಡು ಅಭ್ಯರ್ಥಿಯನ್ನು ಘೋಷಿಸುತ್ತಾರೆ. ಪಕ್ಷದಿಂದ ಯಾರಿಗೆ ಟಿಕೆಟ್ ಕೊಟ್ಟರೂ ಅವರ ಪರ ಕೆಲಸ ಮಾಡುತ್ತೇವೆ' ಎಂದರು.

ಮಾಜಿ ಸಚಿವ ವಿ.ಸೋಮಣ್ಣ ತುಮಕೂರಿನಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಇಲ್ಲಿಂದ ಯಾರೇ ಸ್ಪರ್ಧಿಸಿದರೂ ಗೆಲ್ಲಬಹುದು ಎಂದು ಸೋಮಣ್ಣ ಅವರಿಗೆ ಹೇಳಿದ್ದೇನೆ. ಮುಂದಿನ ಅಧಿವೇಶನ ಸಮಯದಲ್ಲಿ ತುಮಕೂರು ಲೋಕಸಭಾ ಕ್ಷೇತ್ರದ ಬಗ್ಗೆ ಚರ್ಚಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮಯ ನೀಡಿದ್ದಾರೆ. ಆಗ ಎಲ್ಲ ವಿಷಯಗಳನ್ನು ಅವರ ಗಮನಕ್ಕೆ ತರುತ್ತೇನೆ. ವಾಸ್ತವ ಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಲೋಕಸಭಾ ಸ್ಪರ್ಧೆಗೆ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್.ರವಿಶಂಕರ್, ಮುಖಂಡ ಎಸ್.ಪಿ.ಚಿದಾನಂದ್ ಸೇರಿದಂತೆ ಹತ್ತಕ್ಕೂ ಹೆಚ್ಚು ಜನ ಆಕಾಂಕ್ಷಿಗಳಿದ್ದಾರೆ. ಜಿಲ್ಲೆಯಲ್ಲಿ ಈ ಬಾರಿ ಕತ್ತೆ ನಿಲ್ಲಿಸಿದರೂ ಪ್ರಧಾನಿ ಮೋದಿ ಮುಖ ನೋಡಿಕೊಂಡು ಜನ ಬಿಜೆಪಿಗೆ ಮತ ನೀಡುತ್ತಾರೆ ಎಂದು ಬಸವರಾಜು ಹೇಳಿದರು.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರಿಗೆ ಅವರದ್ದೇ ಆದ ಶಕ್ತಿಯಿದೆ. ಅವರು ಚಾಣಾಕ್ಷರಿ ದ್ದಾರೆ. ಕಳೆದ ಲೋಕಸಭಾ ಚುನಾವಣೆಯ ಸಮಯದಲ್ಲೂ ದೇವೇಗೌಡರ ವಿರುದ್ಧ ನಾನು ವೈಯಕ್ತಿಕವಾಗಿ ಮಾತನಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಮುದ್ದಹನುಮೇಗೌಡ ಕಾಂಗ್ರೆಸ್ ಸೇರ್ಪಡೆಗೆ ಅಪಸ್ವರ


ಚಿಕ್ಕನಾಯಕನಹಳ್ಳಿ: ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಕಾಂಗ್ರೆಸ್ ಸೇರ್ಪಡೆಗೆ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯ ಬಿ.ಎಸ್. ನಾರಾಯಣಗೌಡ ವಿರೋಧಿಸಿದ್ದಾರೆ.

'ಮುದ್ದಹನುಮೇಗೌಡ ಅನುಕೂಲಸಿಂಧು, ಅಲೆಮಾರಿ ರಾಜಕಾರಣಿ ಎನ್ನುವುದು ಅವರ ರಾಜಕೀಯ ನಡೆಯಿಂದ ಗೊತ್ತಾಗಿದೆ. ಸ್ವಾರ್ಥಕ್ಕಾಗಿ ಯಾವುದೇ ಪಕ್ಷಕ್ಕೆ ಜಿಗಿಯಬಲ್ಲರು. ಅಂಥವರು ಕೇವಲ ಟಿಕೆಟ್‌ಗಾಗಿ ಪಕ್ಷಕ್ಕೆ ಬರುವುದು ಸರಿಯಲ್ಲ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಗೌಡರು ಯಾವುದೇ ಫಲಾಪೇಕ್ಷೆ ಇಲ್ಲದೆ ಪಕ್ಷಕ್ಕೆ ಬರುವುದಾದರೆ ಬರಲಿ. ಈ ಕುರಿತು ಅವರು ಮುಚ್ಚಳಿಕೆ ಬರೆದುಕೊಡಲಿ' ಎಂದು ಹೇಳಿದರು.

'ಮುದ್ದಹನುಮೇಗೌಡರಿಗೆ ಪಕ್ಷ ಜಿಲ್ಲಾ ಪಂಚಾಯಿತಿ, ವಿಧಾನಸಭೆ ಚುನಾವಣೆ ಟಿಕೆಟ್ ನೀಡಿತ್ತು. ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆನಂತರವೂ ಪಕ್ಷ ತೊರೆದಿದ್ದ ಅವರ ಸೇರ್ಪಡೆ ಬಗ್ಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ವಿರೋಧ ಇದೆ' ಎಂದರು.

ಚುನಾವಣಾ ಸಿದ್ಧತೆ ಪರಿಶೀಲನೆಗೆ ಶಾ



ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ ತಿಂಗಳ ಕೊನೆಯಲ್ಲಿ ನಗರಕ್ಕೆ ಬರಲಿದ್ದು, ಲೋಕಸಭಾ ಚುನಾವಣೆ ಸಂಬಂಧ ರಾಜ್ಯದಲ್ಲಿ ಪಕ್ಷ ನಡೆಸುತ್ತಿರುವ ಸಿದ್ಧತೆಗಳನ್ನು ಪರಿಶೀಲನೆ ನಡೆಸಲಿದ್ದಾರೆ.

28 ಸ್ಥಾನಗಳನ್ನು ಗೆಲ್ಲುವ ಗುರಿ ಹಾಕಿಕೊಂಡಿರುವ ಬಿಜೆಪಿ ಇದಕ್ಕಾಗಿ ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿದೆ. ಜೆಡಿಎಸ್‌ಗೆ ಮೂರು ಅಥವಾ ನಾಲ್ಕು ಸ್ಥಾನಗಳನ್ನು ಬಿಟ್ಟುಕೊಡುವ ಸಾಧ್ಯತೆ ಇದೆ.ಪಕ್ಷದ ಅಭ್ಯರ್ಥಿಗಳ ಆಯ್ಕೆ ಬಗ್ಗೆಯೂ ಶಾ ಅವರು ಪಕ್ಷದ ನಾಯಕ ಜತೆ ಚರ್ಚೆ ನಡೆಸಲಿದ್ದಾರೆ.

ಪಕ್ಷದಲ್ಲಿ ಮುನಿಸಿಕೊಂಡಿರುವ ನಾಯಕರನ್ನು ಸಮಾಧಾನಗೊಳಿಸಿ ಚುನಾವಣಾ ಕಾರ್ಯದಲ್ಲಿ ಅವರೆಲ್ಲರನ್ನು ತೊಡಗಿಸಿಕೊಳ್ಳಲು ವರಿಷ್ಠರು ಮುಂದಾಗಿದ್ದಾರೆ. ಶಾ ಅವರು ಬೆಂಗಳೂರಿಗೆ ಬಂದಾಗ ಸಣ್ಣ ಪುಟ್ಟ ಸಮಸ್ಯೆಗಳಿದ್ದರೂ ಅವುಗಳನ್ನು ಬಗೆಹರಿಸಲಿದ್ದಾರೆ. ಅತ್ಯಧಿಕ ಸ್ಥಾನಗಳನ್ನು ಗೆಲ್ಲುವ ಸಂಬಂಧ ಕಾರ್ಯತಂತ್ರ ಗಳನ್ನು ರೂಪಿಸಲು ಮಾರ್ಗದರ್ಶನ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಾಸನಕ್ಕೆ ಶಿವಲಿಂಗೇಗೌಡ ಸೂಕ್ತ ಅಭ್ಯರ್ಥಿ: ಶಿವರಾಂ

ಪ್ರಜಾವಾಣಿ ವಾರ್ತೆ

ಅರಸೀಕೆರೆ: ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರನ್ನು ಹಾಸನ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಸೂಚಿಸುವ ಮೂಲಕ ಮಾಜಿ ಸಚಿವ ಬಿ.ಶಿವರಾಂ ಅಚ್ಚರಿ ಮೂಡಿಸಿದ್ದಾರೆ.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾರು ಸಮರ್ಥ ಅಭ್ಯರ್ಥಿ ಎನ್ನುವ ಪ್ರಶ್ನೆ ನಮ್ಮಲ್ಲಿದೆ. ಜನಾಭಿಪ್ರಾಯ ಸಂಗ್ರಹಿಸಿದ್ದೇವೆ. ಇಡೀ ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಸಮರ್ಥರು ಎನ್ನುವ ಅಭಿಪ್ರಾಯ ಬರುತ್ತಿದೆ. ಎಲ್ಲರ ಪರವಾಗಿ ಅವರ ಹೆಸರನ್ನು ಸೂಚಿಸುತ್ತಿದ್ದೇನೆ' ಎಂದರು.

'ಈ ವಿಷಯದಲ್ಲಿ ಅವರನ್ನು ಕೇಳಿಲ್ಲ. ಇದು ಜನಾಭಿಪ್ರಾಯ. ಹೈಕಮಾಂಡ್ ಗಮನಕ್ಕೂ ತರುತ್ತೇನೆ. ಯಾವ ಜಿಲ್ಲೆಯಲ್ಲಿ ಸಮರ್ಥ ಅಭ್ಯರ್ಥಿ ಇಲ್ಲವೋ, ಅಲ್ಲಿ ಸಚಿವರನ್ನು ಕಣಕ್ಕಿಳಿಸಲು ಹೈಕಮಾಂಡ್ ತೀರ್ಮಾನಿಸಿದೆ' ಎಂದರು.

'ಶಿವಲಿಂಗೇಗೌಡರು ಜೆಡಿಎಸ್ ಬಿಟ್ಟು ಬಂದು ಗೆದ್ದಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಮಣಿಸಲೇಬೇಕೆಂದರೆ ಅವರಿಗಿಂತ ಸಮರ್ಥ ಅಭ್ಯರ್ಥಿ ಇಲ್ಲ. ಜೆಡಿಎಸ್-ಬಿಜೆಪಿ ಒಂದಾಗಿವೆ. ಆ ಕುಟುಂಬದ ವಿರುದ್ಧ ಯಾರಾದರೊಬ್ಬ ಸಮರ್ಥ ಅಭ್ಯರ್ಥಿ ಇದ್ದರೆ ಶಿವಲಿಂಗೇಗೌಡರು ಮಾತ್ರ' ಎಂದರು.

'ಒಂದು ಹೆಜ್ಜೆ ಮುಂದಿಡಲೂ ಸಂಪನ್ಮೂಲ ಅವಶ್ಯ. ಸಾಕಷ್ಟು ಸಂಪನ್ಮೂಲ ಇರುವುದು ಶಿವಲಿಂಗೇಗೌಡರ ಹತ್ತಿರ ಮಾತ್ರವೇ' ಎಂದರು.

'40 ವರ್ಷ ರಾಜಕೀಯದಲ್ಲಿ ನಿಷ್ಠೆಯಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ನನಗೂ ಅಧಿಕಾರ ವಂಚನೆ ಆಗುತ್ತಿದೆ. ಮೂಲೆ ಗುಂಪಾಗುತ್ತಿದ್ದೇನೆ ಎನಿಸುತ್ತಿದೆ' ಎಂದು ಹೇಳಿದರು.


'ಅಧಿಕಾರ ಕೊಟ್ಟವರಾರು?'

'ಲೋಕಸಭಾ ಚುನಾವಣೆಗೆ ನಾನು ಯಾವುದೇ ಕಾರಣಕ್ಕೂ ಅಭ್ಯರ್ಥಿಯಲ್ಲ. ಬಿ. ಶಿವರಾಂ ಅವರ ಈ ರೀತಿಯ ಹೇಳಿಕೆಯಿಂದ ಅವರ ವರ್ಚಸ್ಸಿಗೆ ಧಕ್ಕೆಯಾಗಲಿದೆ' ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

'ಬಿ. ಶಿವರಾಂ ಹಾಸನ ಲೋಕಸಭೆ ಚುನಾವಣೆಗೆ ನನ್ನನ್ನು ಅಭ್ಯರ್ಥಿ ಮಾಡುವಂತೆ ಹೇಳಿರುವುದು ಸರಿಯಲ್ಲ. ಅವರಿಗೆ ಈ ಅಧಿಕಾರ ಕೊಟ್ಟವರು ಯಾರು? ಅವರು 4 ಬಾರಿ ಶಾಸಕರಾಗಿ, ಸಚಿವರಾಗಿ ಅಧಿಕಾರ ಮಾಡಿದ್ದಾರೆ. ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಕೆಲಸ ಮಾಡಿರುವ ಅವರೇ ಚುನಾವಣೆಗೆ ನಿಲ್ಲಲಿ. ಅದನ್ನು ಬಿಟ್ಟು ಇನ್ನೊಬ್ಬರ ಹೆಸರನ್ನು ಹೇಳುವುದು ಸರಿಯಲ್ಲ' ಎಂದರು.

'ಜೀವ ಬೆದರಿಕೆ ಬಂದಿದೆ'

ಪ್ರಜಾವಾಣಿ ವಾರ್ತೆ



ಜಿ.ಎಂ. ಸಿದ್ದೇಶ್ವರ

ದಾವಣಗೆರೆ: 'ಚುನಾವಣೆ ಸಂದರ್ಭದಲ್ಲಿ ವಿರೋಧಿಗಳು ನನ್ನ ವಿರುದ್ಧ ಪಿತೂರಿ ನಡೆಸುತ್ತಿದ್ದು, ನನಗೆ ಜೀವ ಬೆದರಿಕೆಯೂ ಇದೆ. ಭದ್ರತೆ ಒದಗಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡುತ್ತೇನೆ' ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

'ಕಳೆದ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಾಳ್ಯದ ಕಾರು ಚಾಲಕ ಸ್ವಾಮಿಯನ್ನು ಕಳ್ಳತನ ಆರೋಪದ ಮೇಲೆ ಬಂಧಿಸಿ, ವಿಚಾರಣೆ ನಡೆಸಿ ಆತನಿಂದ ನಗದು, ಮೊಬೈಲ್, ಚಿನ್ನಾಭರಣ ಒಳಗೊಂಡಂತೆ ₹ 96 ಲಕ್ಷ ವಶಪಡಿಸಿಕೊಂಡಿದ್ದರು. 'ಅದು ಹವಾಲಾ ದುಡ್ಡು. ಜಿ.ಎಂ. ಸಿದ್ದೇಶ್ವರ ಹಾಗೂ ಪ್ರಸ ನ್ನಕುಮಾರ್ ಎಂಬುವವರಿಗೆ ಸೇರಿದ್ದು' ಎಂದು ತನಿಖೆಯ ವೇಳೆ ಆತ ಬಾಯಿ ಬಿಟ್ಟಿದ್ದಾನೆ ಎನ್ನಲಾಗಿದೆ. ನನಗಾಗಲಿ, ನನ್ನ ಸಂಸ್ಥೆಗಳಿಗಾಗಲಿ, ಸಹೋದರಿಗಾಗಲಿ ಈ ಹಣದೊಂದಿಗೆ ಸಂಬಂಧವಿಲ್ಲ. ನಾವು ವರ್ಷಕ್ಕೆ ₹ 50 ಕೋಟಿ ತೆರಿಗೆ ಕಟ್ಟಿ ವ್ಯಾಪಾರ ಮಾಡುತ್ತೇವೆ' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಗೆದ್ದಿರುವ ನನ್ನನ್ನು ಸೋಲಿಸಬೇಕು ಎಂದೇ ಇಂಥ ಪಿತೂರಿಗಳು ನಡೆಯುತ್ತಿವೆ. 5ನೇ ಬಾರಿಗೆ ಸ್ಪರ್ಧಿಸುವುದು ಖಚಿತವಾಗುತ್ತಿರುವ ಹಿನ್ನೆಲೆಯಲ್ಲಿ ಆಧಾರರಹಿತ ಆರೋಪ ಕೇಳಿ ಬರುತ್ತಿರುವುದರ ಹಿಂದೆ ಯಾವುದೋ ಕಾಣದ ಕೈಗಳ ಕೈವಾಡ ಇರಬಹುದು. ನನ್ನ ಮೇಲೆ ದಾಳಿ ನಡೆಸುವ ಸಾಧ್ಯತೆಯೂ ಇದೆ' ಎಂದು ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಈ ಕ್ಷಣವನ್ನು ವಿವೇಕಯುತವಾಗಿ ಮತ್ತು ಮನಃಪೂರ್ವಕವಾಗಿ ಕಳೆಯುವುದೇ ಮನಸ್ಸು ಹಾಗೂ ದೇಹ ಎರಡರ ಆರೋಗ್ಯದ ಗುಟ್ಟು.

—ಗೌತಮ ಬುದ್ಧ

ಪ್ರಜಾಪ್ರಭುತ್ವದ ಹೊಳಪು ಕಳೆದುಕೊಂಡ ಹಸೀನಾ ಚಾರಿತ್ರಿಕ ಗೆಲುವು

ಬಾಂಗ್ಲಾ ದೇಶದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಗೆದ್ದಿರುವುದರಲ್ಲಿ ಅಂತಹ ಆಶ್ಚರ್ಯವೇನೂ ಇಲ್ಲ. 'ಇದು ಜನರ ಗೆಲುವು' ಎಂದು ಚುನಾವಣಾ ಫಲಿತಾಂಶವನ್ನು ಹಸೀನಾ ಅವರು ಬಣ್ಣಿಸಿದ್ದಾರೆ. ಆದರೆ, ಪರಿಸ್ಥಿತಿ ಹಾಗೆ ಬಣ್ಣಿಸುವ ರೀತಿಯಲ್ಲಿ ಇರಲಿಲ್ಲ. ಶೇಕಡ 40ರಷ್ಟು ಮತದಾರರು ಮಾತ್ರ ತಮ್ಮ ಹಕ್ಕು ಚಲಾಯಿಸಿದ್ದಾರೆ. ಪ್ರಮುಖ ವಿರೋಧ ಪಕ್ಷವಾಗಿದ್ದ ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಚುನಾವಣೆಯನ್ನು ಬಹಿಷ್ಕರಿಸಿತ್ತು. ತಟಸ್ಥ ಉಸ್ತುವಾರಿ ಸರ್ಕಾರದ ಮೇಲ್ವಿಚಾರಣೆಯಲ್ಲಿ ಚುನಾವಣೆ ನಡೆಯಬೇಕು ಎಂಬ ಬಿಎನ್‌ಪಿಯ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿದ್ದು ಇದಕ್ಕೆ ಕಾರಣ. ಪ್ರಧಾನಿಯಾಗಿ ಹಸೀನಾ ಅವರ ಸತತ ನಾಲ್ಕನೇ ಅವಧಿಯಲ್ಲಿ ಕೂಡ ರಾಜಕೀಯ ಸಂಬಂಧಗಳು ವಿಷಮಯವಾಗಿಯೇ ಇರಲಿವೆ ಎಂಬುದಕ್ಕೆ ಇದು ಸೂಚನೆಯೂ ಹೌದು. ಅವಾಮಿ ಲೀಗ್ ಮತ್ತು ಬಿಎನ್‌ಪಿ ನಡುವಣ ಸಂಘರ್ಷವೂ ನಿರಂತರವಾಗಿ ನಡೆಯಲಿದೆ. ಕಳೆದ 10–12 ವರ್ಷಗಳಲ್ಲಿ ಈ ಎರಡು ಪಕ್ಷಗಳ ಮೇಲಾಟವನ್ನು ಬಾಂಗ್ಲಾ ದೇಶದ ಬೀದಿಗಳು ಕಂಡಿದ್ದವು. ವಿರೋಧ ಪಕ್ಷವು ವ್ಯಾಪಕವಾಗಿ ಧರಣಿ ಮತ್ತು ಪ್ರತಿಭಟನೆಗಳನ್ನು ನಡೆಸಿದರೆ, ಸರ್ಕಾರವು ಕಠಿಣ ಕ್ರಮಗಳ ಮೂಲಕ ಅವುಗಳನ್ನು ಹತ್ತಿಕ್ಕುವ ಪ್ರಯತ್ನ ನಡೆಸಿತ್ತು. ಪ್ರತಿಯೊಂದು ಪ್ರತಿಭಟನೆಯ ಸಂದರ್ಭದಲ್ಲಿಯೂ ಹಿಂಸೆ ಮತ್ತು ರಕ್ತಪಾತ ಅನಿವಾರ್ಯ ಎಂಬಂತೆ ನಡೆದಿದ್ದವು. ಪ್ರಗತಿಪರ ನಾಯಕಿ ಎಂದು ಜಗತ್ತು ಒಂದು ಕಾಲದಲ್ಲಿ ಕೊಂಡಾಡಿದ್ದ ಹಸೀನಾ ಅವರು, ಟೀಕಾಕಾರರು ಮತ್ತು ಮಾಧ್ಯಮವನ್ನು ಸುಮ್ಮನಿರಿಸಿ ಅಧಿಕಾರದ ಮೇಲೆ ಬಿಗಿಹಿಡಿತ ಸಾಧಿಸುವುದಕ್ಕಾಗಿ ನಿರಂಕುಶಾಧಿಕಾರಿಯಾಗಿ ಪರಿವರ್ತಿತರಾಗಿದ್ದಾರೆ. ಬಾಂಗ್ಲಾ ದೇಶದ ರಾಷ್ಟ್ರಪಿತ ಶೇಖ್ ಮುಜೀಬುರ್ ರೆಹಮಾನ್ ಅವರ ರಾಜಕೀಯ ಉತ್ತರಾಧಿಕಾರಿಯಾದ ಹಸೀನಾ ಅವರು ದಮನಕಾರಿಯಾಗಿ ಬದಲಾಗಿದ್ದು ದುರದೃಷ್ಟಕರ.



ಬಾಂಗ್ಲಾ ದೇಶದಲ್ಲಿ ಸ್ಥಿರ ಮತ್ತು ಪ್ರಜಾಸತ್ತಾತ್ಮಕ ಸರ್ಕಾರ ಇರುವುದು ಭಾರತ ಹಾಗೂ ಈ ಪ್ರದೇಶದ ಹಿತಾಸಕ್ತಿಗೆ ಅಗತ್ಯವಾಗಿದೆ

ಬಾಂಗ್ಲಾ ದೇಶವನ್ನು ಜಗತ್ತು ನೋಡುವ ರೀತಿಯೇ ಸರಿಯಾಗಿಲ್ಲ ಎಂದು ಹಸೀನಾ ಅವರು ಹೇಳುತ್ತಿದ್ದಾರೆ. ಅವರು ಮತ್ತು ಅವರ ಪಕ್ಷದ ಪ್ರತಿಪಾದನೆ ಹೀಗಿದೆ: 'ಐದು ದಶಕಗಳ ಹಿಂದೆ ಹಿಂಸಾತ್ಮಕ ಸನ್ನಿವೇಶದಲ್ಲಿ ಸೃಷ್ಟಿಯಾದ ಸಣ್ಣ ದೇಶ ನಮ್ಮದು. ವಿರೋಧ ಪಕ್ಷಗಳು 'ಪ್ರಜಾಸತ್ತಾತ್ಮಕ' ಅಲ್ಲದ ರೀತಿಯಲ್ಲಿ ವರ್ತಿಸಿದ್ದನ್ನು ನಿಭಾಯಿಸಲೇಬೇಕಾಗಿತ್ತು. ಈ ಎಲ್ಲದರ ನಡುವೆಯೂ ದೇಶದ ಅರ್ಥ ವ್ಯವಸ್ಥೆಯನ್ನು ಉತ್ತಮಪಡಿಸಲು ನಮಗೆ ಸಾಧ್ಯವಾಗಿದೆ. ಹಾಗೆಯೇ ಮುಸ್ಲಿಂ ತೀವ್ರವಾದದ ವಿರುದ್ಧ ಕಠಿಣ ಕ್ರಮಗಳನ್ನೂ ಕೈಗೊಳ್ಳಲಾಗಿದೆ'. ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಹಿಂದಕ್ಕೆ ಜಾರುವ ಪ್ರವೃತ್ತಿ ಈಗ ಕಾಣಿಸಿಕೊಂಡಿದೆ. ಇಂತಹ ಸನ್ನಿವೇಶದಲ್ಲಿ ಹಸೀನಾ ಅವರು ಈ ಪ್ರದೇಶದಲ್ಲಿ ಮತ್ತು ಜಗತ್ತಿನಲ್ಲಿ ಇನ್ನಷ್ಟು ಉತ್ತಮವಾದ ನಿದರ್ಶನವಾಗಿ ನಿಲ್ಲಬೇಕಿತ್ತು ಎಂದು ಜಗತ್ತಿನ ಹಲವು ದೇಶಗಳು ಬಯಸುತ್ತಿವೆ.

ವಿರೋಧ ಪಕ್ಷಗಳ ನಾಯಕರನ್ನು ಬಂಧಿಸಿ ಸೆರೆಯಲ್ಲಿ ಇರಿಸಿರುವುದು ಅಕ್ರಮ ಎಂದು ಅಮೆರಿಕ ಹಾಗೂ ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿವೆ. ಆದರೆ, ಹಸೀನಾ ಅವರ ಪುನರಾಯ್ಕೆಯನ್ನು ಭಾರತವು ಸ್ವಾಗತಿಸಿದೆ. ಭಾರತದ ಜೊತೆಗೆ ಬಾಂಗ್ಲಾ ದೇಶವು ಸ್ನೇಹದಿಂದ ಇದೆ. ಚಾರಿತ್ರಿಕ ಗೆಲುವಿಗಾಗಿ ಹಸೀನಾ ಅವರಿಗೆ ಅಭಿನಂದನೆ ಸಲ್ಲಿಸಿದ ಮೊದಲಿಗರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೂ ಒಬ್ಬರು. ಭಾರತವು ಹಸೀನಾ ಅವರನ್ನು ಎರಡು ದಶಕಗಳಿಂದ ನಿರಂತರವಾಗಿ ಬೆಂಬಲಿಸುತ್ತಲೇ ಬಂದಿದೆ. ನೆರೆಯ ದೇಶಗಳು ಇಸ್ಲಾಂ ಮೂಲಭೂತವಾದಕ್ಕೆ ನೀಡುವ ಒತ್ತಾಸೆಯ ಕುರಿತು ಭಾರತವು ಕಳವಳ ಹೊಂದಿದೆ. ಈ ಕುರಿತ ಭಾರತದ ಅಗತ್ಯಗಳಿಗೆ ಹಸೀನಾ ಅವರು ಪೂರಕವಾಗಿ ಸ್ಪಂದಿಸಿದ್ದಾರೆ. ಹಸೀನಾ ಅವರಿಗೂ ಹಿಂದೆ ಪ್ರಧಾನಿಯಾಗಿದ್ದ ಖಲೀದಾ ಜಿಯಾ ಅವರ ನೇತೃತ್ವದ ಮೈತ್ರಿಕೂಟದಲ್ಲಿ ಮುಸ್ಲಿಂ ಮೂಲಭೂತವಾದಿ ರಾಜಕೀಯ ಪಕ್ಷಗಳು ಇದ್ದವು. ಹಾಗಾಗಿ, ಆ ಅವಧಿಯು ದುಃಸ್ವಪ್ನವಾಗಿ ಕಾಡಿದ್ದನ್ನು ಭಾರತವು ಇನ್ನೂ ಮರೆತಿಲ್ಲ. ಅಲ್ಪಸಂಖ್ಯಾತರಾದ ಹಿಂದೂಗಳು ಮತ್ತು ಅವರ ಪೂಜಾ ಸ್ಥಳಗಳ ರಕ್ಷಣೆಗೆ ಹಸೀನಾ ಅವರು ದೃಢ ಕ್ರಮಗಳನ್ನು ಕೈಗೊಂಡಿದ್ದಾರೆ. ಭಾರತ ಮತ್ತು ಚೀನಾದ ವಿಷಮ ಸಂಬಂಧವನ್ನು ಹಸೀನಾ ಅವರು ಸರಿಯಾಗಿ ಗ್ರಹಿಸಿಕೊಂಡಿದ್ದಾರೆ; ಹಾಗಾಗಿ, ಚೀನಾದ ವಿಚಾರದಲ್ಲಿ ಭಾರತಕ್ಕೆ ಪೂರಕವಾಗಿ ನಡೆದುಕೊಂಡಿದ್ದಾರೆ. ವಿರೋಧಾಭಾಸದ ಅಂಶವೆಂದರೆ, ಹಸೀನಾ ಅವರಿಗೆ ಭಾರತ ನೀಡುತ್ತಿರುವ ಬೆಂಬಲವೇ ಸ್ವದೇಶದಲ್ಲಿ ಅವರ ಜನಪ್ರಿಯತೆ ಕುಸಿಯಲು ಕಾರಣವಾಗಿದೆ. ರಾಜಕೀಯವಾಗಿ ಅವರ ಶಕ್ತಿ ಕುಗ್ಗುತ್ತಿದೆ ಎಂಬುದನ್ನು ಭಾರತವು ನಿರ್ಲಕ್ಷಿಸುವಂತಿಲ್ಲ. ಬಾಂಗ್ಲಾ ದೇಶದಲ್ಲಿ ಸ್ಥಿರ ಮತ್ತು ಪ್ರಜಾಸತ್ತಾತ್ಮಕ ಸರ್ಕಾರ ಇರುವುದು ಭಾರತ ಹಾಗೂ ಈ ಪ್ರದೇಶದ ಹಿತಾಸಕ್ತಿಗೆ ಅಗತ್ಯವಾಗಿದೆ. ಭಾರತದಿಂದ ಬಾಂಗ್ಲಾ ದೇಶಕ್ಕೆ ಈ ಸಂದೇಶ ಹೋಗಬೇಕಾಗಿದೆ.

ದಿನದ ಟ್ವೀಟ್



ಜಾತಿ ಜಾತಿ ಜಾತಿ...

ಹಳ್ಳಿ ಅಂದರೆ ಜಾತಿ ಜಾತಿ ಜಾತಿ ಅನ್ನುವಂತಾಗಿದೆ. ಅಂತರ್‌ಜಾತಿ ಮತ್ತು ಅಂತರ್‌ಧರ್ಮದ ಮದುವೆ, ಪ್ರೇಮಮದುವೆ ಬಲು ಕಷ್ಟ. ನಗರಗಳಲ್ಲಿ ಜನ ಈ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳುವುದಿಲ್ಲ. ಇದೂ ಒಂದು ಕಾರಣ.

(ಹಳ್ಳಿವಾಸಿಗಳಿಗೆ ಹೆಣ್ಣು ಕೊಡುವವರಿಲ್ಲದೆ ವಧುಗಳ ಕೊರತೆಯು ಸಾಮಾಜಿಕ ಸಮಸ್ಯೆಯಾಗಿ ಮಾರ್ಪಟ್ಟಿದೆ ಎಂಬ ವರದಿಗೆ ಪ್ರತಿಕ್ರಿಯೆ)

ಶ್ರೀನಿವಾಸ ಕಾರ್ಕಳ

ಕಿಡಿನುಡಿ



ಪುರಾಣ, ಮಹಾಕಾವ್ಯಗಳಲ್ಲಿ ಗರ್ವಭಂಗ ಎಂಬ ಮಾತಿದೆ. ಭೀಮನಿಗೆ ಗರ್ವ ಬಂದಾಗ ಆಂಜನೇಯನನ್ನು ಅಲುಗಾಡಿಸಲು ಆಗಲಿಲ್ಲ. ಅರ್ಜುನನಿಗೆ ಗರ್ವ ಹೆಚ್ಚಾದಾಗ ಮಗನನ್ನೇ ಕಳೆದುಕೊಂಡ. ಯಾವುದೇ ಆದರೂ ಅತಿಯಾದಾಗ ಅದು ತನ್ನಿಂದತಾನೇ ಕೊನೆಯಾಗುತ್ತದೆ. ನಾನತ್ವ ಎನ್ನುವುದು ಒಳ್ಳೆಯದಲ್ಲ. ಹಿಂದೂ ಎನ್ನುವುದು ಸಹಜ ಧರ್ಮ. ಹಿಂದುತ್ವ ಎನ್ನುವುದು ನಾನತ್ವ. ಈ ನಾನತ್ವ ಇರುವವರಿಗೆ ಮತದಾರರು ಮುಂದಿನ ಚುನಾವಣೆಯಲ್ಲಿ ಅವಕಾಶ ನೀಡಬಾರದು.

ದೇವನೂರ ಮಹಾದೇವ, ಸಾಹಿತಿ

25 ವರ್ಷಗಳ ಹಿಂದೆ

ಶುಕ್ರವಾರ, 15-1-1999

• **ಶಬರಿಮಲೆಯಲ್ಲಿ ದುರಂತ 51 ಭಕ್ತರ ದುರ್ಮರಣ**

ಶಬರಿಮಲೆ, ಜ. 14 (ಪಿಟಿಐ, ಯುಎನ್‌ಐ)– ಇಲ್ಲಿಗೆ ಸಮೀಪದ ಪಂಬಾ ಬೆಟ್ಟದ ಮೇಲೆ ಸಂಭವಿಸಿದ ನೂಕುನುಗ್ಗಲು ಹಾಗೂ ಭೂಕುಸಿತದಲ್ಲಿ ಕನಿಷ್ಠ 51 ಮಂದಿ ಅಯ್ಯಪ್ಪ ಭಕ್ತರು ಸತ್ತಿದ್ದು, 50ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಸತ್ತವರಲ್ಲಿ ನಾಲ್ವರು ಮಕ್ಕಳು ಹಾಗೂ ಒಬ್ಬ ಮಹಿಳೆಯೂ ಸೇರಿದ್ದಾರೆ.

'ಮಕರ ಜ್ಯೋತಿ'ಯ ದರ್ಶನ ಪಡೆದು ಪಂಬಾಕ್ಕೆ ಭಕ್ತಾದಿಗಳು ಹಿಂದಿರುಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿತು.

ಪಂಬಾದಿಂದ ಸನ್ನಿಧಾನದವರೆಗಿನ ಏಳು ಕಿ.ಮೀ. ಉದ್ದದ ದಾರಿಯಲ್ಲಿ ಭಕ್ತಾದಿಗಳು ಕಿಕ್ಕಿರಿದು ತುಂಬಿದ್ದರಿಂದ ಜ್ಯೋತಿಯ ದರ್ಶನ ಪಡೆಯಲು ಕೆಲವರು ಹತ್ತಿರದ ಗುಡ್ಡ ಹತ್ತಿದರು. ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ನೂಕುನುಗ್ಗಲಿನಿಂದ ಗುಡ್ಡದ ಒಂದು ಭಾಗ ಕುಸಿಯಿತು. ಭೂಕುಸಿತದಿಂದಾಗಿ 60 ಅಡಿ ಎತ್ತರದಿಂದ ಕೆಳಗೆ ಬಿದ್ದ ಕೆಲ ಭಕ್ತಾದಿಗಳು ಮಣ್ಣಿನಡಿಯಲ್ಲಿ ಹೂತುಹೋದರು ಎಂದು ವರದಿಗಳು ತಿಳಿಸಿವೆ.

ಭಕ್ತರ ಗುಂಪನ್ನು ನಿಯಂತ್ರಿಸಲು ಕಟ್ಟಿದ್ದ ಹಗ್ಗ ತುಂಡಾಗಿ ಈ ದುರಂತ ಸಂಭವಿಸಿದೆ ಎಂದು ಮತ್ತೊಂದು ವರದಿ ತಿಳಿಸಿದೆ.

ಮೃತಪಟ್ಟವರ ಪೈಕಿ ಇದುವರೆಗೆ ಗುರುತಿಸಲಾಗಿರುವವರಲ್ಲಿ ಕೇರಳ, ಆಂಧ್ರಪ್ರದೇಶ, ತಮಿಳುನಾಡಿನಿಂದ ಬಂದ ಭಕ್ತರು ಸೇರಿದ್ದಾರೆ.

• **ರಾಜ್ಯ ವಿಧಾನಸಭೆ ಉಪಾಧ್ಯಕ್ಷ ಚಂದ್ರಶೇಖರ ಮಾಮನಿ ನಿಧನ**

ಬೆಳಗಾವಿ, ಜ. 14– ರಾಜ್ಯ ವಿಧಾನಸಭೆ ಉಪಾಧ್ಯಕ್ಷ ಮತ್ತು ಸವದತ್ತಿ ಕ್ಷೇತ್ರದ ಶಾಸಕ ಚಂದ್ರಶೇಖರ ಮಾಮನಿ (62) ಇಂದು ಬೆಳಿಗ್ಗೆ ಸವದತ್ತಿಯ ತಮ್ಮ ಮನೆಯಲ್ಲಿ ತೀವ್ರ ಹೃದಯಾಘಾತದ ನಂತರ ನಿಧನರಾದರು.

ಬೆಂಗಳೂರಿನಿಂದ ಕಿತ್ತೂರು ರಾಣಿ ಚನ್ನಮ್ಮ ರೈಲಿನಲ್ಲಿ ಹುಬ್ಬಳ್ಳಿಗೆ ಬಂದು ಕಾರಿನಲ್ಲಿ ಸವದತ್ತಿಗೆ ಬರುತ್ತಿರುವಾಗಲೇ ಮಾರ್ಗ ಮಧ್ಯದಲ್ಲಿ ಅವರು ಎದೆನೋವು ಅನುಭವಿಸಿದರು. ಅವರ ಕಾರು ಧಾರವಾಡಕ್ಕೆ ಬರುವ ವೇಳೆಗೆ ನೋವು ತೀವ್ರವಾಯಿತು. 'ವೈದ್ಯರ ಬಳಿ ಹೋಗೋಣ' ಎಂದು ಜೊತೆಗಿದ್ದ ಗನ್‌ಮ್ಯಾನ್ ಹೇಳಿದರೂ ಮಾಮನಿಯವರು ಊರಿಗೆ ತೆರಳಿದರು.

• **ಚಿಕ್ಕಮಗಳೂರಿನಲ್ಲಿ ಬಂಡಾಯ: ದಳ ನಾಯಕರ ಸಾಮೂಹಿಕ ರಾಜೀನಾಮೆ**

ಚಿಕ್ಕಮಗಳೂರು, ಜ. 14– ಪ್ರದೇಶ ಜನತಾದಳ ಅಧ್ಯಕ್ಷ ಸ್ಥಾನದಿಂದ ಸಕಾರಣ ಇಲ್ಲದೆ ಬಿ.ಎಲ್.ಶಂಕರ್ ಅವರನ್ನು ಕೈಬಿಟ್ಟ ಕ್ರಮವನ್ನು ಪ್ರತಿಭಟಿಸಿ ಜಿಲ್ಲಾ ಜನತಾದಳ ಘಟಕದ ಅಧ್ಯಕ್ಷ, ಪದಾಧಿಕಾರಿಗಳು, ಜಿಲ್ಲೆಯ ಆರು ವಿಧಾನಸಭೆ ಕ್ಷೇತ್ರಗಳ ಅಧ್ಯಕ್ಷ, ಪದಾಧಿಕಾರಿಗಳು ಇಂದು ರಾಜೀನಾಮೆ ನೀಡಿದ್ದಾರೆ. ಜಿಲ್ಲೆಯ ಸಚಿವ ಬಿ.ಬಿ.ನಿಂಗಯ್ಯ ಹಾಗೂ ಶಾಸಕರು ಈ ತೀರ್ಮಾನವನ್ನು ಅನುಮೋದಿಸಿದ್ದಾರೆ.

ಜಿಲ್ಲಾ ಜನತಾದಳ ಘಟಕದ ಪ್ರಮುಖರ ಸಭೆ ಬಳಿಕ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅಧ್ಯಕ್ಷ ಎಚ್.ಟಿ.ರಾಜೇಂದ್ರ ಅವರು ಈ ವಿಷಯ ತಿಳಿಸಿದರು.

ಚಿಕ್ಕಮಗಳೂರು ತಾಲ್ಲೂಕು ಘಟಕದ ಅಧ್ಯಕ್ಷ, ಜಿಲ್ಲಾ ಪಂಚಾಯಿತಿ ಸದಸ್ಯರಾದ ಟಿ.ಡಿ.ರಾಜೇಗೌಡ ನಿನ್ನೆಯೇ ತಮ್ಮ ಬೆಂಬಲಿಗರೊಂದಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಆಕ್ರಮಣಕಾರಿ ಮಂಗಗಳಿಂದ ಮಲೆನಾಡಿನ ಕೆಂಪುಮೂತಿ ಮಂಗಗಳಿಗೆ ಆಪತ್ತು

ರೀಸೆಸ್ ಮಂಗಗಳ ನೆಲೆ ವಿಸ್ತರಣೆ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ನಗರವಾಸಿಗಳ ವಾರಾಂತ್ಯದ ಮೋಜು ಮಸ್ತಿಯಿಂದಾಗಿ ಪಶ್ಚಿಮಘಟ್ಟಗಳು ನಲುಗುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಯೋಜನೆಗಳು ಹನುಮಂತನ ಬಾಲದಂತೆ ಬೆಳೆಯುತ್ತಿವೆ. ಪರಿಸರ ಪ್ರವಾಸೋದ್ಯಮವು ಸರ್ಕಾರದ ಖಜಾನೆಗೆ ಕನ್ನ ಹಾಕುತ್ತಿದೆ. ಇದೇ ಹೊತ್ತಿನಲ್ಲಿ, ಮನುಷ್ಯೇತರ ಪ್ರಾಣಿಗಳು ತಮ್ಮ ನೆಲೆ ವಿಸ್ತರಣೆ ಮಾಡಿಕೊಳ್ಳುತ್ತಿರುವ ವಿಚಿತ್ರ ವಿದ್ಯಮಾನ ನಡೆಯುತ್ತಿದೆ.

2017ರಲ್ಲಿ ಆಡಳಿತದ ಅವಧಿ ಮುಗಿಸಿದ ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ವೀರಭದ್ರ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರ ನಂತರದ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸುವುದಕ್ಕೆ ಕಾರಣವಾದ ಅಂಶಗಳಲ್ಲಿ, ವೋಟಿನ ಹಕ್ಕನ್ನೇ ಹೊಂದಿರದ ಮಂಗಗಳ ವಿಷಯ ಸಹ ಸೇರಿತ್ತು ಎಂಬುದನ್ನು ನಂಬುವುದು ಕಷ್ಟ! ಆದರೆ, ಇದು ಸತ್ಯ. ರೀಸೆಸ್ ಮಂಗಗಳ ಉಪಟಳ ಎಷ್ಟು ಹೆಚ್ಚಿತ್ತೆಂದರೆ, ಅಲ್ಲಿ ಲಾಗಾಯ್ತಿನಿಂದ ಬಾಸ್ಮತಿ ಭತ್ತ ಬೆಳೆಯುತ್ತಿದ್ದ ರೈತರು, ಈ ಮಂಗಗಳ ದಾಳಿಯಿಂದಾಗಿ ಬಾಸ್ಮತಿ ಬೆಳೆಯುವುದನ್ನೇ ನಿಲ್ಲಿಸಿದರು. ಆ ಸರ್ಕಾರದ ಅವಧಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆ ನಷ್ಟದ ಬಾಬ್ತು ಸಾವಿರ ಕೋಟಿ ರೂಪಾಯಿಗೂ ಹೆಚ್ಚು.

ಮಂಗಗಳನ್ನು ನಿಯಂತ್ರಿಸಲು ವಿಫಲವಾದ ಸರ್ಕಾರದ ವಿರುದ್ಧ ಚುನಾವಣೆಯಲ್ಲಿ ರೈತರು ಮತ ಚಲಾಯಿಸಿದರು ಎಂಬ ವಿಶ್ಲೇಷಣೆಗಳು ಆಗ ಪ್ರಕಟ ಆಗಿದ್ದವು. ಮಂಗಗಳಿಂದ ಆದ ನಷ್ಟವನ್ನು ಭರಿಸಲು ಸರ್ಕಾರ ₹ 500 ಕೋಟಿಯ ಪ್ಯಾಕೇಜ್ ನೀಡಿದರೂ ಪ್ರಯೋಜನಕ್ಕೆ ಬರಲಿಲ್ಲ. ಒಂದೂವರೆ ಲಕ್ಷಕ್ಕೂ ಹೆಚ್ಚು ಮಂಗಗಳನ್ನು ಹಿಡಿದು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಲಾಯಿತು. ಒಂದು ವರ್ಷದ ಅವಧಿಗೆ ಈ ಮಂಗಗಳನ್ನು ಪೀಡೆಯೆಂದು ಪರಿಗಣಿಸಬೇಕು ಎಂದು ಸರ್ಕಾರ ಸುತ್ತೋಲೆ ಹೊರಡಿಸಿತು.

ಈಗ ಸುಮಾರು 60-70 ವರ್ಷಗಳ ಹಿಂದೆ, ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ರೀಸೆಸ್ ಮಂಗಗಳು ದಾಟಿ ಬರದಂತೆ ಗೋದಾವರಿ ಹಾಗೂ ತಪತಿ ನದಿಗಳು ನೈಸರ್ಗಿಕ ತಡೆಗೋಡೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿದ್ದು, ಜಲಸಾರಿಗೆಯನ್ನು ಅಭಿವೃದ್ಧಿಪಡಿಸಿದ್ದರಿಂದಾಗಿ ನೈಸರ್ಗಿಕ ಗೋಡೆಗೆ ಅಡಚಣೆ ಉಂಟಾಯಿತು. ಜೊತೆಗೆ ಉತ್ತರ ಭಾರತದಲ್ಲಿ ಮಂಗಗಳ ಉಪಟಳ ಹೆಚ್ಚಾದ ಕಾರಣಕ್ಕೆ, ಈ ಎರಡೂ ನದಿಗಳನ್ನು ಬಳಸಿಕೊಂಡು, ಅವುಗಳನ್ನು ಹಿಡಿದು ದಕ್ಷಿಣ ಭಾರತಕ್ಕೆ ಬಿಡಲಾಯಿತು.

ಉತ್ತರ ಭಾರತದ ರೀಸೆಸ್ ಮಂಗಗಳು ದಕ್ಷಿಣ ಭಾರತದ ಕೆಂಪುಮೂತಿಯ ಮಂಗಗಳಿಗಿಂತ ಗಾತ್ರದಲ್ಲಿ ದೊಡ್ಡವು ಹಾಗೂ ಹೆಚ್ಚು ಆಕ್ರಮಣಕಾರಿ. ರೀಸೆಸ್ ಮಂಗಗಳು ಅತಿ ಚಳಿಯ ಹಿಮಾಲಯದಲ್ಲೂ ಸುಡು ಬಿಸಿಲಿನ ಪ್ರದೇಶದಲ್ಲೂ ದಟ್ಟಡವಿಯಲ್ಲೂ ಹೊಂದಿಕೊಂಡು ಬದುಕಬಲ್ಲ ಸಾಮರ್ಥ್ಯ ಹೊಂದಿದ್ದರೂ ಕುರುಚಲು ಕಾಡು ಅವುಗಳಿಗೆ ಪ್ರಶಸ್ತವಾದ ಪ್ರದೇಶವಾಗಿದೆ. ಐವತ್ತು ವರ್ಷಗಳಿಂದ ಇವು ತಮ್ಮ ನೆಲೆ ವಿಸ್ತರಣೆಯಲ್ಲಿ ತೊಡಗಿಕೊಂಡಿದ್ದು, ಕೆಂಪುಮೂತಿಯ ಮಂಗಗಳ ಆವಾಸಸ್ಥಾನವನ್ನು ಅತಿಕ್ರಮಿಸುತ್ತಿವೆ. ಹೀಗೆ ದಕ್ಷಿಣ ಭಾರತದ ಸುಮಾರು 28,000 ಚದರ ಕಿ.ಮೀ. ಪ್ರದೇಶವನ್ನು ಆಕ್ರಮಿಸಿಕೊಂಡಿವೆ. ಮೊದಲು ಹೇರಳವಾಗಿ ಕಂಡುಬರುತ್ತಿದ್ದ ಕೆಂಪುಮೂತಿಯ ಮಂಗಗಳು ರೀಸೆಸ್ ಮಂಗಗಳ ಅತಿಕ್ರಮಣದಿಂದಾಗಿ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡಿವೆ. ಇದೀಗ ಬಾಗಲಕೋಟೆಯವರೆಗೂ ರೀಸೆಸ್ ಮಂಗಗಳು ತಮ್ಮ ನೆಲೆಯನ್ನು ವಿಸ್ತರಿಸಿಕೊಂಡಿವೆ.

ಬಾಗಲಕೋಟೆಯಿಂದ ಬೆಳಗಾವಿಯ ಮೂಲಕ ಪಶ್ಚಿಮಘಟ್ಟಗಳಿಗೆ ರೀಸೆಸ್ ಮಂಗಗಳು ಲಗ್ಗೆಯಿಡುವ ಸಾಧ್ಯತೆಯ ದಿನಗಳು ದೂರವಿಲ್ಲ. ಪಶ್ಚಿಮಘಟ್ಟ ಪ್ರದೇಶವು ಜಗತ್ತಿನಲ್ಲೇ ಅತ್ಯಪರೂಪದ ಸಿಂಹಬಾಲದ ಸಿಂಗಳೀಕಗಳ ನೆಲೆಯಾಗಿದೆ. ನಾಡಿನಲ್ಲೂ ಕಾಡಿನಲ್ಲೂ ವಿಜೃಂಭಿಸುವ ರೀಸೆಸ್ ಮಂಗಗಳು, ಕೆಲವೇ ನೂರರಷ್ಟು ಸಂಖ್ಯೆಯಲ್ಲಿ ಇರುವ ಸಿಂಗಳೀಕಗಳ ಆವಾಸಸ್ಥಾನವನ್ನು ಆಕ್ರಮಿಸಿಕೊಳ್ಳಬಹುದು ಎಂಬ ಆತಂಕ ಎದುರಾಗಿದೆ. ಜೊತೆಗೆ ಕೆಂಪುಮೂತಿಯ ಮಂಗಗಳ ನೆಲೆಯನ್ನೂ ಆಕ್ರಮಿಸಿಕೊಳ್ಳುತ್ತಾ ಸಾಗುವ ಸಾಧ್ಯತೆಯೇ ಹೆಚ್ಚು. ಮಲೆನಾಡು ಈಗಾಗಲೇ ಕೆಂಪುಮೂತಿಯ ಮಂಗಗಳಿಂದಾಗುವ ಬೆಳೆಹಾನಿಯಿಂದ ಜರ್ಝರಿತವಾಗಿದ್ದು, ಅವುಗಳಿಗಿಂತ ಆಕ್ರಮಣಕಾರಿಯಾದ ರೀಸೆಸ್ ಮಂಗಗಳ ಹಾವಳಿಯೇನಾದರೂ ಶುರುವಾದರೆ ತತ್ತರಿಸಿ ಹೋಗಲಿದೆ. ಹಾಲಿ ಇರುವ ಸಂಘರ್ಷದ ಹತ್ತಾರು ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ರೈತ ಮತ್ತು ಮಂಗಗಳ ನಡುವಿನ ಸಂಘರ್ಷ ಉಲ್ಬಣಿಸಲಿದೆ.

ಮಂಗಗಳ ವಲಸೆ ನೈಸರ್ಗಿಕವಾದುದು ಎಂದು ಪರಿಗಣಿಸಿದರೂ, ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬರಲು ಮಾನವನ ಅಭಿವೃದ್ಧಿ ಚಟುವಟಿಕೆಗಳೇ ನೇರ ಕಾರಣ ಎಂಬುದು ಅಂಗೈ ಹುಣ್ಣಿನಷ್ಟೇ ಸತ್ಯ.

ಇದೇ ಹೊತ್ತಿನಲ್ಲಿ, ಪಕ್ಷಿ ಪ್ರಪಂಚದಲ್ಲೂ ಒಂದು ರೀತಿಯ ದಬ್ಬಾಳಿಕೆ ಪ್ರಾರಂಭವಾಗಿದ್ದನ್ನು ಪಕ್ಷಿ ತಜ್ಞರು ಗಮನಿಸುತ್ತಿದ್ದಾರೆ. ಮನೆಯ ಹೂದೋಟದಲ್ಲಿ ನಿಯಮಿತವಾಗಿ ಮಧುಪಾನ ಮಾಡಲು ಬರುವ ಹಕ್ಕಿಗಳನ್ನು ಕೆಲವರಾದರೂ ಗಮನಿಸಿಯೇ ಇರುತ್ತಾರೆ. ಚಿಟ್ಟೆಗಳಂತೆ ತೋರುವ ಇವು ಅಪಾರ ವೇಗದಲ್ಲಿ ಹೂವಿಂದ ಹೂವಿಗೆ ಹಾರುತ್ತಾ ಮಕರಂದ ಹೀರುತ್ತಾ ಸಾಗುತ್ತವೆ.



ಇದರಲ್ಲೊಂದು ಪ್ರಭೇದ ಕೆಂಪುಬೆನ್ನಿನ ಹೂಗುಬ್ಬಿ. ಪಶ್ಚಿಮಘಟ್ಟಗಳ ಕಾಡುಗಳಲ್ಲಿ ವಾಸಿಸುವ ಈ ಚಿಕ್ಕ ಹಕ್ಕಿಯು ಪರಾಗಸ್ಪರ್ಶ ಕ್ರಿಯೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ.

ಪಶ್ಚಿಮಘಟ್ಟಗಳು ವೇಗವಾಗಿ ಪತನ ಹೊಂದುತ್ತಿರುವುದರಿಂದಾಗಿ, ಈ ಹೂಗುಬ್ಬಿಗಳ ನೈಸರ್ಗಿಕ ನೆಲೆ ನಾಶವಾಗುತ್ತಿದೆ. ಅನಿವಾರ್ಯವಾಗಿ ಅವು ಜನವಸತಿ ಪ್ರದೇಶಗಳನ್ನು ತಮ್ಮ ಆಹಾರ ಹಾಗೂ ಸಂತಾನೋತ್ಪತ್ತಿಗಾಗಿ ಅವಲಂಬಿಸಿಕೊಳ್ಳುತ್ತಿವೆ. ಆದರೆ, ತನ್ನದೇ ವಂಶಸ್ಥರಿಂದಾಗಿ ಇವು ಕ್ರಮೇಣ ನೇಪಥ್ಯಕ್ಕೆ ಸರಿಯುತ್ತಿವೆ. ಭಾರತ ಸೇರಿದಂತೆ, ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ ಹಾಗೂ ಮ್ಯಾನ್ಮಾರ್ ದೇಶಗಳಲ್ಲಿ ಕಂಡುಬರುವ ಕರಿ ಹೂಗುಬ್ಬಿಯು ಜನವಸತಿ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಬದುಕುವ ಪ್ರಭೇದವಾಗಿದೆ. ಕೆಂಪುಬೆನ್ನಿನ ಹೂಗುಬ್ಬಿಗಿಂತ ಗಾತ್ರದಲ್ಲಿ ಕೊಂಚ ದೊಡ್ಡದಾಗಿದೆ ಹಾಗೂ ಆಕ್ರಮಣಕಾರಿಯಾಗಿದೆ. ಅತ್ತ ಕಾಡಿನಲ್ಲಿ ನೆಲೆ ಕಳೆದುಕೊಳ್ಳುತ್ತಿರುವ ಕೆಂಪುಬೆನ್ನಿನ ಹೂಗುಬ್ಬಿಯು ಜನವಸತಿ ಪ್ರದೇಶದಲ್ಲಿ ಹೊಂದಿಕೊಳ್ಳುವ ಪ್ರಯತ್ನ ಮಾಡುತ್ತಿದೆಯಾದರೂ ಆಕ್ರಮಣಕಾರಿಯಾದ ಕರಿ ಹೂಗುಬ್ಬಿಯು ಇದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಮಧುಪಾನ ಮಾಡಲು ಬರುವ ಕೆಂಪುಬೆನ್ನಿನ ಹೂಗುಬ್ಬಿಯನ್ನು ಅಟ್ಟಾಡಿಸುತ್ತಿರುವ ವಿದ್ಯಮಾನ ಇತ್ತೀಚೆಗೆ ಹೆಚ್ಚಾಗುತ್ತಿದೆ.

ಸಸ್ಯಗಳು ತಮ್ಮ ಸಂತಾನೋತ್ಪತ್ತಿಯನ್ನು ಬೆಳೆಸಿಕೊಳ್ಳಲು ಪರಾಗಸ್ಪರ್ಶದಂತಹ ನೈಸರ್ಗಿಕ ಕ್ರಿಯೆಯ ಮೇಲೆ ಅವಲಂಬಿತವಾಗಿವೆ. ಇದಕ್ಕೆ ಪೂರಕವಾಗಿ ನಿರ್ದಿಷ್ಟ ಸಸ್ಯ ಪ್ರಭೇದಗಳಿಗೆ ಮಾತ್ರ ಹೊಂದಿಕೆಯಾಗುವಂತೆ ನಿರ್ದಿಷ್ಟ ಪಕ್ಷಿಗಳು ಕಾಲಕಾಲಕ್ಕೆ ವಿಕಾಸ ಹೊಂದಿವೆ. ಪರಾಗಸ್ಪರ್ಶ ಕ್ರಿಯೆಗಾಗಿ ಕೆಂಪುಬೆನ್ನಿನ ಹೂಗುಬ್ಬಿಯನ್ನೇ ನೆಚ್ಚಿಕೊಂಡಿರುವ ಅನೇಕ ಸಸ್ಯಪ್ರಭೇದಗಳಿವೆ. ಈ ಹೂಗುಬ್ಬಿ ಮಾಡುವ ನೈಸರ್ಗಿಕ ಕ್ರಿಯೆಯನ್ನು ಕೊಕ್ಕಿನ ರಚನೆಯ ಕಾರಣಕ್ಕೆ ಕರಿ ಹೂಗುಬ್ಬಿ ಮಾಡಲು ಸಾಧ್ಯವಾಗುವುದಿಲ್ಲ.

ರೀಸೆಸ್ ಮಂಗಗಳ ನೆಲೆ ವಿಸ್ತರಣೆ, ಕರಿ ಹೂಗುಬ್ಬಿಯ ಆಕ್ರಮಣಕಾರಿ ವರ್ತನೆ, ಕೆಂಪುಬೆನ್ನಿನ ಹೂಗುಬ್ಬಿಯ ಬದುಕಿನ ಹೋರಾಟದಂತಹ ವಿದ್ಯಮಾನಗಳು ಪ್ರತಿನಿತ್ಯ ನಡೆಯುತ್ತಲೇ ಇರುತ್ತವೆ. ಆನೆಯಂತಹ ಬೃಹತ್ ದೇಹಿಗಳ ಆವಾಸಸ್ಥಾನವನ್ನೇ ಅಪಹರಿಸುತ್ತಿರುವ ಮನುಷ್ಯರ ದುರಾಸೆಗೆ ಮಿತಿಯೆಲ್ಲಿದೆ? ಅಭಿವೃದ್ಧಿಯೆಂಬ ಮಾಯೆಯೊಳಗೆ ಬಂದಿಯಾಗಿರುವ ಮನುಕುಲಕ್ಕೆ ಮಂಗಗಳು, ಹೂಗುಬ್ಬಿಗಳು ಯಾವ ಲೆಕ್ಕ?

ಹಕ್ಕಿಗಳು ವಾತಾವರಣದ ವೈಪರೀತ್ಯಗಳಿಗೆ ಎಷ್ಟು ಸೂಕ್ಷ್ಮವಾಗಿ ಸ್ಪಂದಿಸುತ್ತವೆಂದರೆ, ಒಟ್ಟಾರೆ ಪರಿಸರದ ಅವನತಿಗೆ ಅವು ನೇರ ದಿಕ್ಸೂಚಿಗಳೆಂದು ಪಕ್ಷಿತಜ್ಞರು ಎಚ್ಚರಿಸಿದ್ದಾರೆ. ಈ ಹಿಂದೆ ಅಮೆರಿಕದ ಕೆಂಪುತಲೆಯ ಗಿಡುಗ ಸಂತತಿ ಅವನತಿ ಹೊಂದುತ್ತಿತ್ತು. ಇದಕ್ಕೆ ಕಾರಣ ಏನಿರಬಹುದು ಎಂದು ಪತ್ತೆ ಕಾರ್ಯ ಪ್ರಾರಂಭಿಸಿದಾಗ, ಅಮೆರಿಕದ ಪರಿಸರದಲ್ಲಿ ಅಪಾಯಕಾರಿ ಮಟ್ಟದಲ್ಲಿ ಕ್ಲೋರಿನೇಟೆಡ್ ಹೈಡ್ರೊಕಾರ್ಬನ್ ಎಂಬ ವಿಷ ಪತ್ತೆ ಆಯಿತು. ಇದು ಮನುಷ್ಯರಿಗೂ ಅಪಾಯಕಾರಿ ರಾಸಾಯನಿಕ ಸಂಯೋಜನೆಯಾಗಿತ್ತು. ಈ ವಿಷವು ಮನುಷ್ಯರಿಗಿಂತ ಮೊದಲೇ ಪಕ್ಷಿಗಳಲ್ಲಿ ಕಾಣಿಸಿಕೊಂಡಿದ್ದರಿಂದ ಅಲ್ಲಿ ಗಂಭೀರ ಸ್ವರೂಪದ ಅಧ್ಯಯನ ನಡೆಯಲು ಸಾಧ್ಯವಾಯಿತು.

ಚುರುಮುರಿ



ಸಂದೇಶ ಮುಖ್ಯ!

• ಸುಮಂಗಲಾ

ಬೆಕ್ಕಣ್ಣ ಲಕ್ಷದ್ವೀಪಕ್ಕೆ ಟ್ರಿಪ್ ಹೋಗೂಣು ಎಂದು ಕಳೆದ ವಾರ ವರಾತ ಹಚ್ಚಿತ್ತು. 'ನೋಡಿಲ್ಲಿ, ಮೋದಿ ಮಾಮ ಎಷ್ಟ್ ಚಂದ ಸ್ನಾರ್ಕೆಲಿಂಗ್ ಮಾಡ್ಯಾರೆ. ನಾವೂ ಹಂಗ ಮಾಡೂಣು... ನೀರೊಳಗೆ ಮೀನುಗಳು ಎಷ್ಟ್ ಛಲೋ ಕಾಣ್ತಾವೆ' ಎಂದು ಫೋಟೊ ತೋರಿಸುತ್ತ, ನೀರೊಳಗಿನ ಮೀನುಗಳನ್ನು ನೋಡಿ ಬಾಯಲ್ಲಿ ನೀರೂರಿಸಿಕೊಂಡಿತ್ತು.

'ಹಂಗ ಹೋಗೂದು ಅಷ್ಟ್ ಸರಳ ಐತೇನು? ರೊಕ್ಕ ಬೇಕು. ಸುಮ್‌ಸುಮ್ನೆ ಅಲ್ಲಿ ಬಿಡಂಗಿಲ್ಲ, ಎಲ್ಲ ಡಾಕ್ಯುಮೆಂಟ್ ರೆಡಿ ಮಾಡಿಕೋಬೇಕು' ಎಂದು ಬೈದ ಮೇಲೆ ಸುಮ್ಮನಾಗಿತ್ತು.

ನಿನ್ನೆ ಇದ್ದಕ್ಕಿದ್ದಂತೆ 'ನನಗ ಹೊಸಾ ಉದ್ದ ಪೊರಕೆಯಾದ್ರೂ ಕೊಡಿಸು' ಎಂದಿತು.

'ಮನೆವಳಗೆ ಕಸ ಹೊಡೆಯಾಕೆ ನಿನಗ ಉದ್ದ ಪೊರಕೆ ಎದಕ್ಕೆ ಬೇಕಲೇ? ಅಲ್ಲಿ ಮೂಲ್ಯಾಗೆ ಹಳೇ ಪೊರಕೆ ಐತಲ್ಲ, ಅದ್ರಾಗೆ ಹೊಡಿ' ಎಂದೆ.

'ಹೊರಗೆ ಕಸ ಹೊಡ್ಯಾಕೆ ಬೇಕು. ಮೋದಿಮಾಮಾರು ನಾಸಿಕ್‌ದೊಳಗೆ ಈ ದೇವಸ್ಥಾನದ ಹೊರಗೆ ಕಸ ಹೊಡಿಯಾಕೆ ಹತ್ಯಾರಲ್ಲ... ಹಂಗ ನಾನೂ ಹೊರಗೆ ಕಸ ಹೊಡೀತೀನಿ' ಎಂದು ಫೋಟೊ ತೋರಿಸಿತು.

'ಅಲ್ಲಲೇ... ಅಲ್ಲಿ ಏನೂ ಕಸಾನೇ ಇಲ್ಲ! ಬೀದಿ ಕಸ ಹೊಡೆಯೋರು ಆವಾಗೆ ಕಸ ಹೊಡೆದು ಸ್ವಚ್ಛ ಮಾಡ್ಯಾರೆ. ಇದು ಸುಮ್ಮನೇ ಫೋಟೊ ತೆಕ್ಕೊಳಾಕೆ ಅವರು ಕಸ ಹೊಡೆದಂಗೆ ತೋರಿಸ್ಯಾರ ಅಷ್ಟೆ'.

'ನೀ ಎಲ್ಲದಕ್ಕೆ ಅಡ್ಡಬಾಯಿ ಹಾಕಬ್ಯಾಡ. ಬೀದಿ ಕಸ ಹೊಡೆಯೋರು ಅವರ ಕೆಲಸ ಮಾಡತಾರೆ, ಅವರಿಗೆ ಸಂಬಳ ಕೊಡಂಗಿಲ್ಲೇನು?' ಎಂದು ವಾದಿಸಿತು.

'ಕಸವಿಲ್ಲದ ಕಡೆ ಕಸ ಹೊಡೆಯೋದು ಎದಕ್ಕಲೇ?'

'ಕಸ ಹೊಡೆಯದು ಅಂದ್ರ ಅಲ್ಲಿ ಕಸ ಇರಲೇಬೇಕು ಅಂತೇನಿಲ್ಲ. ನಾವೂ ಹಿಂಗ ಫೋಟೊಶೂಟ್ ಮಾಡೂಣು. ನಾ ಉದ್ದ ಪೊರಕೆಯಲ್ಲಿ ಸ್ಟೈಲಾಗಿ ಕಸ ಹೊಡೀತೀನಿ... ನೀ ಫೋಟೊ ತೆಗೆದು ಸೋಶಿಯಲ್ ಮೀಡಿಯಾದಾಗೆ ಹಾಕು. ಹಿಂಗೆ ಕಸ ಹೊಡೀಬೇಕಂತ ಎಲ್ಲ ನಾಗರಿಕರಿಗೂ ಸಂದೇಶ ಕೊಟ್ಟಂಗೆ ಆಗತೈತಿ' ಎಂದು ಮುಸಿಮುಸಿ ನಕ್ಕಿತು.

ಸಂಗತ

ಕೇಳುತ್ತಿಲ್ಲ ಸಾಂಸ್ಕೃತಿಕ ಧ್ವನಿ

ಸಾಂಸ್ಕೃತಿಕ ವಲಯದ ಪುನರುಜ್ಜೀವನದತ್ತ ಹೆಜ್ಜೆ ಇಡುವುದು ಸರ್ಕಾರದ ಸಾಮಾಜಿಕ ಜವಾಬ್ದಾರಿಯೂ ಹೌದು, ಸಾಂಸ್ಕೃತಿಕ ಹೊಣೆಗಾರಿಕೆಯೂ ಹೌದು

• ನಾ.ದಿವಾಕರ

ಅಧಿಕಾರಕೇಂದ್ರಿತ ರಾಜಕಾರಣದಲ್ಲಿ ಸಾಮಾನ್ಯವಾಗಿ ಸಾಂಸ್ಕೃತಿಕ ವಲಯದ ಅಗತ್ಯಗಳು ಹಾಗೂ ಆಶಯಗಳು ಬದಿಗೆ ಸರಿದಿರುತ್ತವೆ ಅಥವಾ ತಮ್ಮ ಚುನಾವಣಾ ರಾಜಕಾರಣದ ಅನುಕೂಲಗಳಿಗೆ ತಕ್ಕಂತೆ ಸಾಂಸ್ಕೃತಿಕ ವಲಯವನ್ನೂ ಬಳಸಿಕೊಳ್ಳುವ ಒಂದು ವಿಕೃತ ಪರಂಪರೆ ತೆರೆದುಕೊಳ್ಳುತ್ತದೆ. ಬಿಜೆಪಿ ನೇತೃತ್ವದ ಹಿಂದಿನ ಅವಧಿಯ ಸರ್ಕಾರ ತನ್ನ ಹಿಂದುತ್ವ ರಾಜಕಾರಣದ ಸಾಮಾನ್ಯ ಕಾರ್ಯಸೂಚಿಯ ಒಂದು ಭಾಗವಾಗಿಯೇ ಸಾಂಸ್ಕೃತಿಕ ವಲಯವನ್ನೂ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದನ್ನು ನೋಡಿದ್ದೇವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಹ ಇದೇ ನೀತಿಯನ್ನು ಅನುಸರಿಸುತ್ತಿದೆ.

ಈ ಆಡಳಿತ ನೀತಿಗಳಿಂದ ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಉಂಟಾದ ವ್ಯತ್ಯಯಗಳು, ಅಪಾಯಗಳು ಹಾಗೂ ನಾಡಿನ ಸಾಕ್ಷಿಪ್ರಜ್ಞೆಯನ್ನೇ ಕದಡುವಂತಹ ಬೆಳವಣಿಗೆಗಳು ಚುನಾಯಿತ ಸರ್ಕಾರಗಳನ್ನು ಎಚ್ಚರದಿಂದ ಇರಿಸಬೇಕು. ಆದರೆ ಅಧಿಕಾರ ವಹಿಸಿಕೊಂಡು ಏಳು ತಿಂಗಳು ಕಳೆದರೂ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅಂಗಳದಲ್ಲಿ ಸಾಂಸ್ಕೃತಿಕ ಧ್ವನಿ ಕೇಳಿಸುತ್ತಲೇ ಇಲ್ಲ ಎನ್ನುವುದು ವಿಷಾದಕರ ಸಂಗತಿ.

ಸಚಿವ ಸಂಪುಟ, ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನದಂತಹ ಅಧಿಕಾರಯುತ ಹುದ್ದೆಗಳನ್ನು ಭರ್ತಿ ಮಾಡುವುದು ಚುನಾವಣೆಗಳು ಹಾಗೂ ಸರ್ಕಾರದ ಉಳಿವಿನ ದೃಷ್ಟಿಯಿಂದ ಪ್ರಾಮುಖ್ಯ ಪಡೆದುಕೊಂಡರೂ, ಇದರಿಂದಾಚೆಗೂ ಇರುವ ಸಾಮಾಜಿಕ-ಸಾಂಸ್ಕೃತಿಕ ಜವಾಬ್ದಾರಿಯನ್ನೂ ಅರಿತಿರಬೇಕಲ್ಲವೇ?

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಬರುವ 20ಕ್ಕೂ ಹೆಚ್ಚು ಸಂಸ್ಥೆಗಳು ಕರ್ನಾಟಕದಲ್ಲಿ ಸಕ್ರಿಯವಾಗಿವೆ. ಹಾಗೆಯೇ ವರ್ತಮಾನದ ವಿಷಮ ಸ್ಥಿತಿಯಲ್ಲಿ ಅತ್ಯಂತ ಪ್ರಮುಖವಾದ ರಂಗಭೂಮಿಯನ್ನು ಪ್ರತಿನಿಧಿಸುವ ರಂಗಾಯಣಗಳು, ರಂಗಸಮಾಜ ಇವೆ. ಈ ಸಾಂಸ್ಥಿಕ ವಲಯದಲ್ಲಿ ನಡೆಯುವ ಚಟುವಟಿಕೆಗಳು ಅಧಿಕಾರ ರಾಜಕಾರಣಕ್ಕೆ ನೇರವಾಗಿ ನೆರವಾಗುವುದಿಲ್ಲವಾದರೂ, ಸಮಾಜದಲ್ಲಿ ವ್ಯಾಪಕವಾಗಿ ಹರಡಿರುವ ಮತದ್ವೇಷ, ಜಾತೀಯತೆ ಹಾಗೂ ಪಿತೃಪ್ರಧಾನ ವ್ಯವಸ್ಥೆಯನ್ನು ಹೋಗಲಾಡಿಸುವ ದಿಸೆಯಲ್ಲಿ ಈ ಸಂಸ್ಥೆಗಳು ನೆರವಾಗುತ್ತವೆ. ಸಾಹಿತ್ಯ ಹಾಗೂ ಕಲಾ ಪ್ರಕಾರಗಳನ್ನು ವ್ಯವಸ್ಥಿತವಾಗಿ ತಲುಪಿಸುವುದೇ ಅಲ್ಲದೆ, ಜನಸಾಮಾನ್ಯರ ನಡುವೆ ಸಂವೇದನಾಶೀಲ ಮನಃಸ್ಥಿತಿಯನ್ನು ಉಂಟುಮಾಡುವ ದಿಸೆಯಲ್ಲಿ ಇವು ಕಾರ್ಯನಿರ್ವಹಿಸಬೇಕಿದೆ.

ಸಾಂಸ್ಕೃತಿಕ ಕ್ಷೇತ್ರವನ್ನು ಪ್ರತಿನಿಧಿಸುವ ಬೌದ್ಧಿಕ ವಲಯದ ಸಾಹಿತಿಗಳು, ಕಲಾವಿದರು, ಬರಹಗಾರರು ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುವ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಬಯಸುವುದು ಆಕ್ಷೇಪಾರ್ಹವೇನಲ್ಲ. ಆದರೆ ಈ ಸಂಸ್ಥೆಗಳ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಂತಿಕೆ ಕಾಪಾಡಿಕೊಳ್ಳುವ ದೃಷ್ಟಿಯಿಂದ, ನಿರಪೇಕ್ಷವಾಗಿ ಸೇವೆ ಸಲ್ಲಿಸುವವರನ್ನು ಆಯ್ಕೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಹಾಗಾಗಿ, ಸರ್ಕಾರಗಳಿಗೆ ಸಾಂಸ್ಕೃತಿಕ ನೀತಿ ಬಹಳ ಮುಖ್ಯವಾಗುತ್ತದೆ.

ಬರೀ ಅಕಾಡೆಮಿಗಳು, ಪ್ರಾಧಿಕಾರಗಳ ಅಧಿಕಾರಯುತ ಹುದ್ದೆ ಭರ್ತಿಯಿಂದ ಸಾಂಸ್ಕೃತಿಕ ವಲಯದಲ್ಲಿನ ಬೌದ್ಧಿಕ ಕ್ಷೋಭೆ ಮತ್ತು ತಾತ್ವಿಕ ಅಪಾಯಗಳನ್ನು ಸರಿಪಡಿಸಲಾಗುವುದಿಲ್ಲ. ಈ ಸಂಸ್ಥೆಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಂಡು, ಸಮಾಜದ ಅಲಕ್ಷಿತ ಸಮುದಾಯಗಳ ಆಶಯಗಳಿಗೆ ಸ್ಪಂದಿಸುವಂತೆ ರೂಪುಗೊಳ್ಳಬೇಕಿದೆ.

ಮೈಸೂರು ರಂಗಾಯಣದಲ್ಲಿ ನಡೆದಂತಹ ಬೆಳವಣಿಗೆಗಳ ಅರಿವಿದ್ದಾಗ್ಯೂ, ರಂಗಸಮಾಜವನ್ನು ಪುನರ್‌ರಚಿಸಿ, ರಾಜ್ಯದ ರಂಗಾಯಣಗಳಿಗೆ ಸಾಮಾಜಿಕ ಬದ್ಧತೆ ಇರುವ ಸಮರ್ಥ ನಿರ್ದೇಶಕರನ್ನು ಆಯ್ಕೆ ಮಾಡುವುದು ಸರ್ಕಾರದ ಆದ್ಯತೆ ಆಗಬೇಕಿತ್ತು. ಹದಗೆಟ್ಟಿರುವ ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪ ಒದಗಿಸುವುದು ಅದರ ಕಾರ್ಯಸೂಚಿಯ ಒಂದು ಭಾಗವಾಗಬೇಕಿತ್ತು. ವಿಶ್ವವಿದ್ಯಾಲಯದ ಸಿಂಡಿಕೇಟ್‌ಗಳಿಗೆ, ಸಾಂಸ್ಕೃತಿಕ ಸಂಸ್ಥೆಗಳಿಗೆ ನೇಮಕ ಮಾಡುವಾಗ ರಾಜಕೀಯ ಉದ್ದೇಶಗಳಿಗಿಂತಲೂ ಮುಖ್ಯವಾಗಿ ರಾಜ್ಯದ ಸಾಂಸ್ಕೃತಿಕ ಮುನ್ನಡೆ ಆದ್ಯತೆ ಪಡೆಯಬೇಕಲ್ಲವೇ? ಚುನಾವಣಾ ರಾಜಕಾರಣದ ಲಾಭ, ನಷ್ಟದ ನೆಲೆಯಲ್ಲಿ ನಿಂತು ಸಾಂಸ್ಕೃತಿಕ ವಲಯವನ್ನೂ ರಾಜಕೀಯ ಕಾರ್ಯಕರ್ತರ ಆಶ್ರಯ ತಾಣವನ್ನಾಗಿ ಮಾಡಿದರೆ, ಈಗಾಗಲೇ ಕವಲು ಹಾದಿಯಲ್ಲಿರುವ ಸಮಾಜವು ಸಂಪೂರ್ಣ ದಿಕ್ಕು ತಪ್ಪಿದಂತೆ ಆಗುವುದಿಲ್ಲವೇ?



ದುರದೃಷ್ಟವಶಾತ್, ಈ ದಿಸೆಯಲ್ಲಿ ರಾಜ್ಯ ಸರ್ಕಾರ ತನ್ನದೇ ಆದ ರಾಜಕೀಯ ಲೆಕ್ಕಾಚಾರಗಳಲ್ಲಿ ಲಾಬಿಕೋರರ ಒತ್ತಡಗಳಿಗೆ ಮಣಿದು ಮೌನ ವಹಿಸಿರುವಂತೆ ತೋರುತ್ತದೆ. ಸಾಂಸ್ಕೃತಿಕ ನೀತಿಯನ್ನು ಜಾರಿಗೊಳಿಸಲು ಬೇಕಾದ ಬೌದ್ಧಿಕ ಪರಿಕರಗಳು, ಜ್ಞಾನಶಾಖೆಗಳು ಹಾಗೂ ಕಲೆ-ಸಾಹಿತ್ಯಕ ಸಂಪತ್ತು, ಸಂಪನ್ಮೂಲ ರಾಜ್ಯದಲ್ಲಿ ಅಗಾಧ ಪ್ರಮಾಣದಲ್ಲಿ ಲಭ್ಯ ಇವೆ. ಇವುಗಳನ್ನು ವಸ್ತುನಿಷ್ಠವಾಗಿ ಬಳಸಿಕೊಳ್ಳುವ ಮೂಲಕ ಸಾಂಸ್ಕೃತಿಕ ವಲಯದ ಪುನರುಜ್ಜೀವನದತ್ತ ಹೆಜ್ಜೆ ಇಡುವುದು ಸರ್ಕಾರದ ಸಾಮಾಜಿಕ ಜವಾಬ್ದಾರಿಯೂ ಹೌದು, ಸಾಂಸ್ಕೃತಿಕ ಹೊಣೆಗಾರಿಕೆಯೂ ಹೌದು.

ಸಂವಿಧಾನ ಪೀಠಿಕೆಯ ಪಠಣವನ್ನು ವಿಧ್ಯುಕ್ತವಾಗಿ ಸಾರ್ವತ್ರೀಕರಣಗೊಳಿಸಿ ಜಾರಿಗೊಳಿಸಿರುವ ಸರ್ಕಾರ, ಇದೇ ಸಂವಿಧಾನದ ಆಶಯದಂತೆ ಸಮನ್ವಯ-ಸೌಹಾರ್ದ- ಭ್ರಾತೃತ್ವದ ನೆಲೆಗಳನ್ನು ವಿಸ್ತರಿಸುವ, ಆಳಕ್ಕಿಳಿಸುವ, ಶಾಶ್ವತಗೊಳಿಸುವ ದಿಸೆಯಲ್ಲಿ ಕ್ರಿಯಾಶೀಲವಾಗಿ ತೊಡಗಬಹುದಾದ ಸಾಂಸ್ಕೃತಿಕ ವಲಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಿದೆ. ಜಾಗೃತ ಸಮಾಜ ನಿರ್ಮಾಣದ ದೃಷ್ಟಿಯಿಂದ ಇದು ತುರ್ತು ಅನಿವಾರ್ಯವೂ ಆಗಿದೆ.

ವಾಚಕರ ವಾಣಿ

'ನಾನು ಕೃಷಿಕ' ಎನ್ನುವ ಹೆಮ್ಮೆ ಇರಲಿ

'ಕೃಷಿಕ ಎನ್ನಲು ಹೆಮ್ಮೆಪಡಿ' ಎಂದು, ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಕೃಷಿಕರೊಬ್ಬರಿಗೆ ಹೈಕೋರ್ಟ್ ಹೇಳಿರುವುದು ನಿಜಕ್ಕೂ ರೈತರನ್ನು ಚಿಂತನೆಗೆ ಹಚ್ಚಬೇಕಾಗಿದೆ. 'ರೈತ ಈ ದೇಶದ ಬೆನ್ನೆಲುಬು', 'ನಮ್ಮದು ಕೃಷಿಪ್ರಧಾನ ರಾಷ್ಟ್ರ' ಎಂಬಂತಹ ಘೋಷಣೆಗಳನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಆದರೆ 'ನಾವು ರೈತರು' ಎಂದು ಗಟ್ಟಿ ಧ್ವನಿಯಲ್ಲಿ ಹೇಳಿಕೊಳ್ಳಲು ನಮಗೇಕೆ ಮುಜುಗರವಾಗುತ್ತಿದೆ ಎಂಬುದು ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಇದಕ್ಕೆ ನಮ್ಮ ಇಂದಿನ ವ್ಯವಸ್ಥೆ ಒಂದು ಕಾರಣವಾದರೆ, ಮತ್ತೊಂದು ಕಾರಣ 'ನಾವು ರೈತರು' ಎಂದು ಹೇಳಿಕೊಳ್ಳುವವರು ಅರೆಕಾಲಿಕ ಉದ್ಯೋಗಿಗಳಾಗಿರುವುದು. ಒಂದು ವೃತ್ತಿಯನ್ನು ಅವಲಂಬಿಸಿದ ಮೇಲೆ ಅದರಲ್ಲಿ ನಾವು ಸಂಪೂರ್ಣವಾಗಿ ತೊಡಗಿಕೊಳ್ಳಬೇಕು. ಆಗ ಮಾತ್ರ ನಾವು ಆ ಉದ್ಯೋಗದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ.

ಒಬ್ಬ ಸರ್ಕಾರಿ ನೌಕರನಿಂದ ಕನಿಷ್ಠ ಎಂಟು ಗಂಟೆಗಳ ಕೆಲಸವನ್ನು ನಿರೀಕ್ಷಿಸುತ್ತೇವೆ. ಆದರೆ ರೈತರಾದ ನಾವು ನಮ್ಮ ಕೆಲಸವನ್ನು ಪ್ರೀತಿಯಿಂದ ಒಪ್ಪಿ ಅಪ್ಪಿಕೊಂಡಿದ್ದೇವೆಯೇ? ನಮ್ಮಲ್ಲಿ ಕೆಲವರು ಬೆಳಿಗ್ಗೆ ಎದ್ದು ಕೆಲಸದವರಿಗೆ ಕೆಲಸ ಹೇಳಿ ಪೇಟೆ ಕಡೆಗೆ ಸುಮ್ಮನೆ ಹರಟೆ ಹೊಡೆಯಲೋ ರಾಜಕಾರಣ ಮಾಡಲೋ ಹೊರಟರೆಂದರೆ, ಮೋಜು ಮಸ್ತಿಯನ್ನೆಲ್ಲಾ ಮುಗಿಸಿ ಮನೆ ಸೇರುವುದು ನಡುರಾತ್ರಿಯೇ! ಬೆಳೆಗಳಿಗೆ ಕಾಡುಪ್ರಾಣಿಗಳ ಹಾವಳಿ, ರೋಗಬಾಧೆ, ಹವಾಮಾನ ವೈಪರೀತ್ಯದಂತಹವು ಕೃಷಿಯ ಬಗ್ಗೆ ನಮಗಿರುವ ಅಸಡ್ಡೆಗೆ ನಾವು ಕೊಡುವ ಸಬೂಬುಗಳು. ಕಾಡಿನಲ್ಲಿ ಆಹಾರ ಸಿಗದೆ ಪ್ರಾಣಿಗಳು ನಾಡಿಗೆ ಬರುತ್ತಿವೆ. ಒಂದೇ ಬಾರಿಗೆ ಹಲವು ಪಟ್ಟು ಹೆಚ್ಚು ಫಸಲನ್ನು ತೆಗೆಯಬೇಕೆಂಬ ದುರಾಸೆಯಿಂದ ವಿಷಕಾರಿ ರಾಸಾಯನಿಕಗಳನ್ನು ಉಪಯೋಗಿಸಿದ್ದರಿಂದ ನಮ್ಮ ಬೆಳೆಗಳು ರೋಗಗಳಿಗೆ ತುತ್ತಾದವು. ಹವಾಮಾನ ವೈಪರೀತ್ಯವೂ ನಮ್ಮ ತಪ್ಪಿನಿಂದಾಗಿಯೇ ಸಂಭವಿಸುತ್ತಿದೆ. ಒಂದು ಬೆಳೆಗೆ ಹೆಚ್ಚು ಬೆಲೆ ಸಿಕ್ಕಿದಾಗ ಎಲ್ಲರೂ ಅದರ ಹಿಂದೆಯೇ ಹೋಗುತ್ತೇವೆ. ಇವೆಲ್ಲವೂ ರೈತನ ಹಿನ್ನಡೆಗೆ ಕಾರಣವಾಗುತ್ತವೆ. ಕೃಷಿಯನ್ನೇ ದೂಷಿಸುವುದು ಬಿಟ್ಟು ಇಂತಹ ಸಂಗತಿಗಳ ಬಗ್ಗೆ ಗಮನಹರಿಸಿದಾಗ 'ನಾನು ರೈತ' ಎಂದು ಎದೆಯುಬ್ಬಿಸಿ ಹೇಳಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದೇನೊ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಮುರುಕು ಮನೋಭಾವ ಯಾವುದು?

'ಹಿಂದೂ ಸಮಾಜವನ್ನು ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ 'ಮುರುಕು' ರಾಮಯ್ಯ ಅಂಥವರು ಒಡೆಯುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದೂರಿರುವ ಸಂಸದ ಅನಂತ ಕುಮಾರ ಹೆಗಡೆ (ಪ್ರ.ವಾ., ಜ. 14), 'ಅಲ್ಪಸಂಖ್ಯಾತರ ಮತಗಳಿಗಾಗಿ ಗತಿಗೆಟ್ಟ ಮಾನಸಿಕತೆಗೆ ನಮ್ಮ ವಿರೋಧವಿದೆ' ಎಂದಿದ್ದಾರೆ. ಅಲ್ಪಸಂಖ್ಯಾತರ ಬಗ್ಗೆ ಇಷ್ಟೊಂದು ದ್ವೇಷ, ಉದಾಸೀನ ಇರುವುದು ಮುರುಕು ಮನೋಭಾವ ಅಲ್ಲವೆ? ಇಂತಹ ಮನಸ್ಸು ಒಬ್ಬ ಸಂಸದರಿಗೆ ಇರುವುದು ಸರಿಯೇ? ಚುನಾಯಿತ ಮುಖ್ಯಮಂತ್ರಿಯನ್ನು 'ಮುರುಕು' ಎಂದು ಕರೆಯುವಷ್ಟು ಇವರ ಘನತೆ ಮುರುಕಾಗಿದೆಯೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಪಡಿತರ ಕೊಡಿ, ಇಲ್ಲವೇ ಷರತ್ತು ಹಿಂಪಡೆಯಿರಿ

ಪಡಿತರ ಕಾರ್ಡ್‌ಗಳನ್ನು ಸಕ್ರಿಯವಾಗಿ ಇಟ್ಟುಕೊಳ್ಳಲು ಎಪಿಎಲ್ ಕಾರ್ಡ್‌ದಾರರು ಕನಿಷ್ಠ ಮೂರು ತಿಂಗಳಿಗೊಮ್ಮೆ ಹಾಗೂ ಬಿಪಿಎಲ್ ಕಾರ್ಡ್‌ದಾರರು ಪ್ರತಿ ತಿಂಗಳು ಪಡಿತರ ಪಡೆಯಬೇಕು. ಆದರೆ ರಾಜ್ಯದ ಬಹಳಷ್ಟು ಊರುಗಳ ನ್ಯಾಯಬೆಲೆ ಅಂಗಡಿಗಳಲ್ಲಿ ಅಗತ್ಯ ಪಡಿತರ ದಾಸ್ತಾನು ಇಲ್ಲದ ಕಾರಣ ಕೆಲವು ಕಾರ್ಡ್‌ದಾರರು ಪಡಿತರ ಮತ್ತು ಗೃಹಲಕ್ಷ್ಮಿ ಯೋಜನೆಯಿಂದ ವಂಚಿತರಾಗುತ್ತಿದ್ದಾರೆ.

ಆಹಾರ ಇಲಾಖೆಯ ಅಧಿಕಾರಿಗಳು ಒಡನೆಯೇ ಕಾರ್ಯಪ್ರವೃತ್ತರಾಗಿ ಎಲ್ಲ ಕಾರ್ಡ್‌ದಾರರಿಗೂ ಪ್ರತಿ ತಿಂಗಳು ಪಡಿತರ ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ. ಇಲ್ಲವಾದಲ್ಲಿ ಕಾರ್ಡ್‌ಗಳನ್ನು ಚಾಲ್ತಿಯಲ್ಲಿ ಇಟ್ಟುಕೊಳ್ಳಲು ವಿಧಿಸಲಾಗಿರುವ ಷರತ್ತುಗಳನ್ನು ಹಿಂಪಡೆಯಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

'ಯೋಜನೆ'ಯ ಅನುಸಾರ ನಡೆಯುತ್ತಿದೆಯೇ?

'ಅಯೋಧ್ಯೆಯು ಜಗತ್ತಿನ ಅತ್ಯಂತ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಒಂದಾಗಲಿದೆ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿರುವುದನ್ನು ತಿಳಿದು ವಾರಾಣಸಿಯ ನೆನಪಾಯಿತು. ಕಾಶಿಗೆ ಹೋಗುವುದೆಂದರೆ ಪ್ರಿಯ ಚಟುವಟಿಕೆಯಾದ ಒಬ್ಬ ಪರಿಚಯಸ್ಥರು ತಮ್ಮ ಇತ್ತೀಚಿನ ಭೇಟಿಯ ನಂತರ ಉದ್ಗರಿಸಿದ್ದರು, 'ಈಗ ಏನೂ ಸಾಮಾನ್ಯರಿಗೆ ಎಟಕುವಂತಿಲ್ಲ, ಎಲ್ಲಿ ಹೋದರೂ ಹಣ ಕೇಳುತ್ತಾರೆ'. ದೆಹಲಿಯ 'ಪುರಾನಾ ಕಿಲಾ' ಪ್ರದೇಶವನ್ನು ಆಧುನೀಕರಣಗೊಳಿಸಿದರೆ ಏನಾಗುತ್ತದೆ? ಹಿಂದಿಯ 'ಬಾಜಾರ್' ಚಿತ್ರವು ನಂಬಿಕೆಯ ವಾಣಿಜ್ಯೀಕರಣವನ್ನು ಪರಿಶೀಲಿಸಿದೆ. 'ಪಿಬರೇ ರಾಮರಸಂ'ನಂತೆ 'ರಾಮನಾಮ ಪಾಯಸಕೆ ಕೃಷ್ಣನಾಮ ಸಕ್ಕರೆ' ಕೂಡ ಬಹಳಷ್ಟು ಜನಪ್ರಿಯ ಹಾಡು. ಅಯೋಧ್ಯೆಯಲ್ಲಿ ಆದುದನ್ನು ಮಥುರೆಯಲ್ಲಿ ಪ್ರಯತ್ನಿಸಲಾಗುವುದೇ? ಜ್ಞಾನವಾಪಿ ತನಿಖಾ ವರದಿಯಲ್ಲಿ ಏನಿರಬಹುದು?

ಪ್ರಾಣಪ್ರತಿಷ್ಠೆ ಎಂದರೆ ವಿಗ್ರಹದಲ್ಲಿ ದೇವತ್ವವನ್ನು ಆವಾಹಿಸುವುದು. ಪ್ರಾಣದ ಒಂದು ಅರ್ಥ ಚೈತನ್ಯ ವಸ್ತು. ಅದನ್ನು ಬ್ರ್ಯಾಂಡ್ ಆಗಿ ಪರಿವರ್ತಿಸುತ್ತಿರುವವರು ವಾಲ್ಮೀಕಿ ರಾಮಾಯಣದ ಮೂಲ ಕ್ರೌಂಚವಧೆಯಿಂದ ಉತ್ಪನ್ನವಾದ ಕರುಣೆ– ಒಂದು ಸಾರ್ವತ್ರಿಕ ಮಾನವೀಯ ಮೌಲ್ಯ– ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಧರ್ಮಭೀರು ಎಂಬ ಪದ ಇದೆ, ಅದು ವೀರ ರೂಪ ತಾಳಿದರೆ? ಪಾಯಸಕ್ಕೆ ಬೆಲ್ಲ ಉತ್ತಮ ಎಂದು ಕೆಲವರೆನ್ನುತ್ತಾರೆ, ಸಕ್ಕರೆಯೇ ಬೇಕು ಎಂದು ಹೆಚ್ಚು ಹಾಕಿದರೆ ಮಧುಮೇಹಿಗಳು ಗಮನಾರ್ಹ ಸಂಖ್ಯೆಯಲ್ಲಿರುವ ಭಾರತೀಯರಿಗೆ ಕಷ್ಟ ಆಗಬಹುದು. ಹಿಂದೆ ಪ್ರಧಾನ ಮಂತ್ರಿಗಳ ಕಾರ್ಯಾಲಯದಲ್ಲಿ ಇದ್ದವರು ಈಗ ಮಂದಿರದ ಟ್ರಸ್ಟ್‌ನ ಪ್ರಮುಖರು ಆಗಿರುವುದರಿಂದ ಇದೆಲ್ಲ ಒಂದು 'ಯೋಜನೆ'ಯ ಅನುಸಾರ ನಡೆಯುತ್ತಿದೆ ಎಂಬುದು ವೃಥಾ ಆರೋಪ ಎನ್ನಲಾಗದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಹಾಯಧನ ಕಡಿತ, ಬೆಲೆ ಏರಿಕೆ
ಎಲ್‌ಪಿಜಿ ಬಳಕೆ ಇಳಿಕೆ



ಪ್ರಜಾವಾಣಿ ವಾರ್ತೆ


ಬಡಕುಟುಂಬಗಳಿಗೂ ಅಡುಗೆ ಅನಿಲ ಸಂಪರ್ಕವನ್ನು ಒದಗಿಸಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು 'ಪ್ರಧಾನ ಮಂತ್ರಿ ಉಜ್ವಲ ಯೋಜನೆ'ಯನ್ನು ಆರಂಭಿಸಿತ್ತು. ಈ ಯೋಜನೆ ಅಡಿಯಲ್ಲಿ ಸಂಪರ್ಕ ಪಡೆದ ಕುಟುಂಬಗಳಿಗೆ ಸಹಾಯಧನ ಸಹಿತವಾಗಿ ಎಲ್‌ಪಿಜಿ ಸಿಲಿಂಡರ್ ಒದಗಿಸಲಾಗುತ್ತಿತ್ತು. ಯೋಜನೆಯ ಕಾರಣದಿಂದ ದೇಶದಾದ್ಯಂತ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿತ್ತು. ಆದರೆ ಈ ಯೋಜನೆಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಕಡಿತ ಮಾಡಿದ್ದರಿಂದ ಮತ್ತು ಸಿಲಿಂಡರ್ ದರ ಏರಿಕೆಯ ಕಾರಣದಿಂದ, ಉಜ್ವಲ ಸಂಪರ್ಕ ಪಡೆದಿದ್ದವರಲ್ಲಿ 1 ಕೋಟಿಗೂ ಹೆಚ್ಚು ಜನರು ಎಲ್‌ಪಿಜಿಯನ್ನು ಬಳಸುತ್ತಲೇ ಇಲ್ಲ.

'ಸಿಲಿಂಡರ್ ಬೆಲೆ ಏರಿಕೆಯಾಗಿದೆ ಮತ್ತು ಸಬ್ಸಿಡಿ ನಮ್ಮ ಖಾತೆಗೆ ಬರುತ್ತಿಲ್ಲ. ಹಲವು ಬಾರಿ ಸಾಲ ಮಾಡಿ ಸಿಲಿಂಡರ್ ತಂದಿದ್ದೆವು. ಸಬ್ಸಿಡಿ ಬರದೇ ಇರುವುದರಿಂದ, ಸಾಲ ತೀರಿಸುವುದೂ ಕಷ್ಟವಾಯಿತು. ಹೀಗಾಗಿ ಸಿಲಿಂಡರ್ ಖಾಲಿಯಾದರೂ ಪೂರ್ತಿ ದುಡ್ಡು ಹೊಂಚಿಕೊಳ್ಳುವವರೆಗೆ ಹೊಸ ಸಿಲಿಂಡರ್ ತರುವುದಿಲ್ಲ' ಎನ್ನುತ್ತಾರೆ ರಾಮನಗರ ಜಿಲ್ಲೆಯ ಸೋಲೂರು ಹೋಬಳಿಯ ಮೈಲನಹಳ್ಳಿ ನಿವಾಸಿ ಶಿವಣ್ಣಾಚಾರ್. ತಮ್ಮ ಅಕ್ಕ–ಪಕ್ಕದ ಮನೆಯವರ ಸ್ಥಿತಿಯೂ ಅದೇ ಎನ್ನುವುದು ಅವರ ಮಾತು.

ಲೋಕಸಭೆಗೆ ಕೇಂದ್ರ ಸರ್ಕಾರವೇ ನೀಡಿರುವ ಮಾಹಿತಿ ಪ್ರಕಾರ ಉಜ್ವಲ ಯೋಜನೆ ಅಡಿಯಲ್ಲಿ ಹೊಸದಾಗಿ 9.58 ಕೋಟಿ ಸಂಪರ್ಕಗಳನ್ನು ನೀಡಲಾಗಿದೆ. ಆದರೆ ಅವುಗಳಲ್ಲಿ ಸಕ್ರಿಯವಾಗಿರುವ ಅಥವಾ ಎಲ್‌ಪಿಜಿ ಬಳಸುತ್ತಿರುವ ಸಂಪರ್ಕಗಳ ಸಂಖ್ಯೆ 8.41 ಕೋಟಿಯಷ್ಟು ಮಾತ್ರ. ಅಂದರೆ ಈ ಯೋಜನೆ ಅಡಿ ಸಂಪರ್ಕ ಪಡೆದವರಲ್ಲಿ ಶೇ 12.30ರಷ್ಟು ಜನರು ಎಲ್‌ಪಿಜಿಯನ್ನು ಬಳಸುತ್ತಲೇ ಇಲ್ಲ. ವರ್ಷದಲ್ಲಿ ಕನಿಷ್ಠ ಒಂದು ಸಿಲಿಂಡರ್ ಬಳಸುವ ಕುಟುಂಬವನ್ನೂ ಸಕ್ರಿಯ ಗ್ರಾಹಕ ಎಂದು ಕೇಂದ್ರ ಸರ್ಕಾರವು ಪರಿಗಣಿಸುತ್ತದೆ. ಅಂದರೆ 1.18 ಕೋಟಿ ಕುಟುಂಬಗಳಿಗೆ ವರ್ಷದಲ್ಲಿ ಒಂದು ಸಿಲಿಂಡರ್ ಅನ್ನೂ ಖರೀದಿಸಲು ಸಾಧ್ಯವಾಗಿಲ್ಲ.

ಈ ಯೋಜನೆ ಅಡಿಯಲ್ಲಿ ವರ್ಷದಲ್ಲಿ 12 ಸಿಲಿಂಡರ್‌ಗಳನ್ನು ಸಹಾಯಧನ ಸಹಿತವಾಗಿ ಖರೀದಿಸಲು ಅವಕಾಶವಿದೆ. ಹೀಗಿದ್ದೂ, ಯೋಜನೆಯ ಬಹುತೇಕ ಫಲಾನುಭವಿಗಳು ವರ್ಷದಲ್ಲಿ ಒಂದು ಸಿಲಿಂಡರ್ ಮಾತ್ರ ಬಳಸುತ್ತಿದ್ದಾರೆ. ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ಹೆಚ್ಚಾಗಿದ್ದರೂ, ಬಳಕೆ ಗಣನೀಯ ಪ್ರಮಾಣದಲ್ಲಿ ಇಲ್ಲ ಎಂಬುದನ್ನು ಇದು ತೋರಿಸುತ್ತದೆ.


ಎಲ್‌ಪಿಜಿ ಸಹಾಯಧನ ಕಡಿಮೆಯಾಗಿದ್ದಕ್ಕೂ, ಎಲ್‌ಪಿಜಿ ಸಿಲಿಂಡರ್‌ಗಳ ಮಾರಾಟದಲ್ಲಿ ಇಳಿಕೆಯಾಗಿದ್ದೂ ನೇರ ಸಂಬಂಧವಿದೆ. ಸಹಾಯಧನ ಕಡಿಮೆಯಾಗಿದ್ದರ ಜತೆಗೆ, ಸಿಲಿಂಡರ್ ದರ ಏರಿಕೆಯೇ ಆಗಿದೆ. ಈಚಿನ ವರ್ಷಗಳಲ್ಲಿ ಸಿಲಿಂಡರ್ ದರ ಗರಿಷ್ಠ ಮಟ್ಟ ಮುಟ್ಟಿದ್ದು 2023ರಲ್ಲಿ. 2022–23ನೇ ಆರ್ಥಿಕ ವರ್ಷದಲ್ಲಿ ಖರೀದಿಸಲಾದ ಸಿಲಿಂಡರ್‌ಗಳ ಸಂಖ್ಯೆ, ಅದರ ಹಿಂದಿನ ವರ್ಷಕ್ಕಿಂತ ಕಡಿಮೆ ಆಗಿದೆ. ಸಿಲಿಂಡರ್ ದರ ವಿಪರೀತ ಏರಿಕೆಯಾಗಿದ್ದೇ ಬಳಕೆ ಕಡಿಮೆಯಾಗಲು ಕಾರಣ ಎಂಬುದನ್ನು ಈ ಎಲ್ಲಾ ಅಂಶಗಳೂ ಸೂಚಿಸುತ್ತವೆ.



ಎಲ್‌ಪಿಜಿ ಸಹಾಯಧನ


ಫಲಾನುಭವಿಗಳಿಗೆ ನೇರ ವರ್ಗಾವಣೆ (ಡಿಬಿಟಿಎಲ್)

- ಸಹಾಯಧನವನ್ನು ಅವರ ಖಾತೆಗೇ ನೇರವಾಗಿ ವರ್ಗಾವಣೆ ಮಾಡುವ ಯೋಜನೆಯೇ ಡಿಬಿಟಿಎಲ್. ಗ್ರಾಹಕರು ಪೂರ್ಣ ದರವನ್ನು ಪಾವತಿಸಿ ಸಿಲಿಂಡರ್ ಅನ್ನು ಖರೀದಿಸಬೇಕು. ಸಹಾಯಧನದ ಮೊತ್ತವನ್ನು ಸರ್ಕಾರವು ತೈಲ ಕಂಪನಿಗಳ ಮೂಲಕ ಗ್ರಾಹಕರ ಖಾತೆಗೆ ವರ್ಗಾಯಿಸುತ್ತದೆ. ಅರ್ಹ ಮತ್ತು ಸಹಾಯಧನವನ್ನು ಆಯ್ಕೆ ಮಾಡಿಕೊಂಡ ಗ್ರಾಹಕರಿಗೂ ಡಿಬಿಟಿಎಲ್ ಜಮೆಯಾಗುತ್ತಿಲ್ಲ ಎಂಬುದು ವಿರೋಧ ಪಕ್ಷಗಳ ಆರೋಪ
- ಸಹಾಯಧನವನ್ನು ನಿಲ್ಲಿಸಿದ್ದರಿಂದಲೇ ಎಲ್‌ಪಿಜಿ ಸಿಲಿಂಡರ್‌ಗಳ ದರ ಏರಿಕೆಯಾಗಿದೆ. ಹೀಗಾಗಿ ಸರ್ಕಾರವು ಈ ಸಹಾಯಧನದ ಮೇಲೆ ಮಾಡುತ್ತಿದ್ದ ವೆಚ್ಚವೂ ಇಳಿಕೆಯಾಗಿದೆ
- ಈ ಯೋಜನೆ ಅಡಿ ನೀಡಲಾಗುತ್ತಿದ್ದ ಮೊತ್ತವು ಗಣನೀಯ ಪ್ರಮಾಣದಲ್ಲಿ ಕುಸಿದಿದೆ. 2018–19ನೇ ಸಾಲಿನಲ್ಲಿ ಇದಕ್ಕಾಗಿ ಕೇಂದ್ರವು ₹31,539 ಕೋಟಿ ವೆಚ್ಚ ಮಾಡಿತ್ತು. ಹಿಂದಿನ ಎಂಟು ಆರ್ಥಿಕ ವರ್ಷಗಳಲ್ಲೇ ಈ ಯೋಜನೆಗಾಗಿ ಕೇಂದ್ರ ನೀಡಿದ್ದ ಗರಿಷ್ಠ ಅನುದಾನವದು
- 2023–24ನೇ ಸಾಲಿನ ಬಜೆಟ್‌ನಲ್ಲಿ ಈ ಸಹಾಯಧನಕ್ಕೆ ಕೇಂದ್ರ ಸರ್ಕಾರವು ಕೇವಲ ₹180 ಕೋಟಿಯನ್ನು ಮೀಸಲಿರಿಸಿದೆ. ಇದು ಈ ಎಂಟು ವರ್ಷಗಳಲ್ಲೇ ಕನಿಷ್ಠ



* ಕೇಂದ್ರ ಸರ್ಕಾರ ನೀಡಿದ ಸಹಾಯಧನ

ಉಜ್ವಲ ಯೋಜನೆ



- ಈ ಯೋಜನೆಗೆ ಸರ್ಕಾರವು ಪ್ರತಿ ವರ್ಷ ನೀಡಿರುವ ಸಹಾಯಧನದ ಅನುದಾನವು ಏಕ ಪ್ರಕಾರವಾಗಿ ಇಲ್ಲ. ಈ ಯೋಜನೆಯ ಗ್ರಾಹಕರ ಸಂಖ್ಯೆ ಏರಿಕೆಯಾಗಿದ್ದರೂ, ಅಂತಿಮವಾಗಿ ಸಹಾಯಧನ ಇಳಿಕೆಯತ್ತಲೇ ಸಾಗಿದೆ
- ಹಿಂದಿನ 8 ಆರ್ಥಿಕ ವರ್ಷಗಳಲ್ಲಿ 2020–21ರಲ್ಲಿ ಅತಿಹೆಚ್ಚು ಮೊತ್ತದ (₹8,238 ಕೋಟಿ) ಅನುದಾನವನ್ನು ಕೇಂದ್ರ ನೀಡಿತ್ತು. ಕೋವಿಡ್ ಅವಧಿಯಲ್ಲಿ ಉಜ್ವಲ ಯೋಜನೆಯ ಕುಟುಂಬಗಳಿಗೆ 3 ಉಚಿತ ಸಿಲಿಂಡರ್‌ಗಳನ್ನು ನೀಡಿದ್ದರಿಂದ ಈ ಅನುದಾನ ಏರಿಕೆಯಾಗಿತ್ತು
- ಆನಂತರದ ವರ್ಷಗಳಲ್ಲಿ ಸಹಾಯಧನದ ಅನುದಾನವು ಇಳಿಕೆಯತ್ತ ಸಾಗಿದೆ. 2016–17ರಲ್ಲಿ ಯೋಜನೆಗೆ ನೀಡಿದ್ದ ಸಹಾಯಧನದ ಮೊತ್ತಕ್ಕಿಂತ (₹2,999 ಕೋಟಿ) ಕಡಿಮೆ ಮೊತ್ತವನ್ನು (₹2,077 ಕೋಟಿ) 2023–24ನೇ ಸಾಲಿನ ಬಜೆಟ್‌ನಲ್ಲಿ ಮೀಸಲಿರಿಸಿದೆ. ಆರ್ಥಿಕ ವರ್ಷದ ಮಧ್ಯದಲ್ಲಿ ಪ್ರತಿ ಸಿಲಿಂಡರ್‌ಗೆ ನೀಡುತ್ತಿದ್ದ ಸಹಾಯಧನದ ಮೊತ್ತವನ್ನು ಹೆಚ್ಚಿಸಿದ ಕಾರಣ, ಪರಿಷ್ಕೃತ ಬಜೆಟ್‌ನಲ್ಲಿ ಉಜ್ವಲ ಯೋಜನೆಯ ಒಟ್ಟು ಸಹಾಯಧನ ತುಸು ಏರಿಕೆಯಾಗುವ ಸಂಭವವಿದೆ

ಪ್ರಜಾವಾಣಿ ಗ್ರಾಫಿಕ್ಸ್

ಉಜ್ವಲ ಯೋಜನೆ: 1.18 ಕೋಟಿ ಗ್ರಾಹಕರು ಸಿಲಿಂಡರ್ ಬಳಸುತ್ತಿಲ್ಲ

9.59 ಕೋಟಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ ನೀಡಲಾದ ಹೊಸ ಸಂಪರ್ಕಗಳ ಸಂಖ್ಯೆ

8.41 ಕೋಟಿ ಈ ಯೋಜನೆ ಅಡಿಯಲ್ಲಿ ಸಕ್ರಿಯ ಸಂಪರ್ಕಗಳ ಸಂಖ್ಯೆ (2022–23ನೇ ಆರ್ಥಿಕ ವರ್ಷ)

1.18 ಕೋಟಿ ಬಳಕೆಯಲ್ಲಿ ಇಲ್ಲದ ಉಜ್ವಲ ಯೋಜನೆಯ ಸಂಪರ್ಕಗಳ ಸಂಖ್ಯೆ

ಎಲ್‌ಪಿಜಿ ಸಿಲಿಂಡರ್‌ನ ಸರಾಸರಿ ಬೆಲೆ


* 14.2 ಕೆ.ಜಿ. ತೂಕದ ಗೃಹಬಳಕೆ ಸಿಲಿಂಡರ್‌ನ ಬೆಲೆ

2021	2022	2023
₹830	₹980	₹1,053

ಕುಸಿತದ ಹಾದಿಯಲ್ಲಿ ಗೃಹಬಳಕೆ ಎಲ್‌ಪಿಜಿ ಬಳಕೆ

ದೇಶದಾದ್ಯಂತ ಆರ್ಥಿಕ ವರ್ಷವೊಂದರಲ್ಲಿ ಬಿಕರಿಯಾಗುವ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಇದು ಎಲ್‌ಪಿಜಿ ಬಳಕೆ ಕಡಿಮೆಯಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ. 2018–19ನೇ ಸಾಲಿನಿಂದ 2020–21ನೇ ಸಾಲಿನವರೆಗೆ ಮೂರು ಆರ್ಥಿಕ ವರ್ಷಗಳಲ್ಲಿ ಮಾರಾಟವಾದ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆಯು ಗಣನೀಯ ಪ್ರಮಾಣದ ಏರಿಕೆ ಕಂಡಿತ್ತು. ಪ್ರತಿ ವರ್ಷ ಏರಿಕೆ ಸಂಖ್ಯೆಯು 10 ಕೋಟಿ ಸಿಲಿಂಡರ್‌ಗಳಷ್ಟು ಇತ್ತು. 2019–20ನೇ ಸಾಲಿಗೆ ಹೋಲಿಸಿದರೆ, 2020–21ರಲ್ಲಿ 14.45 ಕೋಟಿಯಷ್ಟು ಹೆಚ್ಚುವರಿ ಸಿಲಿಂಡರ್‌ಗಳನ್ನು ದೇಶದ ಜನರು ಖರೀದಿಸಿದ್ದರು.

2021–22ರ ನಂತರ ಸಿಲಿಂಡರ್ ಮಾರಾಟದಲ್ಲಿನ ಏರಿಕೆಯ ಪ್ರಮಾಣವು ಕುಸಿತ ಕಂಡಿದೆ. ಆ ವರ್ಷದಲ್ಲಿ ಮಾರಾಟವಾದ ಹೆಚ್ಚುವರಿ ಸಿಲಿಂಡರ್‌ಗಳ ಸಂಖ್ಯೆ 2.63 ಕೋಟಿಯಷ್ಟು ಮಾತ್ರ. ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ದರ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡ ವರ್ಷವದು. ಆನಂತರದ ವರ್ಷಗಳಲ್ಲಿ ಎಲ್‌ಪಿಜಿ ಸಿಲಿಂಡರ್ ದರ ಮತ್ತಷ್ಟು ಏರಿಕೆಯಾಗಿತ್ತು, ಆದರೆ ಅದೇ ಅವಧಿಯಲ್ಲಿ ಮಾರಾಟದ ಸಂಖ್ಯೆಯೂ ಕುಸಿದಿದೆ. 2021–22ಕ್ಕೆ ಹೋಲಿಸಿದರೆ 2022–23ರಲ್ಲಿ 85 ಲಕ್ಷದಷ್ಟು ಸಿಲಿಂಡರ್‌ಗಳು ಕಡಿಮೆ ಮಾರಾಟವಾಗಿವೆ.



ಆಧಾರ: ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವಾಲಯವು ಲೋಕಸಭೆಗೆ ನೀಡಿದ ಲಿಖಿತ ಉತ್ತರಗಳು, ಪೆಟ್ರೋಲಿಯಂ ಸಚಿವಾಲಯದ ಪೆಟ್ರೋಲಿಯಂ ಬೆಲೆ ವಿಶ್ಲೇಷಣಾ ಘಟಕದ ದತ್ತಾಂಶಗಳು

ನಾವು ನೋಡಿದ ಸಿನಿಮಾ



ಕಡಿಮೆ ಘಾಟಿನ ಹಳೆಯ ಖಾರ

ಮಹೇಶ್ ಬಾಬು–ತ್ರಿವಿಕ್ರಂ ಶ್ರೀನಿವಾಸ್ ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ ಜೋಡಿ. ಆದರೆ ಆ ನಿರೀಕ್ಷೆಯನ್ನು ಹುಸಿಯಾಗಿಸುವ ಸಿನಿಮಾ 'ಗುಂಟೂರು ಖಾರಂ'. ಮಹೇಶ್ ಬಾಬು ಎಂದಾಕ್ಷಣ ಆ್ಯಕ್ಷನ್, ಮಾಸ್ ದೃಶ್ಯಗಳು ಇರುವುದು ಸಹಜ. ಅಂತೆಯೇ ಇಲ್ಲಿ ಹಾಡು, ಫೈಟ್‌ಗಳು ಭರಪೂರವಾಗಿವೆ. ಆದರೆ ಯಾವುದರಲ್ಲಿಯೂ ಹೊಸತನವಿಲ್ಲ. 10 ವರ್ಷ ಹಳೆಯದಾದ ಸರಕುಗಳಿವು. ಸಿನಿಮಾ ಶುರುವಾದ 10 ನಿಮಿಷಗಳ ಕಾಲ ಒಂಚೂರು ಉತ್ಸಾಹ ಮೂಡುತ್ತದೆ. ನಂತರದಿಂದ ಸಿನಿಮಾ ಮುಗಿಯುವವರೆಗೂ ಒಂದೇ ವೇಗ.

ಗುಂಟೂರು ಖಾರಂ (ತೆಲುಗು)
- ನಿರ್ದೇಶನ: ತ್ರಿವಿಕ್ರಂ ಶ್ರೀನಿವಾಸ್
- ನಿರ್ಮಾಣ: ಎಸ್. ರಾಧಾಕೃಷ್ಣ ಮತ್ತು ಸೂರ್ಯದೇವರ ನಾಗ ವಂಶಿ
- ತಾರಾಗಣ: ಮಹೇಶ್ ಬಾಬು, ಶ್ರೀಲೀಲಾ, ಪ್ರಕಾಶ್ ರಾಜ್, ರಮ್ಯಾಕೃಷ್ಣ ಮತ್ತಿತರರು

ಈ ಹಿಂದೆ ತೆಲುಗಿನಲ್ಲಿಯೇ ಬಂದಿರುವ ನಾಲ್ಕಾರು ಮಾಸ್ ಸಿನಿಮಾಗಳ ಒಂದೆಳೆ ಕಥೆಯನ್ನು ಒಟ್ಟಾಗಿಸಿ ಇಡೀ ಸಿನಿಮಾದ ಕಥೆ ಹೆಣೆಯಲಾಗಿದೆ. ಒಂದಷ್ಟು ದೃಶ್ಯಗಳು ಗುಂಟೂರು ಮೆಣಸಿನಕಾಯಿ ಗೋದಾಮಿನಲ್ಲಿ ನಡೆಯುತ್ತವೆ. ನಾಯಕನ ಕುಟುಂಬ ಈ ಮೆಣಸಿನಕಾಯಿ ವ್ಯಾಪಾರಿ ಕುಟುಂಬವೆಂಬುದಷ್ಟೇ ಸಿನಿಮಾದಲ್ಲಿ ಹೊಸತಾಗಿ ಕಾಣಿಸುವಂತಹದ್ದು. ನಾಯಕ ರಮಣ ಬಾಲ್ಯದಿಂದಲೇ ತಾಯಿಯಿಂದ ದೂರವಾಗುತ್ತಾನೆ. ಕೌಟುಂಬಿಕ ಕಲಹದಿಂದಾಗಿ ಸಂಬಂಧಗಳ ಕೊಂಡಿ ಕಳೆದುಹೋಗುತ್ತದೆ. ತಾಯಿ–ಮಗ ಒಂದಾಗುವ ಸೆಂಟಿಮೆಂಟ್‌ನೊಂದಿಗೆ ಫೈಟ್, ಲವ್, ಹಾಡು ಎಲ್ಲವನ್ನೂ ಬೆರೆಸಿ ಒಂದು ಕೌಟುಂಬಿಕ ಮನರಂಜನೆ ಪ್ಯಾಕ್ ನೀಡಲು ನಿರ್ದೇಶಕರು ಯತ್ನಿಸಿದ್ದಾರೆ. ಆದರೆ ಇದು, ಹದ ತಪ್ಪಿ ಹಲವೆಡೆ ಸಿನಿಮಾ ಬೋರ್ ಎನ್ನಿಸುತ್ತದೆ.

ಇಡೀ ಸಿನಿಮಾದ ಹೈಲೈಟ್ ಪಾತ್ರವರ್ಗ. ಮಹೇಶ್ ಬಾಬು ಅವರಿಗೆ ಸಾಧ್ಯವಿರುವ ಜಾಗದಲ್ಲೆಲ್ಲ ಸಾಕಷ್ಟು ಬಿಲ್ಡಪ್ ನೀಡಲಾಗಿದೆ. ಆದರೆ, ಹಿನ್ನೆಲೆ ಸಂಗೀತ ಅದಕ್ಕೆ ಸಾಥ್ ನೀಡುವುದಿಲ್ಲ. ಇದರಾಚೆಗೂ ಮಹೇಶ್ ಬಾಬು ನಟನೆಯಿಂದ ಇಷ್ಟವಾಗುತ್ತಾರೆ. ಪಂಚ್ ಡೈಲಾಗ್‌ಗಳು ಸನ್ನಿವೇಶಕ್ಕೆ ಸರಿಯಾಗಿ ಸಿಂಕ್ ಆಗಿ, ಅಲ್ಲಲ್ಲಿ ನಗು ತರಿಸುತ್ತವೆ. ತಾತನಾಗಿ ಪ್ರಕಾಶ್ ರಾಜ್ ನಟನೆ ಸಹಜವಾಗಿದೆ. ತಾಯಿ ಹಾಗೂ ಸಚಿವೆ ಪಾತ್ರದಲ್ಲಿ ರಮ್ಯಾಕೃಷ್ಣ ಅಭಿನಯ ಖಡಕ್ ಆಗಿದೆ. ನಾಯಕಿಯಾಗಿರುವ ಶ್ರೀಲೀಲಾ ಪಾತ್ರಕ್ಕೆ ಮಹತ್ವವಿಲ್ಲ. ಕಥೆಯ ಜೊತೆಗೆ ಈ ಲವ್ ಟ್ರ್ಯಾಕ್ ಸರಿಯಾಗಿ ಸಿಂಕ್ ಆಗದೇ ಉದ್ದೇಶಪೂರ್ವಕವಾಗಿ ಪ್ರೀತಿಯ ಎಳೆ ತಂದಿಟ್ಟಂತೆ ಭಾಸವಾಗುತ್ತದೆ.

ಇಡೀ ಸಿನಿಮಾದ ಕೊರತೆ ಗಟ್ಟಿಯಾದ ಒಂದೆಳೆ ಕಥೆ ಇಲ್ಲದಿರುವುದು ಮತ್ತು ಪೇಲವವಾದ ಚಿತ್ರಕಥೆ. ಸಾಕಷ್ಟು ದೃಶ್ಯಗಳು ಈಗಾಗಲೇ ಬೇರೆ ಬೇರೆ ಸಿನಿಮಾಗಳಲ್ಲಿ ಬಂದಂತಹವು. ಅವನ್ನೇ ಹೊಸತಾದ ಫ್ರೇಮಿನಲ್ಲಿ ಹೇಳಿದಂತಿದೆ. ತಮನ್ ಸಂಗೀತದಲ್ಲಿನ ಯಾವ ಹಾಡುಗಳೂ ನೆನಪಿನಲ್ಲಿ ಉಳಿಯುವುದಿಲ್ಲ. ಚಿತ್ರದ ಪ್ರಾರಂಭದಲ್ಲಿಯೇ ಬರುವ ಐಟಂ ಸಾಂಗ್‌ನ ಛಾಯಾಚಿತ್ರಗ್ರಹಣ ಸೊಗಸಾಗಿದೆ.

ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

…ಪಟ್ಟಾಭಿಷೇಕಕ್ಕೆ ಸೀತಾಮಾತೆಯ ತವರು ನೇಪಾಳದಿಂದ ಅಯೋಧ್ಯೆಗೆ ಮೆರವಣಿಗೆ ಮೂಲಕ ಉಡುಗೊರೆಗಳನ್ನು ತರಲಾಗುತ್ತಿದೆ. ರಾಮಮಂದಿರದ ಸಲುವಾಗಿ ಭಾರತದಲ್ಲಿ ಮಾತ್ರವಲ್ಲ ನೇಪಾಳದಲ್ಲಿಯೂ 'ಜೋಷ್' ಇದೆ' ಎಂದೂ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊದ ರಿವರ್ಸ್ ಇಮೇಜ್ ಅನ್ನು ಮಾಡಲಾಯಿತು. ಆಗ, 2023ರ ಜುಲೈ 9ರಂದು ಈಟಿವಿ ಭಾರತ್ ವೆಬ್‌ತಾಣದಲ್ಲಿನ ವರದಿಯೊಂದು ದೊರಕಿತು. ಇದೇ ದಿನದಂದು ಗ್ರೇಟರ್ ನೊಯಿಡಾದಲ್ಲಿ 'ಕಲಶ ಯಾತ್ರೆ' ನಡೆದಿತ್ತು. ಸ್ವಯಂಘೋಷಿತ ದೇವಮಾನವ ಧೀರೇಂದ್ರ ಶಾಸ್ತ್ರಿ ಅವರ ಧರ್ಮೋಪದೇಶ ಕಾರ್ಯಕ್ರಮ ಜುಲೈ 10–16ರವರೆಗೆ ಆಯೋಜಿಸಲಾಗಿತ್ತು. ಈ ಕಾರಣಕ್ಕಾಗಿ ಕಲಶ ಯಾತ್ರೆ ನಡೆದಿತ್ತು. ಮೂರು ಕಿ.ಮೀನಷ್ಟು ದೂರ ಈ ಮೆರವಣಿಗೆ ಸಾಗಿತ್ತು. ಮೆರವಣಿಗೆಯ ವಿಡಿಯೊವು ಧೀರೇಂದ್ರ ಶಾಸ್ತ್ರಿ ಅವರ ಯೂಟ್ಯೂಬ್ ಚಾನೆಲ್‌ನಲ್ಲಿಯೂ ಅಪ್‌ಲೋಡ್ ಮಾಡಲಾಗಿದೆ. ಈ ಮೆರವಣಿಗೆಯ ವಿಡಿಯೊವನ್ನು ಪೋಸ್ಟ್ ಮಾಡಿಕೊಳ್ಳುತ್ತಾ, ನೇಪಾಳದಿಂದ ಅಯೋಧ್ಯೆಗೆ ಬರುತ್ತಿರುವ ಮೆರವಣಿಗೆ ಎಂದು ತಪ್ಪಾಗಿ ಮಾಹಿತಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಜನವರಿ 15, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಪಂಚಮಿ ಗಂ. 26-17 **ನಕ್ಷತ್ರ:** ಶತಭಿಷಾ ಗಂ. 08-07 ನಂತರ ಪೂರ್ವಾಭಾದ್ರ ಗಂ. 30-10 **ಯೋಗ:** ವರಿಯಾನ್ ಗಂ. 23-11 **ಕರಣ:** ಬವ ಗಂ. 15-36, ಧನು ಮಾಸದ 30 ನೇ ದಿನ, **ಮಳೆನಕ್ಷತ್ರ:** ಉತ್ತರಾಷಾಢ 2, **ರಾಹುಕಾಲ:** ಬೆಳಿಗ್ಗೆ 07-30 – 09-00 **ಸೂರ್ಯೋದಯ:** 07-01 **ಸೂರ್ಯಾಸ್ತ:** 06-19, **ಮುಸ್ಲಿಂ ದಿನಾಂಕ:** 03 ರಜಬ್, **ದಿನ ಭವಿಷ್ಯ:** ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯಕಾಲ **ಅದೃಷ್ಟ ಸಂಖ್ಯೆ:** 4, 7

ಮೇಷ: ಯೋಗ ಮಾರ್ಗದಲ್ಲಿ ಸಾಧನೆ ನಡೆಸುವವರಿಗೆ ಬೇಕಾದಂತಹ ಸಹಚರರು ಸಿಗುವರು. ನದಿತೀರದಲ್ಲಿ ಜಮೀನನ್ನು ಹೊಂದಿದವರಿಗೆ ಕೆಲವು ಸಮಸ್ಯೆಗಳು ಸಂಭವಿಸಬಹುದು. ಜಾಗರಾಕರಾಗಿ ಇರುವುದು ಕ್ಷೇಮ.

ವೃಷಭ: ಗೃಹಿಣಿಯರಿಗೆ ಕೆಲವು ಸಮಸ್ಯೆಗಳು ಉಂಟಾಗುವುದರಿಂದ ಮನೆಯ ಜವಾಬ್ದಾರಿಯನ್ನು ಪುರುಷರು ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ಹಳೆಯ ತಪ್ಪುಗಳನ್ನು ಮನ್ನಿಸುವಂತೆ ಜಗನ್ಮಾತೆಯಲ್ಲಿ ಪ್ರಾರ್ಥಿಸಿ, ಕಾರ್ಯ ಕೈಗೊಳ್ಳಿ.

ಮಿಥುನ: ಹಿಂದಿನ ದಿನದ ನಿದ್ರಾಹೀನತೆಯಿಂದ ಈ ದಿನದ ಸಂಭ್ರಮದ ಸಂದರ್ಭಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಯಾವುದೇ ಹೊಸ ವ್ಯವಹಾರವನ್ನು ಶುರುಮಾಡುವುದಿದ್ದರೂ ಇಂದು ಸಾಂಕೇತಿಕವಾಗಿ ಪ್ರಾರಂಭಿಸಿ.

ಕರ್ಕಾಟಕ: ಕೆಲವು ದಿನಗಳಿಂದ ನಡೆಯುತ್ತಿರುವ ಮುಸುಕಿನ ಗುದ್ದಾಟಗಳಿಂದ ನೊಂದ ನಿಮ್ಮ ಮನಸ್ಸಿಗೆ ಇಂದು ಒಂದು ವಿರಾಮ ಸಿಕ್ಕಂತಾಗುವುದು. ಹಳೆಯ ನೋವುಗಳನ್ನು ಮರೆಯಲು ಸಹಾಯವಾಗುವುದು.

ಸಿಂಹ: ಒಬ್ಬ ವ್ಯಕ್ತಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಬದಲಾಗಿ ನಿಮ್ಮದೇ ಜವಾಬ್ದಾರಿಯಲ್ಲಿರುವ ಎಲ್ಲಾ ಕಾರ್ಯಗಳ ಮೇಲೂ ಗಮನ ಹರಿಸುವುದು ಸೂಕ್ತ. ಪತಿಯ ಆರೋಗ್ಯವು ನಿಮ್ಮ ಆರೈಕೆಯಿಂದ ಉನ್ನತಿ ಕಾಣುವುದು.

ಕನ್ಯಾ: ನಿಮ್ಮ ಎಲ್ಲಾ ನಡವಳಿಕೆಯು ಪರರಿಗೆ ಅಹಿತವಾಗದಂತೆ, ಸತ್ಯಮಾರ್ಗದಲ್ಲಿ ಇರಲಿ. ನಿಮ್ಮ ಬದುಕಿನಲ್ಲಿ ಉಳಿದ ದಿನಗಳನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಉನ್ನತಿ ಪಡೆದುಕೊಳ್ಳುವ ರೀತಿ ನಡೆಸುವ ಪ್ರಯತ್ನ ಮಾಡುವಿರಿ.

ತುಲಾ: ನಿಮ್ಮ ಸಹೋದರಿಯ ನಿಶ್ಚಿತಾರ್ಥ ಅಥವಾ ವಿವಾಹದ ಸಲುವಾಗಿ ತಯಾರಿ ನಡೆಸುವಿರಿ. ಇಂದು ಸಿಕ್ಕಂತಹ ಬಿಡುವಿನ ಸಮಯವನ್ನು ಅತ್ಯಂತ ಪ್ರಯೋಜನಕರವಾಗಿ ಬಳಸುವಿರಿ. ಹಿರಿಯರನ್ನು ಭಕ್ತಿಯಿಂದ ಕಾಣಿ.

ವೃಶ್ಚಿಕ: ಸಾಂಸಾರಿಕ ಸಮಸ್ಯೆಗಳಿಗೆ ಮನೆಯ ಹೊರಗಿನವರ ಬಳಿ ಸಲಹೆ ಕೇಳುವುದು ನಿಮ್ಮ ಪ್ರತಿಷ್ಠೆಗೆ ದಕ್ಕೆ ತರುವುದರಿಂದ ನೀವೇ ಪರಿಹಾರವನ್ನು ಹುಡುಕಿಕೊಳ್ಳಿ. ಸಂಜೆಯ ಸಮಯದಲ್ಲಿ ಒಂದು ಶುಭ ಸಮಾಚಾರ ಕೇಳುವಿರಿ.

ಧನು: ನಿಮ್ಮ ಮನೆಯಲ್ಲಿ ಕೆಲವು ಅನುಮಾನಾಸ್ಪದ ಘಟನೆಗಳು ನಡೆದು ಕಳವಳಕ್ಕೆ ಕಾರಣವಾಗುವುದು. ಸಹೋದರ ಸಹೋದರಿಯರ ಸಮಾಗಮವು ಅತ್ಯಂತ ಹರ್ಷದಾಯಕವಾಗಿ ಇರುವುದು.

ಮಕರ: ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡಿದ ಹರ್ಷ, ಅಲ್ಲಿ ನಡೆದ ಘಟನೆಗಳು ನಿಮಗೆ ಉಲ್ಲಾಸವನ್ನು ಉಂಟುಮಾಡುತ್ತವೆ. ಮುಖ್ಯವಾದ ವಿಚಾರಗಳನ್ನು ಹೆಂಡತಿಯೊಂದಿಗೆ ಚರ್ಚಿಸುವುದಕ್ಕೆ ಸಮಯವನ್ನು ನೋಡುವುದು ಸೂಕ್ತ.


ಕುಂಭ: ಸಂಗಾತಿಯು ನಿಮ್ಮ ಜೊತೆಗೆ ಇರದಿರುವುದು ನಿಮಗೆ ಒಂದು ರೀತಿಯ ಜಾಡ್ಯವನ್ನು ತರಬಹುದು. ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಅವರನ್ನು ಇನ್ನೂ ಇತರ ಕ್ಷೇತ್ರಗಳಲ್ಲಿ ನಿರತರನ್ನಾಗಿ ಮಾಡುವಿರಿ.

ಮೀನ: ಕಳೆದ ವರ್ಷದ ಆಯವ್ಯಯದ ಅಂದಾಜು ದೊರಕಿಸಿಕೊಂಡ ನೀವು ಈ ವರ್ಷದ ವ್ಯವಹಾರದಲ್ಲಿ ಇನ್ನಿತರ ತಂತ್ರಗಳನ್ನು ರೂಪಿಸಿಕೊಳ್ಳುವಿರಿ. ಫಲ ಪುಷ್ಪಗಳ ವ್ಯಾಪಾರಿಗಳಿಗೆ ಅಧಿಕ ವ್ಯಾಪಾರ ಹಾಗೂ ಲಾಭ ಇರುವುದು.

ನುಡಿ ಬೆಳಗು

ಸಣ್ಣ ಸಣ್ಣ ಕ್ಷಣಗಳಲ್ಲಡಗಿವೆ, ಬದುಕಿನ ಅಮೃತಬಿಂದುಗಳು





ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಯೋಚಿಸಿ ನೋಡಿ. ಬಹಳಷ್ಟು ಸಂದರ್ಭಗಳಲ್ಲಿ ನಾವು ನಾಳೆಗಳ ಕುರಿತು ಚಿಂತಿಸುತ್ತಾ ಇಂದಿನ ಸುಂದರ ಕ್ಷಣಗಳಲ್ಲಿ ಜೀವಿಸುವುದೇ ಇಲ್ಲ. ಫೇಸ್‌ಬುಕ್‌ನಲ್ಲಿ ಓದಿದ ಒಂದು ಸಂದೇಶದಂತೆ ನಾವು ಗಳಿಸಿದ ಹಣದಲ್ಲಿ ಶೇ 70ರಷ್ಟು, ನಮ್ಮ ನಂತರ ಬ್ಯಾಂಕ್ ಖಾತೆಯಲ್ಲಿ ಹಾಗೆಯೇ ಉಳಿದಿರುತ್ತದೆ. ನಾವು ವಾಸಿಸುವ ದೊಡ್ಡ ಮನೆಯಲ್ಲಿ ಶೇ 70ರಷ್ಟನ್ನು ನಾವು ಉಪಯೋಗಿಸುವುದೇ ಇಲ್ಲ. ನಮ್ಮ ಕಪಾಟಿನಲ್ಲಿರುವ ಬಟ್ಟೆಗಳಲ್ಲಿ ಶೇ 70ರಷ್ಟನ್ನು ನಾವು ಧರಿಸುವುದಿಲ್ಲ. ನಮ್ಮ ದುಬಾರಿ ಫೋನಿನಲ್ಲಿರುವ 70ರಷ್ಟು ಸೌಲಭ್ಯಗಳನ್ನು ನಾವು ಬಳಸುವುದಿಲ್ಲ. ಇಲ್ಲೆಲ್ಲಾ ಶೇ 30 ಮಾತ್ರ ನಮ್ಮ ಅಗತ್ಯ. ಆದರೆ ಜೀವನದ ವ್ಯಂಗ್ಯವೆಂದರೆ ನಮ್ಮ ಬದುಕಿನ ಬಹು ಭಾಗವನ್ನು ಆ ಶೇ 70 ಭಾಗದ ಗಳಿಕೆಗಾಗಿಯೇ ಮೀಸಲಿಡುತ್ತೇವೆ.


ಹಣ ಗಳಿಕೆಯಲ್ಲಿ ಬದುಕಿನ ಖುಷಿ ಅಡಗಿದೆ ಎಂಬ ಭಾವನೆ ಬಹುಪಾಲು ಮಂದಿಯಲ್ಲಿ ಇದೆ. ಆದರೆ ಜೀವನದ ನೆಮ್ಮದಿಯ ಕ್ಷಣಗಳು ನಮ್ಮ ಅಂತರಂಗದ ಖಜಾನೆಯಲ್ಲಿಯೇ ಹೇರಳವಾಗಿ ಲಭ್ಯವಿವೆ. ಅವನ್ನು ಹೆಕ್ಕಿಕೊಳ್ಳಲು, ಅನುಭವಿಸಲು ಒಳನೋಟ ಬೇಕಷ್ಟೇ. ನಿತ್ಯವೂ ಸಂಜೆ ನಿಮ್ಮ ಮನೆಯ ತಾರಸಿಯ ಮೇಲೆ ನಿಂತು ಆಗಸದತ್ತ ಒಮ್ಮೆ ಕಣ್ಣು ಹಾಯಿಸಿ ನೋಡಿ. ಕೆಂಪನೆಯ ರಂಗು ಮೂಡಿಸುತ್ತಾ ಅಸ್ತಮಿಸುತ್ತಿರುವ ಸೂರ್ಯ, ಚದುರಿದ ಮೋಡಗಳು ನೀಲಿ ನಭದಲ್ಲಿ ಸೃಷ್ಟಿಸಿರುವ ರಂಗುರಂಗಿನ ಚಿತ್ತಾರ ಕೊಡುವ ಖುಷಿಗೆ ನೀವು ಒಂದು ಪೈಸೆ ಕೂಡಾ ಖರ್ಚು ಮಾಡಬೇಕಾಗಿಲ್ಲ. ಕಚೇರಿಯಿಂದ ಮನೆಗೆ ಮರಳಿದಾಗ ನಿಮ್ಮ ಬರುವಿಕೆಗಾಗಿ ಕಾಯುತ್ತಿರುವ ನಿಮ್ಮ ಪುಟ್ಟ ಕಂದಮ್ಮ ಬೀರುವ ಅದ್ಭುತವಾದ ನಗುವಿಗೆ ಬೆಲೆ ಕಟ್ಟಲು ಸಾಧ್ಯವೇ? ದೂರದಲ್ಲಿರುವ ನಿಮ್ಮ ಅಮ್ಮನಿಗೊಮ್ಮೆ ಫೋನ್ ಮಾಡಿ 'ಸುಮ್ಮನೆ ಫೋನ್ ಮಾಡ್ದೆ ಅಮ್ಮ, ನಿನ್ನತ್ರ ಮಾತಾಡಬೇಕು ಅಂತ ಅನ್ನಿಸ್ತು' ಎಂದು ಹೇಳಿದಾಗ ಆ ಹಿರಿಯ ಜೀವಕ್ಕಾಗುವ ಸಂತೋಷ ನಿಮ್ಮ ಬ್ಯಾಂಕ್ ಬ್ಯಾಲೆನ್ಸಿನ ಅಂಕೆಗಳಿಗಿಂತ ಎಷ್ಟೋ ಮಿಗಿಲಾದದ್ದು. ನಿಮ್ಮ ಮಡದಿಯ ರುಚಿಯಾದ ಅಡುಗೆಗೆ ನೀವು 'ತುಂಬಾ ಚೆನ್ನಾಗಿದೆ ಕಣೇ' ಎಂದಾಗ ಆಕೆಯ ಕಣ್ಣಲ್ಲಿ ಮಿಂಚುವ ಖುಷಿಗೆ ನೀವು ದುಬಾರಿ ಬಿಲ್ ತೆರಬೇಕಾಗಿಲ್ಲ. ನಾವು ಕಂಡಿರದ ನಾಳೆಗಳ ಕುರಿತು ಕೊರಗುವುದರ ಬದಲು ಇಂದಿನ ಸಣ್ಣ ಸಣ್ಣ ಕ್ಷಣಗಳಲ್ಲಿ ಬದುಕುತ್ತಾ ಅವುಗಳಲ್ಲಿನ ಅಮೃತ ಬಿಂದುಗಳನ್ನು ಸವಿದರೆ ಬದುಕಿನ ನಿಜವಾದ ಸಾರದ ಅರಿವು ನಮಗಾಗುತ್ತದೆ.

ಪದಬಂಧ 5561

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪರವಾಗಿ ಹಿಡಿದಿರುವ ಕೊಡಲಿ (3)
3.ಕಾಸು ನೀಡಿ ಖರೀದಿಸಿದ ತೋಟಾ (4)
5.ತಕ್ಷಣ ಕವನ ರಚಿಸುವವ (4)
7.ತಿಂದಿದ್ದು ಪೂರ್ಣವಾಗಿ ಅರಗದಿರುವುದು (3)
8.ಸ್ವರದಲ್ಲಿನ ಸಹಿ ಕಾಣುತ್ತಿದೆಯೇ? (5)
11.ರಾಯತವಿರುವ ಅಗಲ ಹರಿವಾಣ (3)
12.ಕರದಲ್ಲಿರುವ ಸಂಪತ್ತು (4)
15.ದೂಷಣೆಗೆ ಒಳಗಾದ ವಿನೋದಗಾರ (4)
16.ಬುದ್ಧಿವಂತ ಹಾಕಿರುವ ತಳಪಾಯ (3)

ಮೇಲಿಂದ ಕೆಳಕ್ಕೆ
2.ಶುಕದ ಬಳಿಯಲ್ಲೇ ಸೊಣಗವಿದೆಯಲ್ಲಾ? (3)
3.ಕಾದಾಡುತ್ತಲೇ ತಲುಪಿರುವ ವನ (2)
4.ವರ್ಣನೆಗೆ ನಿಲುಕದ ಚಿನ್ನ (3)
5.ಆಮೇಲೆ ಕಾಣಿಸಿದ ಕೂರ್ಮ! (2)
6.ಪ್ರೇಮಿಗಳ ಅಗಲಿಕೆಯ ನೋವು ಈ ತರಹವಿದೆ (3)
7.ಮಧುರವಾಗಿರುವ ತುಟಿ (3)
8.ತನಗೆ ತಾನೇ ಮಾತಾಡಿಕೊಳ್ಳುವುದು (3)
9.ಕ್ಷಣಕಾಲ ಮಾತ್ರ ಇರುವಂಥದ್ದು (3)
10.ನಗರದಲ್ಲಿರುವ ಮನುಷ್ಯ (2)
11.ಪದ ಹೇಳಿ ಪಡೆದುಕೊಂಡ ಡಿಗ್ರಿ! (3)
13.ಬೂಬು ಹೇಳಿದ ಕಾರಣ! (3)
14.ಕಾಯಕದಲ್ಲಿ ನಿರತನಾಗಿರುವ ಚಿಕ್ಕಪ್ಪ (2)



5560ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದುಕು 3.ಮತ್ಸರ 4.ತರಗು 6.ಕುಡಿ 7.ನಭ 10.ಯಮ 13.ಮನ 14.ತಿರುಕ 15.ವಾಸನೆ 16.ಟಪಾಲು

ಮೇಲಿಂದ ಕೆಳಕ್ಕೆ:
1.ಬರಗಾಲ 2.ಕುತರ್ಕ 3.ಮಡಿ 5.ಗುನ 6.ಕುಟಿಲೋಪಾಯ 8.ಭವಬಂಧನ 9.ಅಹವಾಲು 11.ಮತಿ 12.ವಿಕಟ 13.ಮನೆ

ಸುಡೊಕು 5946

6		4				7		8
	9			7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5945 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಸಂಕ್ರಾಂತಿ ಸಂಭ್ರಮ



ಮಕರ ಸಂಕ್ರಾಂತಿ ಹಬ್ಬದ ಮುನ್ನಾ ದಿನ ಭಾನುವಾರ ಭೋಗಿ ಹಬ್ಬದ ಪ್ರಯುಕ್ತ ಹುಬ್ಬಳ್ಳಿಯ ತೋಳನಕೆರೆ ಉದ್ಯಾನದಲ್ಲಿ ಸಾಂಪ್ರದಾಯಿಕ ಉಡುಗೆ ತೊಡುಗೆಗಳೊಂದಿಗೆ ಬಂದ ಮಹಿಳೆಯರು ಉತ್ತರ ಕರ್ನಾಟಕದ ವಿಶೇಷ ಭೋಜನ ಸವಿದರು –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ



ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮೈಸೂರು ತಾಲ್ಲೂಕಿನ ಸಿದ್ದಲಿಂಗಪುರದಲ್ಲಿ ಭಾನುವಾರ ರಾಸುಗಳನ್ನು ಕಿಚ್ಚು ಹಾಯಿಸಲಾಯಿತು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.



ವಿಜಯಪುರ ನಗರದ ಸಿದ್ಧೇಶ್ವರ ಜಾತ್ರೆ ಅಂಗವಾಗಿ ಅಲಂಕೃತಗೊಂಡ ನಂದಿಕೋಲುಗಳ ಮೆರವಣಿಗೆ ಶ್ವೇತವಸ್ತ್ರಧಾರಿ ಭಕ್ತರ ನಡುವೆ ಭಾನುವಾರ ಸಂಭ್ರಮದಿಂದ ಜರುಗಿತು –ಪ್ರಜಾವಾಣಿ ಚಿತ್ರ/ಸಂಜೀವ ಅಕ್ಕಿ

ಹಾವೇರಿಯ ಸಾಮೂಹಿಕ ಅತ್ಯಾಚಾರ ಪ್ರಕರಣ: ಬಿಜೆಪಿಯಿಂದ ವ್ಯಾಪಕ ಟೀಕೆ • ಮತ್ತಿಬ್ಬರು ಆರೋಪಿಗಳ ಬಂಧನ

ಮುಜುಗರ ತಪ್ಪಿಸಲು ಸಂತ್ರಸ್ತೆ ಸ್ಥಳಾಂತರ!

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ನಗರದ ಸ್ವಧಾರಾ ಮಹಿಳಾ ಸಾಂತ್ವನ ಕೇಂದ್ರದಲ್ಲಿ ಆರೈಕೆ ಮತ್ತು ಚಿಕಿತ್ಸೆಗಾಗಿ ಆಶ್ರಯ ಪಡೆದಿದ್ದ ಸಾಮೂಹಿಕ ಅತ್ಯಾಚಾರದ ಪ್ರಕರಣದ ಸಂತ್ರಸ್ತೆಯನ್ನು ಶಿರಸಿ ತಾಲ್ಲೂಕಿನ ಅವಳ ಸ್ವಗ್ರಾಮಕ್ಕೆ ಭಾನುವಾರ ಬೆಳಗಿನ ಜಾವ ಪೊಲೀಸ್ ವಾಹನದಲ್ಲಿ ದಿಢೀರ್ ಸ್ಥಳಾಂತರ ಮಾಡಿರುವುದು ವ್ಯಾಪಕ ಟೀಕೆಗೆ ಗುರಿಯಾಗಿದೆ.

‘ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದ ನಿಯೋಗ ಭಾನುವಾರ ಸಂತ್ರಸ್ತೆಯನ್ನು ಭೇಟಿ ಮಾಡಬೇಕಿತ್ತು. ನಮ್ಮ ಭೇಟಿಗೆ ಹೆದರಿದ ಸರ್ಕಾರ, ಪೊಲೀಸರ ಮೇಲೆ ಒತ್ತಡ ಹೇರಿ, ‘ಲೀಗಲ್ ಕಿಡ್ನಾಪ್’ ಮಾಡಿದ್ದಾರೆ’ ಎಂದು ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಆರೋಪಿಸಿದ್ದಾರೆ.

ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಗ್ರಾಮದಲ್ಲಿ ಆಯೋಜಿಸಿರುವ ‘ಸಿದ್ಧರಾಮೇಶ್ವರ ಜಯಂತಿ’ ಕಾರ್ಯಕ್ರಮದಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗಿಯಾಗುತ್ತಿರುವುದರಿಂದ, ಈ ಸಂದರ್ಭದಲ್ಲಿ ಪಕ್ಷಕ್ಕೆ ಯಾವುದೇ ಮುಜುಗರ ಆಗದಂತೆ ನೋಡಿಕೊಳ್ಳಲು ಸಂತ್ರಸ್ತೆಯನ್ನು ಏಕಾಏಕಿ ಸ್ಥಳಾಂತರ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.



ಹಾವೇರಿ ನಗರದ ಸ್ವಧಾರಾ ಮಹಿಳಾ ಸಾಂತ್ವನ ಕೇಂದ್ರದಿಂದ ಸಂತ್ರಸ್ತೆಯನ್ನು ಶಿರಸಿಯತ್ತ ಪೊಲೀಸ್ ವಾಹನದಲ್ಲಿ ಭಾನುವಾರ ಬೆಳಿಗ್ಗೆ ಕರೆದೊಯ್ಯಲಾಯಿತು

ಶಾಸಕರ ವಿರುದ್ಧ ದೂರು ದಾಖಲಿಸಿ: ‘ಬ್ಯಾಡಗಿ ಶಾಸಕ ಮತ್ತು ಕಾಂಗ್ರೆಸ್ ಮುಖಂಡರೊಬ್ಬರು ಶನಿವಾರ ರಾತ್ರಿ 11ಕ್ಕೆ ಅನುಮತಿಯಿಲ್ಲದೆ ಸ್ವಧಾರಾ ಕೇಂದ್ರದ ಬಳಿ ಹೋಗಿ, ಮಹಿಳಾ ಕಾನ್‌ಸ್ಟೆಬಲ್ ಇಲ್ಲದೆ ಸಂತ್ರಸ್ತೆಯನ್ನು ಭೇಟಿ ಮಾಡಿ, ಪರಿಹಾರ ನೀಡಿದ್ದಾರೆ. ರಾತ್ರಿ ವೇಳೆ ಹೋಗುವ ಅವಶ್ಯಕತೆ ಏನಿತ್ತು? ಶಾಸಕರ ವಿರುದ್ಧ ಅತಿಕ್ರಮಣ ಪ್ರವೇಶ ಎಂದು ಅಧಿಕಾರಿಗಳು ದೂರು ದಾಖಲಿಸಬೇಕು’ ಎಂದು ಮಂಜುಳಾ ಒತ್ತಾಯಿಸಿದರು.

ಹಾನಗಲ್ ತಾಲ್ಲೂಕಿನ ಘಟನಾ ಸ್ಥಳಗಳಲ್ಲಿ ಮಹಜರು ಪ್ರಕ್ರಿಯೆ ಮುಗಿದ ನಂತರ ಸಂತ್ರಸ್ತೆಯನ್ನು ಶುಕ್ರವಾರ ರಾತ್ರಿ ನಗರದ ಸ್ವಧಾರಾ ಕೇಂದ್ರಕ್ಕೆ ಪೊಲೀಸರು ಬಿಟ್ಟು ಹೋಗಿದ್ದರು. ಆರೋಪಿಗಳ ಹಲ್ಲೆ ಮತ್ತು ಅತ್ಯಾಚಾರ ಕೃತ್ಯದಿಂದ ಗಾಯಗೊಂಡು ಜರ್ಜರಿತ-ರಾಗಿದ್ದ ಸಂತ್ರಸ್ತೆಗೆ ಭಾನುವಾರದಂದು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬೇಕಿತ್ತು.

ಹೆಪ್ಪುಗಟ್ಟಿದ್ದ ರಕ್ತ: ‘ಆರೋಪಿಗಳು ಸಂತ್ರಸ್ತೆಗೆ ಚೆನ್ನಾಗಿ ಥಳಿಸಿರುವ ಕಾರಣ ಆಕೆಯ ಬೆನ್ನಿನ ಕೆಳಭಾಗದಲ್ಲಿ ರಕ್ತ ಹೆಪ್ಪುಗಟ್ಟಿ ಗಂಟುಗಳಾಗಿ ಕುಳಿತುಕೊಳ್ಳಲು ಕಷ್ಟಪಡುತ್ತಿದ್ದಳು. ತೊಡೆಯ ಭಾಗ ಹಸಿರು ನೆಟ್ಟಿತ್ತು. ತಲೆಯ ಭಾಗದಲ್ಲಿ ತುಂಬಾ ನೋವಿದ್ದ ಕಾರಣ ತಲೆ ಬಾಚಿಕೊಳ್ಳಲು ಮತ್ತು ಸ್ನಾನ ಮಾಡಲು ಆಗುತ್ತಿಲ್ಲ ಎಂದು ಸಂತ್ರಸ್ತೆ ನೋವು ತೋಡಿಕೊಂಡಿದ್ದಳು. ಈ ಕಾರಣ ಭಾನುವಾರ ಜಿಲ್ಲಾಸ್ಪತ್ರೆಯ ಸಖಿ ಕೇಂದ್ರದಲ್ಲಿ ಚಿಕಿತ್ಸೆ ಮತ್ತು ಕೌನ್ಸೆಲಿಂಗ್ ಕೊಡಿಸಲು ತಯಾರಿ ನಡೆಸಿದ್ದೆವು. ಅಷ್ಟರಲ್ಲಿ ಆಕೆಯನ್ನು ಪೊಲೀಸರು ತನಿಖೆಗೆ ಕರೆದೊಯ್ಯುತ್ತೇವೆ ಎಂದು ಬೆಳಗಿನ ಜಾವ ಆಕೆಯ ಊರಿಗೆ ಬಿಟ್ಟು ಬಂದಿದ್ದಾರೆ’ ಎಂದು ಸ್ವಧಾರಾ ಸಿಬ್ಬಂದಿ ಮಾಹಿತಿ ನೀಡಿದರು.

ಜೀವಾವಧಿ ಶಿಕ್ಷೆಯಾಗಲಿ: ಅಬ್ದುಲ್ ಅಜೀಂ

‘ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಎಸ್ಪಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್.ಐ.ಟಿ) ರಚಿಸಿ, ಆಮೂಲಾಗ್ರವಾಗಿ ತನಿಖೆ ನಡೆಸಬೇಕು. ವರ್ಷದೊಳಗೆ ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆ ಅಥವಾ ಮರಣದಂಡನೆ ಆಗುವಂತೆ ನೋಡಿಕೊಳ್ಳಿ ಎಂದು ಎಸ್ಪಿ ಅವರಿಗೆ ಸೂಚಿಸಿದ್ದೇನೆ’ ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ತಿಳಿಸಿದರು.

ನೈತಿಕ ಪೊಲೀಸ್‌ಗಿರಿ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶ ಕೊಡಬಾರದು. ಇದನ್ನು ‘ಘೋರ ಅಪರಾಧ’ ಎಂದು ಪರಿಗಣಿಸಬೇಕು ಎಂದು ಗೃಹಸಚಿವರಿಗೆ ಪತ್ರ ಬರೆಯುತ್ತೇನೆ. ಹಾನಗಲ್ ಪ್ರಕರಣದ ಆರೋಪಿಗಳು ಅಕಸ್ಮಾತ್ ಜಾಮೀನಿನ ಮೇಲೆ ಬಿಡುಗಡೆಯಾದರೆ ಅವರ ಮೇಲೆ ಗೂಂಡಾ ಕಾಯ್ದೆ ಹಾಕಬೇಕು ಮತ್ತು ಅವರನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು. ಇಂಥ ಹೀನ ಕೃತ್ಯ ಎಸಗದಂತೆ ಭಯ ಹುಟ್ಟಿಸುವ ರೀತಿಯಲ್ಲಿ ಶಿಕ್ಷೆ ಜಾರಿಯಾಗಬೇಕು ಎಂದರು.

ಸಂಬಂಧಪಡದವರ ಬಂಧನ: ಆರೋಪ

ಹಾನಗಲ್ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಮತ್ತಿಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಇದುವರೆಗೆ 5 ಆರೋಪಿಗಳನ್ನು ಬಂಧಿಸಿದಂತಾಗಿದೆ.

ಅಕ್ಕಿಆಲೂರಿನ ಇಮ್ರಾನ್ ಬಶೀರ್ ಅಹಮದ್ ಜೇಕಿನಕಟ್ಟಿ (23) ಹಾಗೂ ರೇಹಾನ್ ಮಹ್ಮದ್ ಹುಸೇನ್ ವಾಲೀಕಾರ ಅಕ್ಕಿಆಲೂರ (19) ಎಂಬುವರನ್ನು ಬಂಧಿಸಲಾಗಿದೆ ಎಂದು ಎಸ್ಪಿ ಅಂಶುಕುಮಾರ್ ತಿಳಿಸಿದ್ದಾರೆ.

‘ಸಾಮೂಹಿಕ ಅತ್ಯಾಚಾರ ಪ್ರಕರಣ ದಲ್ಲಿ ಪೊಲೀಸರು ಈಗಾಗಲೇ ಬಂಧಿಸಿರುವ ಆರು ಮಂದಿಯಲ್ಲಿ ಇಬ್ಬರು ಈ ಪ್ರಕರಣದಲ್ಲಿ ಭಾಗಿಯಾಗದವರು. ನನಗೆ ಆ ಇಬ್ಬರ ಭಾವಚಿತ್ರ ತೋರಿಸಿದ್ದು, ಆ ಇಬ್ಬರು ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದವರಲ್ಲ’ ಎಂದು ಸಂತ್ರಸ್ತೆ ಗಂಭೀರ ಆರೋಪ ಮಾಡಿದ್ದಾರೆ.

‘ಪ್ರಕರಣ ಮುಚ್ಚಿಹಾಕಲು ಪೊಲೀಸರ ಯತ್ನ’

ಹುಬ್ಬಳ್ಳಿ: ‘ಹಾನಗಲ್‌ನಲ್ಲಿನ ಅತ್ಯಾಚಾರ ಪ್ರಕರಣ ವನ್ನು ಪೊಲೀಸರು ಮುಚ್ಚಿಹಾಕಲು ಯತ್ನಿಸಿದ್ದು, ವಿಫಲವಾಗಿದೆ. ಸಂತ್ರಸ್ತೆಗೆ ಹಣನೀಡಿ, ಆಮಿಷ ತೋರಿಸಿ ದೂರು ಹಿಂಪಡೆಯುಂತೆ ಮಾಡಿದ್ದು ಬಹಿರಂಗವಾಗಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಸುದ್ದಿಗಾರ ಜೊತೆಗೆ ಮಾತನಾಡಿದ ಅವರು, ‘ಸ್ಥಳೀಯ ಪೊಲೀಸರು ಪ್ರಕರಣ ಮುಚ್ಚಿಹಾಕುತ್ತಾರೆ ಎಂದು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೀಡುವಂತೆ ಒತ್ತಾಯಿಸಿದ್ದೆ. ಮುಖ್ಯಮಂತ್ರಿ ಹಾವೇರಿಗೆ ಬಂದಾಗ, ಪ್ರಕರಣವನ್ನು ಎಸ್‌ಐಟಿಗೆ ಕೊಡುವ ಘೋಷಣೆ ಮಾಡುತ್ತಾರೆ ಎಂದು ನಿರೀಕ್ಷಿಸಿದ್ದೇನೆ’ ಎಂದು ಹೇಳಿದರು.

ಹಾನಗಲ್ ಪೊಲೀಸರು ಸ್ಥಳ ಪರಿಶೀಲನೆ ಎಂದು ಹೇಳಿ ಮಹಿಳಾ ಕೇಂದ್ರದಿಂದ ಕರೆತಂದು ನೇರವಾಗಿ ಮನೆಗೆ ಬಿಟ್ಟು ಹೋಗಿದ್ದಾರೆ. ಮನೆ ಬಳಿ ಪೊಲೀಸರನ್ನು ನಿಯೋಜಿಸಿಲ್ಲ. ನನಗೆ ಜೀವಭಯವಿದೆ
ಸಂತ್ರಸ್ತೆ

ಸ್ಥಳ ಮಹಜರು, ಆಕೆಯ ಹೇಳಿಕೆ ಸೇರಿದಂತೆ ತನಿಖೆಯ ಪ್ರಕ್ರಿಯೆ ಮುಗಿದಿರುವ ಕಾರಣ ಸಂತ್ರಸ್ತೆಯನ್ನು ಶಿರಸಿ ತಾಲ್ಲೂಕಿನ ಆಕೆಯ ಸ್ವಗ್ರಾಮಕ್ಕೆ ಬಿಟ್ಟು ಬರಲಾಗಿದೆ
ಅಂಶುಕುಮಾರ್, ಎಸ್‌ಪಿ, ಹಾವೇರಿ

ಸಂತ್ರಸ್ತೆಯನ್ನೂ ಕೂಡಲೇ ಊರಿನಿಂದ ಸಾಂತ್ವನ ಕೇಂದ್ರಕ್ಕೆ ವಾಪಸ್ ಕರೆತರಬೇಕು. ಆಕೆಗೆ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಕೊಡಿಸಬೇಕು ಮತ್ತು ಭದ್ರತೆ ನೀಡಬೇಕು
ಅಬ್ದುಲ್ ಅಜೀಂ
ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ

ಹಾನಗಲ್‌ನಲ್ಲಿ ನಡೆದಿರುವುದು ಸಂಘಟನಾತ್ಮಕ ಅಪರಾಧ. ಮೈತುಂಬ ಗಾಯ, ಬೊಬ್ಬೆ ಇರುವ ಸಂತ್ರಸ್ತೆಯನ್ನು ಸಾಂತ್ವನ ಕೇಂದ್ರದಲ್ಲಿ ಇರಲು ಬಿಟ್ಟಿಲ್ಲ. 376–ಡಿ ಸೆಕ್ಷನ್ ಹಾಕಿದ ಮೇಲೆ ಎಸ್‌ಐಟಿ ಏಕೆ ರಚನೆಯಾಗಿಲ್ಲ
ಮಾಳವಿಕಾ ಅವಿನಾಶ್, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ

ಶಾಸಕ ರಾಜೇಶ್ ನಾಯ್ಕ್ ಕಾಲಿಗೆ ಪೆಟ್ಟು

ಪ್ರಜಾವಾಣಿ ವಾರ್ತೆ



ರಾಜೇಶ್ ನಾಯ್ಕ್

ಮಂಗಳೂರು: ತೆಂಕ ಎಡಪದವು ಗ್ರಾಮದ ಗೋಪಾಲಕೃಷ್ಣ ದೇವಸ್ಥಾನ ಮುಂಭಾಗದಲ್ಲಿ ಮೂಡುಬಿದಿರೆ–ಮಂಗಳೂರು ಹೆದ್ದಾರಿಯಲ್ಲಿ ಬಂಟ್ವಾಳ ಕ್ಷೇತ್ರದ ಶಾಸಕ ರಾಜೇಶ್ ನಾಯ್ಕ್ ಉಳಿಪಾಡಿ ಅವರಿಗೆ ಕಾರೊಂದು ಭಾನುವಾರ ಡಿಕ್ಕಿ ಹೊಡೆದಿದೆ. ಈ ಅಪಘಾತದಿಂದ ಅವರ ಎರಡೂ ಮೊಣಕಾಲುಗಳಿಗೆ ಗಾಯಗಳಾಗಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಭಾಗ ವಹಿಸಿದ್ದ ರಾಜೇಶ್ ನಾಯ್ಕ್ ಅವರು ಮಧ್ಯಾಹ್ನ 1.30ರ ಸುಮಾರಿಗೆ ಹೆದ್ದಾರಿಯನ್ನು ದಾಟುತ್ತಿದ್ದರು. ಆಗ ಮೂಡುಬಿದಿರೆ ಕಡೆಯಿಂದ ಬಂದ ಸ್ವಿಫ್ಟ್ ಕಾರು ಅವರಿಗೆ ಡಿಕ್ಕಿ ಹೊಡೆದಿತ್ತು. ಕಾರಿನ ಚಾಲಕ ವಾಹನವನ್ನು ನಿಲ್ಲಸದೇ ಪರಾರಿಯಾಗಿದ್ದ. ಪೊಲೀಸರು ಹೊಯ್ಸಳ ವಾಹನದ ನೆರವಿನಿಂದ ಆ ಕಾರನ್ನು ಗುರುಪುರ ಜಂಕ್ಷನ್ ಬಳಿ ಅಡ್ಡಗಟ್ಟಿ ವಶಕ್ಕೆ ಪಡೆದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತ್ಯಕ್ಷದರ್ಶಿ ಪವನ್ ಕುಮಾರ್ ನೀಡಿದ ದೂರಿನ ಅನ್ವಯ ಬಜಪೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮತ್ತಿಮಡು ಕಾರು ಪಲ್ಟಿ: ಗಾಯ



ಬಸವರಾಜ ಮತ್ತಿಮಡು

ಕಲಬುರಗಿ: ಕಲಬುರಗಿ ಗ್ರಾಮೀಣ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಅವರ ಕಾರು ಪಾಳಾ ಗ್ರಾಮದ ಬಳಿ ಭಾನುವಾರ ಬೆಳಿಗ್ಗೆ ಪಲ್ಟಿಯಾಗಿದ್ದು, ಅವರು ಗಾಯಗೊಂಡಿದ್ದಾರೆ.

ಮತ್ತಿಮಡು ಅವರಿಗೆ ಕೈ, ಕಾಲು, ಎದೆಯ ಭಾಗಕ್ಕೆ ಪೆಟ್ಟಾಗಿದೆ. ಶಹಾಬಾದ್ ಮಂಡಲ ಅಧ್ಯಕ್ಷ ಅಣವೀರ ಇಂಗನಶೆಟ್ಟಿ ಹಾಗೂ ಅವರ ಛಾಯಾಗ್ರಾಹಕ ಸಚಿನ್ ಅವರಿಗೆ ಗಂಭೀರ ಗಾಯಗಳಾಗಿವೆ. ಗನ್ ಮ್ಯಾನ್ ಚೆನ್ನು ಹಾಗೂ ಆಪ್ತ ಸಹಾಯಕ ದತ್ತು ಪವಾರ ಅವರಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ.

ಇವರೆಲ್ಲರನ್ನು ನಗರದ ಯುನೈಟೆಡ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಸ್ತೆ ತಿರುವಿನಲ್ಲಿ ಎದುರಿಗೆ ಬೈಕ್ ಅಡ್ಡ ಬಂದಿದೆ. ಬೈಕ್ ಸವಾರನನ್ನು ರಕ್ಷಿಸುವ ಭರದಲ್ಲಿ ಕಾರನ್ನು ರಸ್ತೆ ಕೆಳಗಿಳಿಸಿದ್ದು, ಆಯತಪ್ಪಿ ಪಲ್ಟಿಯಾಗಿದೆ.

ಲಿಂಗಾಯತ ಒಳ ಪಂಗಡಗಳ ಸಭೆ ಜ.27ಕ್ಕೆ ದಾವಣಗೆರೆಯಲ್ಲಿ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ಲಿಂಗಾಯತ ಒಳ ಪಂಗಡಗಳ ದುಂಡು ಮೇಜಿನ ಪೂರ್ವಭಾವಿ ಸಭೆಯನ್ನು ಜನವರಿ 27 ಮತ್ತು 28 ರಂದು ದಾವಣಗೆರೆಯಲ್ಲಿ ನಡೆಸಲು ನಿರ್ಣಯಿಸಲಾಗಿದೆ.

ಪಂಚಮಸಾಲಿ ಪಾದಯಾತ್ರೆಯ ತೃತೀಯ ವರ್ಷಾಚರಣೆಯ ಅಂಗವಾಗಿ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಭಾನುವಾರ ನಡೆದ 2ಎ ಮೀಸಲಾತಿ ಚಳವಳಿಗಾರರ ‘ಪಂಚಸಂಗಮ ಸಭೆ’ಯಲ್ಲಿ ತೆಗೆದುಕೊಂಡ ನಿರ್ಣಯ ಗಳನ್ನು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ನೌಕರರ ಗ್ರ್ಯಾಚ್ಯುಯಿಟಿಗೆ ವಿಮೆ ಕಡ್ಡಾಯ

ಒಂದನೇ ಪುಟದಿಂದ..

ಟ್ರಸ್ಟ್‌ಗೂ ಅವಕಾಶ: 500 ಅಥವಾ ಅದಕ್ಕಿಂತ ಹೆಚ್ಚಿನ ನೌಕರರು ಇರುವ ಸಂಸ್ಥೆಗಳು ಈಗಾಗಲೇ ಗ್ರ್ಯಾಚ್ಯುಯಿಟಿ ನಿಧಿಯನ್ನು ಹೊಂದಿದ್ದಲ್ಲಿ, ಅದನ್ನು ಮುಂದುವರಿಸಲು ಅವಕಾಶವಿದೆ. ಆದರೆ, ಅಂತಹ ಸಂಸ್ಥೆಗಳು ಉದ್ಯೋಗದಾತರು ಹಾಗೂ ನೌಕರರ ಪ್ರತಿನಿಧಿಗಳನ್ನು ಒಳಗೊಂಡ ಗ್ರ್ಯಾಚ್ಯುಯಿಟಿ ಟ್ರಸ್ಟ್ ರಚಿಸುವುದು ಕಡ್ಡಾಯ. ವಿಮಾ ಕಂಪನಿಗಳ ಸಹಭಾಗಿತ್ವದಲ್ಲೂ ಗ್ರ್ಯಾಚ್ಯುಯಿಟಿ ನಿಧಿಯನ್ನು ನಿರ್ವಹಣೆ ಮಾಡಬಹುದು.

ಗ್ರ್ಯಾಚ್ಯುಯಿಟಿ ನಿಧಿ ಮತ್ತು ಟ್ರಸ್ಟ್ ಹೊಂದಿರುವ ಸಂಸ್ಥೆಗಳು ನೌಕರರ ಗ್ರ್ಯಾಚ್ಯುಯಿಟಿ ಪಾವತಿಗೆ ಮಾತ್ರ ಅದರಲ್ಲಿನ ಹಣವನ್ನು ಬಳಕೆ ಮಾಡಲು ಅವಕಾಶ ಇರುತ್ತದೆ. ‘ರಾಜ್ಯದಲ್ಲಿ 60 ಲಕ್ಷದಿಂದ 70 ಲಕ್ಷ ನೌಕರರಿಗೆ ಹೊಸ ನಿಯಮದಿಂದ ಅನುಕೂಲ ಆಗಲಿದೆ. ಗ್ರ್ಯಾಚ್ಯುಯಿಟಿ ಮೊತ್ತಕ್ಕೆ ಇನ್ನು ಸಂಪೂರ್ಣ ಭದ್ರತೆ ದೊರಕಲಿದೆ’ ಎಂದು ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ. ಮೊಹಮದ್ ಮೊಹಿಸಿನ್ ತಿಳಿಸಿದರು.

ಹೆಚ್ಚಿದ ಪ್ರವಾಸಿಗರು, ಆದಾಯವೂ ಏರುಮುಖ

ಬಂಡೀಪುರ: 2023ರ ಏ.9ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ • ಒಂದು ವರ್ಷದಲ್ಲಿ 1.45 ಲಕ್ಷ ಪ್ರವಾಸಿಗರು

• ಸೂರ್ಯನಾರಾಯಣ ವಿ.

ಚಾಮರಾಜನಗರ: ದೇಶದ ಜನಪ್ರಿಯ ಪ್ರವಾಸಿ ತಾಣಗಳಲ್ಲಿ ಒಂದಾದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ 2023–24ನೇ ಸಾಲಿನಲ್ಲಿ ಭೇಟಿ ನೀಡಿರುವ ಪ್ರವಾಸಿಗರ ಸಂಖ್ಯೆ ಮತ್ತು ಆದಾಯದಲ್ಲಿ ಗಣನೀಯ ಏರಿಕೆಯಾಗಿದೆ.

ಆರ್ಥಿಕ ವರ್ಷ ಕೊನೆಗೊಳ್ಳಲು ಇನ್ನೂ ಎರಡೂವರೆ ತಿಂಗಳು ಬಾಕಿ ಇದ್ದು, ಈಗಾಗಲೇ, ಬಂದಿರುವ ಆದಾಯ ಮತ್ತು ಪ್ರವಾಸಿರ ಸಂಖ್ಯೆಯು ವಾರ್ಷಿಕ ಸರಾಸರಿಯನ್ನು ಮೀರಿವೆ.

2023ರ ಏ.1ರಿಂದ ಈವರೆಗೆ 1.45 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು, ₹15 ಕೋಟಿ ಆದಾಯ ಬಂದಿದೆ. ಸಾಮಾನ್ಯವಾಗಿ ಪ್ರತಿ ವರ್ಷ 1.20 ಲಕ್ಷದಿಂದ 1.30 ಲಕ್ಷದವರೆಗೆ ಪ್ರವಾಸಿಗರು ಬರುತ್ತಿದ್ದರು. ಆದಾಯ ₹8 ಕೋಟಿಯಿಂದ ₹9 ಕೋಟಿಯವರೆಗೆ ಬರುತ್ತಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ಬಂಡೀಪುರದಲ್ಲಿ ಸಫಾರಿಗೆ ಹೆಚ್ಚಿನ ಪ್ರವಾಸಿಗರು ಬರುತ್ತಾರೆ

ಪ್ರಧಾನಿ ಮೋದಿ ಭೇಟಿ: ಹುಲಿ ಯೋಜನೆಯ 50ನೇ ವರ್ಷದ ಸಂಭ್ರಮ ಆಚರಿಸಿಕೊಂಡ ಬಂಡೀಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷ ಏ.9ರಂದು ಭೇಟಿ ನೀಡಿ ಸಫಾರಿ ಕೈಗೊಂಡಿದ್ದರು. ಬಂಡೀಪುರದಿಂದ ನೆರೆಯ ತಮಿಳುನಾಡಿನ ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಭೇಟಿ ನೀಡಿದ್ದರು. ಮೋದಿಯವರ ಭೇಟಿ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿತ್ತು.

‘ಕೋವಿಡ್ ಹಾವಳಿ ಕಡಿಮೆಯಾದ ಬಳಿಕ ಜನರು ಪ್ರವಾಸಿ ತಾಣಗಳಿಗೆ ಭೇಟಿ ನೀಡುವುದು ಜಾಸ್ತಿಯಾಗಿದೆ. ಅದೇ ರೀತಿ ನಮ್ಮಲ್ಲಿಗೂ ಬರುತ್ತಿದ್ದಾರೆ. ಇದರೊಂದಿಗೆ ಪ್ರಧಾನಿ ಮೋದಿಯವರು ಕೂಡ ಬಂಡೀಪುರಕ್ಕೆ ಭೇಟಿ ನೀಡಿರುವುದು, ಹುಲಿ ಸಂರಕ್ಷಿತ ಪ್ರದೇಶದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಮತ್ತಷ್ಟು ಮಂದಿ ತಿಳಿಯಲು ಸಾಧ್ಯವಾಗಿದೆ. ಹೀಗಾಗಿ ಸಫಾರಿಗೆ ಬರುವವರು ಮತ್ತು ನಮ್ಮ ಕಾಟೇಜ್‌ಗಳಲ್ಲಿ ತಂಗುವವರ ಸಂಖ್ಯೆ ಹೆಚ್ಚಾಗಿದೆ’ ಎಂದು ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಯಾವುದರಲ್ಲಿ ಆದಾಯ?: ಸಫಾರಿ, ಬಂಡೀಪುರ ಕ್ಯಾಂಪಸ್‌ನಲ್ಲಿರುವ 10 ಕಾಟೇಜ್‌ಗಳು ಅರಣ್ಯ ಇಲಾಖೆಯ ಆದಾಯದ ಪ್ರಮುಖ ಮೂಲ. ಇದಲ್ಲದೇ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ವಾಹನ ನಿಲುಗಡೆ ಶುಲ್ಕ, ಅರಣ್ಯದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಸಿರು ಶುಲ್ಕವನ್ನೂ ಸಂಗ್ರಹಿಸಲಾಗುತ್ತಿದೆ.

ಪರಿಸರ ಸಂರಕ್ಷಣೆ, ಜಾಗೃತಿ ಚಟುವಟಿಕೆ

‘ಪರಿಸರ ಸ್ನೇಹಿ ಪ್ರವಾಸೋದ್ಯಮದಿಂದ ಬಂದ ಆದಾಯದಲ್ಲಿ ಪರಿಸರ ಸಂರಕ್ಷಣೆ, ಜಾಗೃತಿ ಮೂಡಿಸುವ ಕೆಲಸಗಳು, ಗಿರಿಜನರಿಗೆ ಮತ್ತು ಕಾಡಂಚಿನ ಜನರಿಗೆ ಅನುಕೂಲ ಕಲ್ಪಿಸುವ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ’ ಎಂದು ಹೇಳುತ್ತಾರೆ ಅಧಿಕಾರಿಗಳು.

‘ಕಾಡಂಚಿನ ಗ್ರಾಮಸ್ಥರು, ಗಿರಿಜನರಿಗಾಗಿ ಎರಡು ಆಂಬುಲೆನ್ಸ್‌ಗಳ ಸೇವೆ ಆರಂಭಿಸಿದ್ದೇವೆ. ಲಂಟಾನದಿಂದ ಕರಕುಶಲ ವಸ್ತು ತಯಾರಿಸುವ ತರಬೇತಿಯನ್ನು ಗಿರಿಜನ ಮಹಿಳೆಯರಿಗೆ ನೀಡಲಾಗುತ್ತಿದೆ. ಯುವ ಮಿತ್ರ, ಚಿಣ್ಣರ ವನದರ್ಶನದಂತಹ ಕಾರ್ಯಕ್ರಮಗಳೂ ನಡೆಯುತ್ತಿವೆ’ ಎಂದು ರಮೇಶ್ ಕುಮಾರ್ ವಿವರಿಸಿದರು.

ಏಪ್ರಿಲ್– ಜನವರಿ ಅವಧಿಯಲ್ಲಿ ಸಾಮಾನ್ಯವಾಗಿ 1.10 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಿದ್ದರು. ಈ ಬಾರಿ 1.45 ಲಕ್ಷ ಮಂದಿ ಭೇಟಿ ಕೊಟ್ಟಿದ್ದಾರೆ
ಪಿ.ರಮೇಶ್‌ಕುಮಾರ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ

ಮಾ.19ರಿಂದ ಶಿರಸಿ ಮಾರಿಕಾಂಬಾ ಜಾತ್ರೆ

ಶಿರಸಿ: ದ್ವೈವಾರ್ಷಿಕವಾಗಿ ಜರುಗುವ ಶಿರಸಿಯ ಮಾರಿಕಾಂಬಾ ದೇವಿ ಜಾತ್ರಾ ಮಹೋತ್ಸವವು ಮಾರ್ಚ್ 19ರಿಂದ 27ರವರೆಗೆ ನಡೆಯಲಿದೆ.

ಭಾನುವಾರ ದೇವಾಲಯದ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ ಗೋಪಾಲಕೃಷ್ಣ ದೇವಾಲಯದ ಪ್ರಧಾನ ಅರ್ಚಕ ಶರಣ ಆಚಾರ್ಯ ಜಾತ್ರೆಯ ದಿನಾಂಕ ಘೋಷಿಸಿದರು.

‘ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದ ಪೂರ್ವ ವಿಧಿ-ವಿಧಾನಗಳು ಜನವರಿ 31ರಿಂದ ಪ್ರಾರಂಭವಾಗಲಿವೆ. ಮಾ.19ರ ಮಧ್ಯಾಹ್ನ ದೇವಿ ರಥದ ಕಲಶದ ಪ್ರತಿಷ್ಠೆ ಹಾಗೂ ರಾತ್ರಿ ಸಭಾ ಮಂಟಪದಲ್ಲಿ ದೇವಿಯ ಜಾತ್ರಾ ಕಲ್ಯಾಣ ಪ್ರತಿಷ್ಠೆ ನಡೆಯಲಿದೆ. ಮಾ.20ರಂದು ಬೆಳಿಗ್ಗೆ ದೇವಿ ರಥಾರೋಹಣ, ಶೋಭಾಯಾತ್ರೆ ಜರುಗಲಿದೆ. ಮಧ್ಯಾಹ್ನ 1.10 ರೊಳಗೆ ಜಾತ್ರಾ ಗದ್ದುಗೆಯಲ್ಲಿ ದೇವಿ ಪ್ರತಿಷ್ಠಾಪನೆ ಜರುಗುವುದು. ಮಾ.21 ರಿಂದ ಭಕ್ತರಿಂದ ಸೇವೆಗೆ ಅವಕಾಶವಿದೆ’ ಎಂದರು.

‘ರಾಜಕೀಯ ಜೂಜಾಟದ ಕೇಂದ್ರವಾದ ರಾಮ ಮಂದಿರ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಅಯೋಧ್ಯೆ ರಾಮ ಮಂದಿರವು ಸದ್ಯ ರಾಜಕೀಯ ಜೂಜಾಟದ ಕೇಂದ್ರವಾಗಿದೆ’ ಎಂದು ಸಾಹಿತಿ ದೇವನೂರ ಮಹಾದೇವ ಟೀಕಿಸಿದರು.

ಇಲ್ಲಿನ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿ ವೃದ್ಧಿ ಸಂಸ್ಥೆಯಲ್ಲಿ ಶ್ರಮಣ ಸಾಂಸ್ಕೃತಿಕ ಟ್ರಸ್ಟ್ ಹಾಗೂ ಬಯಲು ಬಳಗದಿಂದ ಭಾನುವಾರ ಆಯೋಜಿಸಿದ್ದ ‘90ರ ನಂತರದ ಕರ್ನಾಟಕ’ ಕುರಿತ ಕಮ್ಮಟದಲ್ಲಿ ಅವರು ಮಾತನಾಡಿದರು.

‘ಸಾಕಷ್ಟು ಹಳ್ಳಿಗಳಲ್ಲಿ ರಾಮ ಮಂದಿರಗಳು ಇದ್ದು, ಅಲ್ಲಿ ಜೂಜಾಟವೇ ಹೆಚ್ಚಾಗಿದೆ. ಅಯೋಧ್ಯೆ ವಿಚಾರವೂ ಅದೇ ರೀತಿ ಆಗಿದೆ’ ಎಂದು ಲೇವಡಿ ಮಾಡಿದರು. ‘ಶ್ರೀರಾಮ ತನ್ನ ಅರಮನೆ ಮುಂದೆ ನ್ಯಾಯದ ಘಂಟೆ ಕಟ್ಟಿಸಿದ್ದ. ಜನಸಾಮಾನ್ಯರಿಗೆ ನ್ಯಾಯದಾನಕ್ಕೆ ಆದ್ಯತೆ ನೀಡಿದ್ದ. ಈಗ ನಿರ್ಮಾಣ ಆಗಿರುವ ರಾಮ ಮಂದಿರದ ನಾಲ್ಕು ದಿಕ್ಕಿನಲ್ಲೂ ಘಂಟೆ ಕಟ್ಟಿಸಿ ಜನರ ಸಮಸ್ಯೆ ಆಲಿಸಬೇಕು. ಕೊಟ್ಟ ಮಾತನ್ನು ಕಾಲ ಕಸ ಮಾಡಬಾರದು’ ಎಂದರು.

ಮೌಲ್ಯಮಾಪನ ನಡೆಯಲಿ: ‘ನಮ್ಮ ಆದಿವಾಸಿಗಳು ದೇವರನ್ನೇ ಮೌಲ್ಯಮಾಪನ ಮಾಡಿ, ಕಿತ್ತು ಬಿಸಾಡುವಷ್ಟು ಶಕ್ತಿ ಉಳ್ಳವರು. ಆದರೆ, ನಾವು ರಾಜಕಾರಣದಲ್ಲಿ ಕೊಟ್ಟ ಮಾತು ತಪ್ಪಿದ, ಕಷ್ಟಕ್ಕೆ ಆಗದ ದೈವವನ್ನೇ ಇನ್ನೂ ಆರಾಧಿಸುತ್ತಿದ್ದೇವೆ. ಇಡೀ ಜನಸ್ತೋಮ ಭಾವುಕ ಬಲೆಗೆ ಬಿದ್ದಿದ್ದು, ಬಿಡಿಸಲಾರದೇ ಒದ್ದಾಡುತ್ತಿದ್ದೇವೆ’ ಎಂದರು.

‘ಕಳೆದ ಚುನಾವಣೆಯಲ್ಲಿ ನಮ್ಮಿಂದ ಆಯ್ಕೆಯಾದ ಸಂಸದರು ಜನರ ಆಶೋತ್ತರಗಳನ್ನು ಎಷ್ಟು ಪೂರೈಸಿದರು, ಏನನ್ನು ಪೂರೈಸಲಿಲ್ಲ ಎನ್ನುವುದರ ಮೌಲ್ಯಮಾಪನ ತುರ್ತಾಗಿ ಆಗಬೇಕಿದೆ. ಹಾಗೆ ನಡೆದರೆ, ಇಂದಿನ ಶೇ 98ರಷ್ಟು ಸಂಸದರನ್ನು ಸಂಸತ್ತಿನಿಂದ ಆಚೆ ಬಿಸಾಡಬೇಕಾಗುತ್ತದೆ’ ಎಂದು ಹೇಳಿದರು.

‘ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ...’: ಕೋಟ್ಯಂತರ ಮನಸ್ಸು ಮುಟ್ಟಿದ ಹಾಡು

ಅಯೋಧ್ಯೆ ತಲುಪಿದ ಕನ್ನಡ ಗೀತೆ

• ರಾಮಕೃಷ್ಣ ಸಿದ್ರಪಾಲ



ಗಜಾನನ ಶರ್ಮಾ

ಹುಬ್ಬಳ್ಳಿ: ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮಲಲ್ಲಾನ ವಿಗ್ರಹದ ಪ್ರಾಣ ಪ್ರತಿಷ್ಠಾಪನಾ ದಿನ ಹತ್ತಿರವಾಗುತ್ತಿದ್ದಂತೆ ದೇಶದ ವಿವಿಧೆಡೆಗಳಿಂದ ಬಗೆ ಬಗೆಯ ರೂಪದಲ್ಲಿ ಕಾಣಿಕೆಗಳು, ಉಡುಗೊರೆಗಳು ತಲುಪುತ್ತಿರುವುದು ಒಂದೆಡೆಯಾದರೆ, ಕನ್ನಡಿಗರೊಬ್ಬರು ರಚಿಸಿದ ಪ್ರಸಿದ್ಧ ‘ರಾಮಸ್ತುತಿ’ಯೊಂದು ಅಯೋಧ್ಯೆ ತಲುಪಿ ರಾಮನಂಗಳದಲ್ಲೂ ರಿಂಗಣಿಸುತ್ತಿದೆ.

‘ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ...ನಿನ್ನಷ್ಟು ನೆಮ್ಮದಿಯು ಎಲ್ಲಿಹುದೋ ರಾಮ’ ಎಂಬ ಕನ್ನಡ ಗೀತೆಯೇ ಅಯೋಧ್ಯೆ ತಲುಪಿದ ಹಾಡು. ಯು ಟ್ಯೂಬ್‌ನಲ್ಲಿ 4-6 ಕೋಟಿ ಜನ ವೀಕ್ಷಿಸಿ ಆನಂದಪಟ್ಟಿದ್ದಾರೆ. ಬಹಳಷ್ಟು ಮನೆಗಳಲ್ಲಿ ಪ್ರತಿದಿನ ಸುಪ್ರಭಾತ ಈ ಹಾಡಿನ ಮೂಲಕವೇ ಆಗುತ್ತಿದೆ. ನಾಡಿನ ಹಲವು ಮಠ,ಮಂದಿರ ಗಳಲ್ಲಿಯೂ ಈ ಹಾಡು ಮೊಳಗುತ್ತಿದೆ.

ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಈ ಹಾಡನ್ನು ಮೆಚ್ಚಿಕೊಂಡಿದ್ದು, ಇಂಥದ್ದೊಂದು ಅರ್ಥಗರ್ಭಿತ ಹಾಡನ್ನು ನೀಡಿದ್ದಕ್ಕೆ ‘ಎಕ್ಸ್’ ಖಾತೆಯಲ್ಲಿ ಕನ್ನಡದಲ್ಲಿಯೇ ಟ್ವೀಟ್ ಮಾಡಿ ಅಭಿನಂದಿಸಿದೆ.

ಇಷ್ಟೊಂದು ವ್ಯಾಪಕವಾಗಿ ಜನಮನ ಗೆದ್ದಿರುವ ಹಾಡಿನ ರಚನಾಕಾರರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಮೂಲದ ಪ್ರಸ್ತುತ ಬೆಂಗಳೂರು ನಿವಾಸಿ, ಸಾಹಿತಿ ಗಜಾನನ ಶರ್ಮಾ ಅವರು.

‘ಈ ಹಾಡು ಕನ್ನಡವಲ್ಲದೇ ತಮಿಳು, ತೆಲುಗಿಗೂ ಅನುವಾದ-ಗೊಂಡಿದ್ದು ಅಲ್ಲಿಯೂ ಜನಪ್ರಿಯ-ಗೊಂಡಿದೆ. ನನ್ನ ಗೀತೆ ಇಷ್ಟೊಂದು ಜನಮೆಚ್ಚುಗೆ ಪಡೆದು, ರಾಮ ಮಂದಿರ ಉದ್ಘಾಟನಾ ಸಂದರ್ಭದಲ್ಲಿ ಅಲ್ಲಿಗೆ ಈ ಹಾಡು ತಲುಪುತ್ತದೆಂದು ಊಹೆ ಕೂಡ ಮಾಡಿರಲಿಲ್ಲ. ಇದು ವಿಸ್ಮಯ ಹಾಗೂ ಧನ್ಯತೆಯ ಕ್ಷಣ’ ಎಂದು ಗಜಾನನ ಶರ್ಮಾ ಸಂತಸ ವ್ಯಕ್ತಪಡಿಸಿದರು.

ವೃತ್ತಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಸೂಪರಿಂಟೆಂಡೆಂಟ್ ಎಂಜಿನಿಯರ್ ಆಗಿ ನಿವೃತ್ತರಾಗಿರುವ ಶರ್ಮಾ, ನಾಟಕ, ರಂಗಭೂಮಿ, ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರು. ಅವರ ಶರಾವತಿ ಸುತ್ತಮುತ್ತಲಿನ ಬದುಕಿನ ಕಥನ ‘ಪುನರ್ವಸು’ ಹಾಗೂ ಕೆಳದಿಯ ಕರಿಮೆಣಸಿನ ರಾಣಿ ‘ಚೆನ್ನಭೈರಾದೇವಿ’ ಕಾದಂಬರಿಗಳು, ಸರ್.ಎಂ. ವಿಶ್ವೇಶ್ವರಯ್ಯನವರ ವೃತ್ತಿಜೀವನದ ಆತ್ಮಕಥೆ ‘ನನ್ನ ವೃತ್ತಿಜೀವನದ ನೆನಪುಗಳು’ ಅನುವಾದ, ‘ಕಾಡು ಕಣಿವೆಯ ಹಾಡುಹಕ್ಕಿ ಗರ್ತಿಕೆರೆ ರಾಘಣ್ಣ’ ಇವರ ಪ್ರಮುಖ ಕೃತಿಗಳು.

ಹಾಡು ಹುಟ್ಟಿದ್ದು...: ‘ಈ ಹಾಡು ಹುಟ್ಟಿದ್ದು ಮೂಲತಃ ರಾಮನಿಗಾಗಿಯೇ. ಗಿರಿನಗರದ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ರಾಮಕಥೆಗಾಗಿ ಚಾತುರ್ಮಾಸದ ವೇಳೆ ಉತ್ತಮ ಗೀತ ರಚನೆಗೆ ಕೋರಿದ್ದರು. ಹೀಗೆ ಹುಟ್ಟಿಕೊಂಡ ಈ ಗೀತೆಯನ್ನು ಸ್ವಾಮೀಜಿಯಲ್ಲದೇ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕೂಡ ಹಾಡಿದ್ದರು. ಆ ನಂತರ ಅದಕ್ಕೆ ನನ್ನ ಪುತ್ರ ಸಾಕೇತ್ ಶರ್ಮಾ ಸಂಗೀತ ನೀಡಿದರು. ಗಾಯಕಿ ಸುಪ್ರಭಾ ಧ್ವನಿ ನೀಡಿ ಅದನ್ನು ಯು ಟ್ಯೂಬ್‌ಗೆ ಬಿಟ್ಟರು. ಅಲ್ಲಿಂದ ಈ ಗೀತೆಗೆ ಹಲವು ಗಾಯಕರು ಧ್ವನಿ ನೀಡಿದ್ದಾರೆ. ಅವೆಲ್ಲವೂ ಜನಪ್ರಿಯಗೊಂಡಿವೆ’ ಎಂದು ಗಜಾನನ ಶರ್ಮಾ ತಿಳಿಸಿದರು.

ಲಂಚ: ಬಿಎಂಟಿಸಿಯ 7 ಮಂದಿ ಅಮಾನತು

ಬೆಂಗಳೂರು: ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಸಂಸ್ಥೆಯ ಸಿಬ್ಬಂದಿಯಿಂದ ₹ 1.5 ಕೋಟಿಯಷ್ಟು ಲಂಚ ಪಡೆದ ಆರೋಪದ ಮೇಲೆ ಬಿಎಂಟಿಸಿ ಜಿಗಣಿ ಘಟಕದ (27ನೇ ಘಟಕ) ಏಳು ಅಧಿಕಾರಿಗಳು, ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಜಿಗಣಿ ಘಟಕದ ಸಿಬ್ಬಂದಿ ಮೇಲ್ವಿಚಾರಕಿ ಮಂಜುಳಾ ಆರ್, ಕಿರಿಯ ಸಹಾಯಕರಾದ ಪ್ರೀತಂ, ಮನೋಜ್ ಕುಮಾರ್ ಎಲ್.ಎಸ್, ಸುಮಾ ಎ, ಶಾಂತವ್ವ, ಸಹಾಯಕ ಲೆಕ್ಕಿಗ ಧನಂಜಯ ವಿ., ಸಹಾಯಕ ಕುಶಲಕರ್ಮಿ ದೇವರಾಜ್ ಜಿ. ಅಮಾನತುಗೊಂಡವರು.

ಆರೋಪಿಗಳು ಸಹೋದ್ಯೋಗಿ-ಗಳಿಂದ ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಹಣ ಜಮೆ ಮಾಡಿಸಿಕೊಂಡು ಡಿಜಿಟಲ್ ಹಣದ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ದೂರುಗಳು ಬಂದಿದ್ದವು. ಈ ಬಗ್ಗೆ ವಿಚಾರಣೆ ನಡೆಸಿದಾಗ ಸತ್ಯಾಂಶವನ್ನು ಮರೆಮಾಚಿದ್ದ ಆರೋಪಿಗಳು, ಶಿಸ್ತು ಕ್ರಮದಿಂದ ತಪ್ಪಿಸಿಕೊಂಡಿದ್ದರು.

ಪುನಃ ಈ ಕುರಿತು ಬಿಎಂಟಿಸಿಯ ಭದ್ರತಾ ಮತ್ತು ಜಾಗೃತ ದಳ ತನಿಖೆ ನಡೆಸಿತ್ತು. ಏಳು ಮಂದಿಯ ಬ್ಯಾಂಕ್ ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿಗಳು ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಲಂಚ ಪಡೆದಿರುವ ಸಾಕ್ಷ್ಯಗಳು ಲಭಿಸಿದ್ದವು.

ಏಳು ಆರೋಪಿಗಳ ಬ್ಯಾಂಕ್ ಖಾತೆಗಳಿಗೆ ಸುಮಾರು ₹ 1.5 ಕೋಟಿ ಹಣ ಜಮೆಯಾಗಿದೆ. ಈ ಮೊತ್ತವನ್ನು ಅವರು ಆನ್‌ಲೈನ್ ಹೂಡಿಕೆಯಲ್ಲಿ ತೊಡಗಿಸಿರುವುದು ಕಂಡುಬಂದಿದೆ ಎಂದು ಬಿಎಂಟಿಸಿ ಮೂಲಗಳು ತಿಳಿಸಿವೆ.

ಆರೋಪಿಗಳನ್ನು ‘ವಿಚಾರಣಾ ಇತ್ಯರ್ಥ ಪೂರ್ವ ಅಮಾನತು’ ಮಾಡಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಸೇನೆಯ ಉತ್ತರ ಕಮಾಂಡ್ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ

‘ಉತ್ತರದ ಗಡಿಯಲ್ಲಿ ಪರಿಸ್ಥಿತಿ ಅಸಹಜ’

ಶ್ರೀನಗರ (ಪಿಟಿಐ): ‘ಉತ್ತರದ ಗಡಿಯಲ್ಲಿ ಪರಿಸ್ಥಿತಿ ಸ್ಥಿರವಾಗಿದ್ದರೂ ಸಹಜವಾಗಿಲ್ಲ’ ಎಂದು ಲಡಾಖ್ ಪ್ರದೇಶದ ವಾಸ್ತವ ನಿಯಂತ್ರಣ ರೇಖೆಯಲ್ಲಿನ (ಎಲ್‌ಎಸಿ) ಪರಿಸ್ಥಿತಿ ಉಲ್ಲೇಖಿಸಿ ಸೇನೆಯ ಉತ್ತರ ಕಮಾಂಡ್ ಮುಖ್ಯಸ್ಥರು ಭಾನುವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಉತ್ತರ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ, ‘ಉತ್ತರದ ಗಡಿ ಪ್ರದೇಶವು ಸ್ಥಿರವಾಗಿದೆ. ಆದರೆ, ಇದು ಸಹಜವಾಗಿಲ್ಲ ಅಥವಾ ಇಲ್ಲಿ ಪರಿಸ್ಥಿತಿ ಸೂಕ್ಷ್ಮವಾಗಿದೆ ಎಂದು ನಾನು ಹೇಳಬಲ್ಲೆ’ ಎಂದು ತಿಳಿಸಿದರು.

2020ರ ಮೇ ತಿಂಗಳಿನಿಂದ ಭಾರತೀಯ ಸೇನೆ ಮತ್ತು ಚೀನಾದ ಪಿಎಲ್‌ಎ ನಡುವೆ ಸಂಘರ್ಷಕ್ಕೆ ಕಾರಣವಾದ ಪೂರ್ವ ಲಡಾಖ್‌ನಲ್ಲಿನ ಏಳು ಘರ್ಷಣಾ ಕೇಂದ್ರಗಳಲ್ಲಿ ಐದು ಕೇಂದ್ರಗಳ ಸಮಸ್ಯೆ ಪರಿಹರಿಸಲಾಗಿದೆ. ಉಳಿದ ಕೇಂದ್ರಗಳ ಸಂಘರ್ಷ ಬಗೆಹರಿಸಲು ಮಾತುಕತೆ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಪಾಕಿಸ್ತಾನ ಕುರಿತು ಉಲ್ಲೇಖಿಸಿದ ಅವರು, ‘ನೆರೆಯ ದೇಶವು ಪೂಂಛ್–ರಜೌರಿ ಪ್ರದೇಶದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳನ್ನು ಸಹಿಸದೆ ಭಯೋತ್ಪಾದಕ ದಾಳಿಗಳನ್ನು ಪ್ರಾಯೋಜಿಸುತ್ತಿದೆ’ ಎಂದು ಹೇಳಿದರು.

‘ಪೂಂಛ್– ರಜೌರಿ ಪ್ರದೇಶದಲ್ಲಿ ಜನಜೀವನದಲ್ಲಿ ಸಮೃದ್ಧಿ ಮತ್ತು ಸುಧಾರಣೆ ಕಂಡುಬಂದಿದೆ. ಹೂಡಿಕೆಗಳು ಆಗುತ್ತಿವೆ. ಜನರಿಗೆ ಉದ್ಯೋಗಗಳು ಸಿಗುತ್ತಿವೆ. ನಮ್ಮ ನೆರೆಯ ದೇಶಕ್ಕೆ ಶಾಂತಿ ಮತ್ತು ಸಮೃದ್ಧಿಯ ವಾತಾವರಣ ಇಷ್ಟವಾಗುತ್ತಿಲ್ಲ. ಅದಕ್ಕಾಗಿಯೇ ಅವರು ಆ ಪ್ರದೇಶದಲ್ಲಿ ಭಯೋತ್ಪಾದನೆ ಉತ್ತೇಜಿಸುತ್ತಿದ್ದಾರೆ. ಆದರೆ, ನಾವು ಪ್ರತಿ ಕಾರ್ಯಾಚರಣೆ ಪ್ರಾರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಉಗ್ರಚಟುವಟಿಕೆಗಳನ್ನು ನಮ್ಮ ಸೈನಿಕರು ನಿಯಂತ್ರಿಸುತ್ತಾರೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ನಾವು ಕೆಲವು ಪುನರ್‌ನಿರ್ಮಾಣ ನಡೆಸುತ್ತಿರುವಾಗ ಪೊಲೀಸ್ ಠಾಣೆಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಇದು ಪರಿಸ್ಥಿತಿ ನಿಯಂತ್ರಿಸಲು ನಮಗೆ ನೆರವಾಗುತ್ತದೆ. ಈ ಪ್ರದೇಶದಲ್ಲಿ ಪೊಲೀಸ್, ಮಿಲಿಟರಿ ಮತ್ತು ಸ್ಥಳೀಯ ಜನರ ನಡುವಿನ ಸಮನ್ವಯವನ್ನು ಸುಧಾರಿಸಬೇಕಾಗಿದೆ’ ಎಂದೂ ಅವರು ಹೇಳಿದರು.

‘ಭಯೋತ್ಪಾದಕರು ಗಡಿ ನಿಯಂತ್ರಣ ರೇಖೆ ದಾಟಲು ಸಾಧ್ಯವಾಗದ ಕಾರಣ 2023 ಅನ್ನು ‘ಶೂನ್ಯ-ಒಳನುಸುಳುವಿಕೆ ವರ್ಷ’ವೆಂದು ಘೋಷಿಸಲಾಗಿದೆ. ಆದರೆ, ಅನೇಕ ಭಯೋತ್ಪಾದಕರು ಗಟಿ ದಾಟಿ ಬರುತ್ತಿದ್ದಾರೆ. ನಾವು ಅವರ ವಿರುದ್ಧ ಕ್ರಮ ಕೈಗೊಂಡಿದ್ದೇವೆ. ಕಳೆದ ವರ್ಷ ಕೊಲ್ಲಲಾದ ಭಯೋತ್ಪಾದಕರಲ್ಲಿ 21 ಮಂದಿ ಸ್ಥಳೀಯರು. ಉಳಿದ 55 ಮಂದಿ ವಿದೇಶಿಗರು. 2022ರಲ್ಲಿ 121 ಭಯೋತ್ಪಾದಕರನ್ನು ಉಗ್ರ ಸಂಘಟನೆಗಳು ನೇಮಕಾತಿ ಮಾಡಿಕೊಂಡಿದ್ದವು. ಆದರೆ, 2023ರಲ್ಲಿ 19 ಭಯೋತ್ಪಾದಕರನ್ನು ನೇಮಿಸಿಕೊಂಡಿರುವ ವರದಿ ಸಿಕ್ಕಿದೆ’ ಎಂದು ದ್ವಿವೇದಿ ಸುದ್ದಿಗಾರರಿಗೆ ಹೇಳಿದರು.



ನಿವೃತ್ತ ಯೋಧರ ದಿನದ ಅಂಗವಾಗಿ ಕಾನ್ಪುರದ ವಾಯುನೆಲೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ನಿವೃತ್ತ ಯೋಧರೊಂದಿಗೆ ಕುಶಲೋಪರಿ ನಡೆಸಿದರು —ಪಿಟಿಐ ಚಿತ್ರ

ಎರಡು ಮಹಾಯುದ್ಧಗಳಲ್ಲಿ ಹೋರಾಡಿದ ನಮ್ಮ ಸೈನಿಕರ ಶೌರ್ಯವನ್ನು ಜಗತ್ತು ಗೌರವದಿಂದ ಸ್ಮರಿಸುತ್ತದೆ. ಭಾರತೀಯರು ನಮ್ಮ ಸೈನಿಕರನ್ನು ಮಾತ್ರವಲ್ಲ, ಬೇರೆ ದೇಶಗಳ ಸೈನಿಕರನ್ನು ಗೌರವಿಸುತ್ತೇವೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಸಂವಿಧಾನದ 370ನೇ ವಿಧಿಯಡಿ ಕಲ್ಪಿಸಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಬಹಳಷ್ಟು ಸಕಾರಾತ್ಮಕ ಬದಲಾವಣೆಗಳಾಗಿವೆ

ಉಪೇಂದ್ರ ದ್ವಿವೇದಿ

ಸೇನೆಯ ಉತ್ತರ ಕಮಾಂಡ್ ಮುಖ್ಯಸ್ಥ

‘ಭಾರತೀಯರೆಲ್ಲರ ಹೃದಯದಲ್ಲಿ ಯೋಧರಿಗೆ ಸ್ಥಾನ’

ಕಾನ್ಪುರ/ಲಖನೌ (ಉತ್ತರಪ್ರದೇಶ) (ಪಿಟಿಐ): ಸಶಸ್ತ್ರ ಪಡೆಗಳ ಯೋಧರು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದರು.

ಕಾನ್ಪುರದ ವಾಯುನೆಲೆಯಲ್ಲಿ ನಡೆದ ನಿವೃತ್ತ ಯೋಧರ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನರೇಂದ್ರ ಮೋದಿ ಸರ್ಕಾರವು, ಯೋಧರಿಗೆ ‘ಒಂದು ಶ್ರೇಣಿ, ಒಂದು ಪಿಂಚಣಿ’ ಜಾರಿಯಿಂದಿಡಿದು, ಯೋಧರ ಯೋಗಕ್ಷೇಮ ಖಾತ್ರಿಪಡಿಸುವುದು, ಅವರಿಗೆ ಆರೋಗ್ಯ ರಕ್ಷಣೆ ಮತ್ತು ಪುನರ್ ಉದ್ಯೋಗ ಒದಗಿಸುವುದು ಸೇರಿದಂತೆ ಯಾವುದೇ ಅವಕಾಶವನ್ನು ಕೈಚೆಲ್ಲಿಲ್ಲ ಎಂದು ಹೇಳಿದರು.

ಸೈನಿಕರು ಮತ್ತು ಅವರ ಅವಲಂಬಿತರನ್ನು ತಮ್ಮ ಸ್ವಂತ ಕುಟುಂಬದ ಸದಸ್ಯರಂತೆ ನೋಡುವುದು ಮತ್ತು ಯಾವಾಗಲೂ ಅವರ ಬೆಂಬಲಕ್ಕೆ ನಿಲ್ಲುವುದು ಜನರ ಸಾಮೂಹಿಕ ಜವಾಬ್ದಾರಿಯಾಗಿದೆ ಎಂದು ಸಿಂಗ್ ಹೇಳಿದರು.

ಭಾರತೀಯ ಸೈನಿಕರು ಕುಟುಂಬ, ಜಾತಿ ಮತ್ತು ಧರ್ಮವನ್ನು ಮೀರಿ ರಾಷ್ಟ್ರದ ಸೇವೆ ಮಾಡುತ್ತಿದೆ. ಅವರ ಕೈಯಲ್ಲಿ ದೇಶವು ಸುರಕ್ಷಿತವಾಗಿದೆ. ಸೈನಿಕರ ಅರ್ಪಣೆ ಮತ್ತು ವೃತ್ತಿಪರತೆಯನ್ನು ಇಡೀ ದೇಶವಲ್ಲ, ಇಡೀ ಪ್ರಪಂಚವು ಗೌರವಿಸುತ್ತದೆ ಮತ್ತು ಗುರುತಿಸುತ್ತದೆ ಎಂದು ಹೇಳಿದರು.

‘ಐಎಎಫ್‌ನ 60 ಸಾವಿರ ಉಪಕರಣ ಸ್ವದೇಶೀಕರಣ’

ನಾಗ್ಪುರ (ಪಿಟಿಐ): ‘ಕಳೆದ ಎರಡು ಮೂರು ವರ್ಷಗಳಲ್ಲಿ ಭಾರತೀಯ ವಾಯುಪಡೆಯು 60ಸಾವಿರಕ್ಕೂ ಹೆಚ್ಚು ಉಪಕರಣಗಳನ್ನು ಸ್ವದೇಶಿಗೊಳಿಸಿದೆ’ ಎಂದು ವಾಯುಪಡೆ ಮುಖ್ಯಸ್ಥ ವಿ.ಆರ್. ಚೌಧರಿ ಹೇಳಿದ್ದಾರೆ.

ನಾಗ್ಪುರದ ಭೋನ್ಸಾಲಾ ಸೈನಿಕ ಶಾಲೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದುರಸ್ತಿ ಮತ್ತು ನಿರ್ವಹಣೆ ಚಟುವಟಿಕೆಗಳಿಗಾಗಿ ವಾಯುಪಡೆಯು ವಿದೇಶಿ ಮೂಲ ಉಪಕರಣ ತಯಾರಕರನ್ನು ಅವಲಂಬಿಸುವಂತಿಲ್ಲ. ಈಗ ಅದನ್ನು ದೇಶೀಯವಾಗಿಯೇ ಮಾಡಲಾಗುತ್ತಿದೆ ಎಂದರು.

ಚೆನ್ನೈ ಕರಾವಳಿಯ ಬಂಗಾಳ ಕೊಲ್ಲಿಯಲ್ಲಿ ಭಾರತೀಯ ವಾಯುಪಡೆಯ ಸಾರಿಗೆ ವಿಮಾನದ ಅವಶೇಷಗಳನ್ನು ಪತ್ತೆಹಚ್ಚಲು ಹಲವು ವರ್ಷಗಳನ್ನು ತೆಗೆದುಕೊಂಡ ಬಗ್ಗೆ ಪ್ರಶ್ನಿಸಿದಾಗ, ‘ದುರದೃಷ್ಟವಶಾತ್, ಇದು ತುಂಬಾ ಸಮಯ ತೆಗೆದುಕೊಂಡಿತು. ನಾವು ಈಗಲಾದರೂ ಆಳ ಸಮುದ್ರದಲ್ಲಿ ಇಂತಹ ವಸ್ತುಗಳನ್ನು ಪತ್ತೆಹಚ್ಚುವಂತಹ ತಂತ್ರಜ್ಞಾನವನ್ನು ಕಂಡುಕೊಂಡಿದ್ದೇವೆ’ ಎಂದು ಚೌಧರಿ ಹೇಳಿದರು.



ಜೆ.ಪಿ.ನಡ್ಡಾ ಅವರು ನವದೆಹಲಿಯ ಗುರು ರವಿದಾಸ್ ಮಂದಿರದಲ್ಲಿ ಸ್ವಚ್ಛತಾ ಅಭಿಯಾನ ಕೈಗೊಂಡರು —ಪಿಟಿಐ ಚಿತ್ರ

ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆ ದೇವಸ್ಥಾನಗಳಲ್ಲಿ ಸ್ವಚ್ಛತೆಗೆ ಚಾಲನೆ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಬಿಜೆಪಿಯು ದೇಶದಾದ್ಯಂತ ದೇವಾಲಯಗಳು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಮ್ಮಿಕೊಂಡಿರುವ ಸ್ವಚ್ಛತಾ ಅಭಿಯಾನಕ್ಕೆ ಭಾನುವಾರ ಚಾಲನೆ ದೊರೆಯಿತು.

ಪಕ್ಷದ ನಾಯಕರು, ಕೇಂದ್ರ ಸಚಿವರು ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ದೇಶದ ವಿವಿಧ ಭಾಗಗಳಲ್ಲಿ ಅಭಿಯಾನಕ್ಕೆ ಕೈಜೋಡಿಸಿದರು. ರಾಮಮಂದಿರ ಉದ್ಘಾಟನೆಯ ದಿನ ಸಮೀಪಿಸುತ್ತಿರುವಾಗ ದೇಶದಾದ್ಯಂತ ಸಂಭ್ರಮದ ವಾತಾವರಣ ಮೂಡಿಸಲು ಬಿಜೆಪಿ ಈ ಅಭಿಯಾನ ಕೈಗೊಂಡಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕಾರ್ಯಕರ್ತರೊಂದಿಗೆ ನವದೆಹಲಿಯ ಕರೋಲ್ ಬಾಗ್‌ನಲ್ಲಿರುವ ಗುರು ರವಿದಾಸ್ ಮಂದಿರದ ಆವರಣ ಸ್ವಚ್ಛಗೊಳಿಸಿದರು.

‘ಮಕರ ಸಂಕ್ರಾಂತಿಯಿಂದ ಜನವರಿ 22ರವರೆಗೆ (ಪ್ರಾಣ ಪ್ರತಿಷ್ಠಾಪನೆಯ ದಿನ) ದೇವಸ್ಥಾನಗಳು ಮತ್ತು ಯಾತ್ರಾ ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಸೂಚಿಸಿದ್ದರು. ಬಿಜೆಪಿ ಕಾರ್ಯಕರ್ತರು ದೇಶದಾದ್ಯಂತ ಈ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಿದ್ದಾರೆ’ ಎಂದು ನಡ್ಡಾ ತಿಳಿಸಿದರು.

ಬಿಜೆಪಿ ಕಾರ್ಯಕರ್ತರು ರಾಮಮಂದಿರದ ಉದ್ಘಾಟನೆಯ ದಿನದವರೆಗೂ ವಿವಿಧ ದೇವಾಲಯಗಳಲ್ಲಿ ಭಜನೆ ಮತ್ತು ಕೀರ್ತನೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಉತ್ತರ ಪ್ರದೇಶ ಮತ್ತು ಗುಜರಾತ್ ಮುಖ್ಯಮಂತ್ರಿಗಳಾದ ಯೋಗಿ ಆದಿತ್ಯನಾಥ್ ಹಾಗೂ ಭೂಪೇಂದ್ರ ಪಟೇಲ್ ಅವರು ಕ್ರಮವಾಗಿ ಅಯೋಧ್ಯೆ ಹಾಗೂ ಗಾಂಧಿನಗರದಲ್ಲಿ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು. ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಒಡಿಶಾದ ಬಾಲೇಶ್ವರದ ದೇವಸ್ಥಾನದಲ್ಲಿ ಅಭಿಯಾನ ಕೈಗೊಂಡರು.

‘ಜನರಿಗೆ ಆಗಿದ್ದ ಅನ್ಯಾಯ ಸರಿಪಡಿಸಲಿ’

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರು ಆರಂಭಿಸಿರುವ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯನ್ನು ಬಿಜೆಪಿಯು ‘ಭಾರತ್ ತೋಡೊ ಯಾತ್ರೆ’ ಎಂದು ಜರಿದಿದೆ. ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಆಡಳಿತ ಇದ್ದಾಗ ಜನರಿಗೆ ಆಗಿದ್ದ ಅನ್ಯಾಯಗಳನ್ನು ಸರಿಪಡಿಸುವ ಕೆಲಸವನ್ನು ಆ ಪಕ್ಷವು ಮೊದಲು ಮಾಡಬೇಕು ಎಂದು ಬಿಜೆಪಿ ಹೇಳಿದೆ.

ಕಾಂಗ್ರೆಸ್ಸಿನಲ್ಲಿ ನ್ಯಾಯ ಸಿಗದ ಕಾರಣಕ್ಕೆ ಆ ಪಕ್ಷವನ್ನು ತೊರೆದ ನಾಯಕರ ಪಟ್ಟಿ ದೊಡ್ಡದಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ವ್ಯಂಗ್ಯವಾಡಿದರು.

‘ಇದೊಂದು ಹುಸಿ ಯಾತ್ರೆ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಜನರಿಗೆ ನ್ಯಾಯ ಕೊಡಿಸುವ ಬಗ್ಗೆ ಮಾತನಾಡುತ್ತಾರೆ. ಆದರೆ, ವಾಸ್ತವದಲ್ಲಿ ಕಾಂಗ್ರೆಸ್ಸಿನ ನಾಯಕರೇ ನ್ಯಾಯ ವಂಚಿತರು’ ಎಂದು ಠಾಕೂರ್ ಹೇಳಿದರು.

ರಾಹುಲ್ ಗಾಂಧಿ ಅವರು ತುಕ್ಡೆ–ತುಕ್ಡೆ ಗ್ಯಾಂಗ್‌ಗೆ ಬೆಂಬಲ ನೀಡಿದ್ದರು. ಹೀಗಾಗಿ ಅವರು ಈಗ ಭಾರತ್ ಜೋಡೊ ನ್ಯಾಯ ಯಾತ್ರೆಯ ನಾಟಕ ಆಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಎಕ್ಸ್ ವೇದಿಕೆಯಲ್ಲಿ ಬರೆದಿದ್ದಾರೆ.

ಶಿವಸೇನಾ ಸೇರಿದ ಮಿಲಿಂದ್

ಒಂದನೇ ಪುಟದಿಂದ...

‘ನನ್ನ ರಾಜಕೀಯ ಜೀವನದ ಮಹತ್ವದ ಪ್ರಯಾಣವು ಇಂದು ನಿರ್ಣಾಯಕ ಹಂತ ತಲುಪಿದೆ. ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದೆ. ಆ ಮೂಲಕ ಪಕ್ಷದ ಜೊತೆಗೆ ನನ್ನ ಕುಟುಂಬಕ್ಕಿದ್ದ 55 ವರ್ಷಗಳ ಸಂಬಂಧ ಅಂತ್ಯವಾಗಿದೆ. ಇಷ್ಟು ವರ್ಷ ಬೆಂಬಲಿಸಿದ ಪಕ್ಷದ ನಾಯಕರು, ಸಹೋದ್ಯೋಗಿಗಳು ಮತ್ತು ಕಾರ್ಯಕರ್ತರಿಗೆ ಆಭಾರಿಯಾಗಿದ್ದೇನೆ’ ಎಂದು ಅವರು ‘ಎಕ್ಸ್’ನಲ್ಲಿ ಬರೆದಿದ್ದರು.

ಮಿಲಿಂದ್ ಅವರು ದಕ್ಷಿಣ ಮುಂಬೈ ಲೋಕಸಭಾ ಕ್ಷೇತ್ರವನ್ನು ಈ ಹಿಂದೆ ಪ್ರತಿನಿಧಿಸಿದ್ದರು. ಕಾಂಗ್ರೆಸ್, ಶಿವಸೇನಾ (ಯುಬಿಟಿ), ಎನ್‌ಸಿಪಿ ಪಕ್ಷಗಳ ಮಹಾ ವಿಕಾಸ ಆಘಾಡಿ ಮೈತ್ರಿಕೂಟವು ಲೋಕಸಭೆ ಚುನಾವಣೆಯ ಸೀಟುಹಂಚಿಕೆಗೆ ಸಂಬಂಧಿಸಿದ ಮಾತುಕತೆ ಸಂದರ್ಭದಲ್ಲಿ, ದಕ್ಷಿಣ ಮುಂಬೈ ಕ್ಷೇತ್ರವನ್ನು ತನಗೇ ಬಿಟ್ಟುಕೊಡಬೇಕು ಎಂದು ಶಿವಸೇನಾ (ಯುಬಿಟಿ) ಪಟ್ಟುಹಿಡಿಯಿತು. ಈ ವಿಚಾರವಾಗಿ ಅಸಮಾಧಾನಗೊಂಡ ಮಿಲಿಂದ್ ಅವರು ಪಕ್ಷ ತೊರೆಯುವ ನಿರ್ಧಾರ ತೆಗೆದುಕೊಂಡರು.

2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಮಿಲಿಂದ್ ಅವರು ಶಿವಸೇನಾ (ಯುಬಿಟಿ) ನಾಯಕ ಅರವಿಂದ್ ಸಾವಂತ್ ಅವರ ವಿರುದ್ಧ ಸೋತಿದ್ದರು.



ಮಿಲಿಂದ್ ದೇವರಾ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಸಮ್ಮುಖದಲ್ಲಿ ಶಿವಸೇನಾ ಪಕ್ಷವನ್ನು ಭಾನುವಾರ ಸೇರಿದರು —ಪಿಟಿಐ ಚಿತ್ರ

‘ಉದ್ಯಮಿಗಳಿಗೆ ಕಾಂಗ್ರೆಸ್‌ನಿಂದ ‘ದೇಶದ್ರೋಹಿ’ ಪಟ್ಟ’

‘ಡಾ. ಮನಮೋಹನ್ ಸಿಂಗ್ ಅವರು ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದಾಗ ಇದ್ದಂತಹ ಪಕ್ಷವಾಗಿ ಕಾಂಗ್ರೆಸ್ ಈಗ ಉಳಿದಿಲ್ಲ. ಈಗಿನ ಕಾಂಗ್ರೆಸ್ ನಾಯಕರು ಕೈಗಾರಿಕೋದ್ಯಮಿಗಳನ್ನು ದೇಶದ್ರೋಹಿಗಳು ಎಂದು ಜರಿಯುತ್ತಿದ್ದಾರೆ’ ಎಂದು ಮಿಲಿಂದ್ ದೇವರಾ ಅವರು ಶಿವಸೇನಾ ಪಕ್ಷಕ್ಕೆ ಸೇರ್ಪಡೆಯಾದ ಬಳಿಕ ಹೇಳಿದರು.

ದೇವರಾ ಅವರು ಈ ಮಾತು ಹೇಳುವಾಗ ಕಾಂಗ್ರೆಸ್ಸಿನ ಯಾವುದೇ ನಾಯಕರ ಹೆಸರು ಉಲ್ಲೇಖಿಸಲಿಲ್ಲ. ಆದರೆ, ಅದಾನಿ ಸಮೂಹದ ವಿರುದ್ಧ ನಿರಂತರವಾಗಿ ಟೀಕಾಪ್ರಹಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಉದ್ದೇಶಿಸಿ ಅವರು ಈ ಮಾತು ಆಡಿದ್ದಾರೆ ಎನ್ನಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೇಶದ ಅಭಿವೃದ್ಧಿ ಕುರಿತು ದೂರದೃಷ್ಟಿ ಹೊಂದಿರುವ ನಾಯಕರು. ಶಿಂದೆ ಅವರು ‘ಎಲ್ಲರನ್ನೂ ತಲುಪಬಲ್ಲ’ ಮುಖ್ಯಮಂತ್ರಿ ಎಂದು ದೇವರಾ ಬಣ್ಣಿಸಿದರು.

‘ದೇವರಾ ಕುಟುಂಬವು ಕಾಂಗ್ರೆಸ್ ಜೊತೆ 55 ವರ್ಷಗಳಿಂದ ನಂಟು ಹೊಂದಿದೆ. ಹೀಗಾಗಿ ಪಕ್ಷವನ್ನು ತೊರೆಯುವ ನಿರ್ಧಾರ ತೆಗೆದುಕೊಳ್ಳುವುದು ನನಗೆ ಅಷ್ಟು ಸುಲಭವಿರಲಿಲ್ಲ’ ಎಂದರು.

‘ಶಿವಸೇನಾದ ಕನಸನ್ನು ನಾನು ಪ್ರತಿನಿಧಿಸುತ್ತೇನೆ ಎಂಬುದು ಏಕನಾಥ ಶಿಂದೆ ಮತ್ತು ಸಂಸದ ಶ್ರೀಕಾಂತ್ ಶಿಂದೆ ಅವರ ಅಭಿಪ್ರಾಯ. ನನ್ನ ಮೇಲೆ ವಿಶ್ವಾಸ ಇರಿಸಿರುವುದಕ್ಕಾಗಿ ಅವರಿಗೆ ಧನ್ಯವಾದ ಹೇಳುತ್ತೇನೆ’ ಎಂದರು.

‘ಗಮನ ಬೇರೆಡೆ ಸೆಳೆಯಲು ಮೋದಿ ತಂತ್ರ’

‘ಭಾರತ್ ಜೋಡೊ ನ್ಯಾಯ ಯಾತ್ರೆ’ ಆರಂಭವಾದ ದಿನವೇ ಮಿಲಿಂದ್ ದೇವರಾ ರಾಜೀನಾಮೆ ನೀಡಿದ್ದಾರೆ. ಜನರ ಗಮನವನ್ನು ಯಾತ್ರೆಯಿಂದ ಬೇರೆಡೆ ಸೆಳೆಯುವ ಸಲುವಾಗಿ ಮಿಲಿಂದ್ ಕೈಯಿಂದ ಭಾನುವಾರವೇ ರಾಜೀನಾಮೆ ಕೊಡಿಸಲಾಗಿದೆ. ಈ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ತೆಗೆದುಕೊಂಡಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ಎಲ್ಲಾ ಪತ್ರಿಕೆಗಳಲ್ಲೂ ‘ಮಿಲಿಂದ್ ದೇವರಾ ಅವರು ಕಾಂಗ್ರೆಸ್ ತೊರೆದರು’ ಎಂಬ ಸುದ್ದಿಯೇ ಪ್ರಮುಖವಾಗಿ ಕಾಣಿಸಿಕೊಳ್ಳಬೇಕು ಎಂಬುದು ಮೋದಿ ಅವರ ಉದ್ದೇಶ ಎಂದು ದೂರಿದ್ದಾರೆ. ಮಿಲಿಂದ್ ಅವರ ನಿರ್ಗಮನದಿಂದ ಪಕ್ಷಕ್ಕೆ ಯಾವುದೇ ನಷ್ಟವಿಲ್ಲ. ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ ಇರಿಸಿರುವ ಲಕ್ಷಾಂತರ ಮಿಲಿಂದರು ಪಕ್ಷದಲ್ಲಿ ಇದ್ದಾರೆ ಎಂದು ಅವರು ಹೇಳಿದ್ದಾರೆ.

ಸೇನೆ ವಾಪಸ್‌ಗೆ ಗಡುವು

ಒಂದನೇ ಪುಟದಿಂದ...

ಮುಯಿಜು ನೇತೃತ್ವದ ಮಾಲ್ದೀವ್ಸ್ ಸರ್ಕಾರದ ಮೂವರು ಸಚಿವರು ಪ್ರಧಾನಿ ನರೇಂದ್ರ ಮೋದಿ ಕುರಿತು ಆಕ್ಷೇಪಾರ್ಹವಾದ ಹೇಳಿಕೆಯನ್ನು ಇತ್ತೀಚೆಗಷ್ಟೇ ನೀಡಿದ್ದರು. ಇದು, ಉಭಯ ದೇಶಗಳ ನಡುವೆ ವಾಕ್ಸಮರಕ್ಕೂ ಕಾರಣವಾಗಿತ್ತು. ಈ ಬೆಳವಣಿಗೆಯ ಬಳಿಕ ಈಗ ಮಾಲ್ದೀವ್ಸ್ ಸರ್ಕಾರ, ದ್ವೀಪರಾಷ್ಟ್ರದಿಂದ ಸೇನೆ ವಾಪಸಾತಿಗೆ ಭಾರತಕ್ಕೆ ಗಡುವು ನಿಗದಿಪಡಿಸಿದೆ.

ಮೋದಿ ಕುರಿತು ಆಕ್ಷೇಪಾರ್ಹ ಹೇಳಿಕೆ ಪೋಸ್ಟ್ ಮಾಡಿದ್ದ ಮೂವರು ಸಚಿವರನ್ನು ಅಧ್ಯಕ್ಷ ಮುಯಿಜು ಅಮಾನತು ಮಾಡಿದ್ದಾರೆ. ಸಚಿವರ ಹೇಳಿಕೆಗಳನ್ನು ಖಂಡಿಸಿ ಭಾರತದ ಹಲವು ಪ್ರವಾಸಿಗರು, ಮಾಲ್ದೀವ್ಸ್‌ಗೆ ಬಹಿಷ್ಕಾರ ಹಾಕಿದ್ದರು.

ಈ ಮಧ್ಯೆ, ಇತ್ತೀಚೆಗೆ ಐದು ದಿನಗಳ ಚೀನಾ ಪ್ರವಾಸ ಕೈಗೊಂಡಿದ್ದ ಅಧ್ಯಕ್ಷ ಮುಯಿಜು ಅವರು, ಉಭಯ ದೇಶಗಳ ನಡುವೆ ಬಾಂಧವ್ಯ ಇನ್ನಷ್ಟು ಬಲಗೊಳ್ಳಬೇಕು ಎಂದು ಹೇಳಿದ್ದರು.

ಚೀನಾ ಭೇಟಿ ವೇಳೆ ಸುದ್ದಿಗೋಷ್ಠಿಯಲ್ಲಿ ಮುಯಿಜು ಅವರು, ‘ಮಾಲ್ದೀವ್ಸ್ ಗಾತ್ರದಲ್ಲಿ ಸಣ್ಣದೇ ಇರಬಹುದು. ಆದರೆ, ಸವಾರಿ ಮಾಡಲು ಯಾರಿಗೂ ಅವಕಾಶ ನೀಡುವುದಿಲ್ಲ’ ಎಂದು ಯಾವುದೇ ರಾಷ್ಟ್ರದ ಹೆಸರು ಉಲ್ಲೇಖಿಸದೇ ಹೇಳಿಕೆ ನೀಡಿದ್ದರು.

ಅಗತ್ಯ ಆಹಾರ ವಸ್ತುಗಳು, ಔಷಧಗಳು, ಗ್ರಾಹಕ ಬಳಕೆ ವಸ್ತುಗಳನ್ನು ಅನ್ಯ ದೇಶಗಳಿಂದ ಆಮದು ಮಾಡಿಕೊಳ್ಳುವ ಮೂಲಕ ಭಾರತದ ಮೇಲಿನ ಅವಲಂಬನೆಯನ್ನು ತಗ್ಗಿಸುವ ಯೋಜನೆಯೂ ಇದೆ ಎಂದು ಹೇಳಿದ್ದರು.

ನಾರಾಯಣ ರಾಣೆ ಕ್ಷಮೆಗೆ ವಿಪಕ್ಷಗಳ ಆಗ್ರಹ

ಶಂಕರಾಚಾರ್ಯರನ್ನು ಟೀಕಿಸಿದ್ದಕ್ಕೆ ಆಕ್ರೋಶ ● ಸಂಪುಟದಿಂದ ವಜಾಗೊಳಿಸಲು ಒತ್ತಾಯ

ಮುಂಬೈ (ಪಿಟಿಐ): ಶಂಕರಾಚಾರ್ಯರನ್ನು ಟೀಕಿಸಿ ಹೇಳಿಕೆ ನೀಡಿರುವ ಕೇಂದ್ರ ಸಚಿವ ನಾರಾಯಣ ರಾಣೆ ವಿರುದ್ಧ ಮಹಾರಾಷ್ಟ್ರದ ವಿರೋಧ ಪಕ್ಷಗಳು ವಾಗ್ದಾಳಿ ನಡೆಸಿದ್ದು, ಕ್ಷಮೆ ಯಾಚಿಸುವಂತೆ ಭಾನುವಾರ ಆಗ್ರಹಿಸಿವೆ.

‘ಅಯೋಧ್ಯೆಯ ರಾಮ ಮಂದಿರ ಉದ್ಘಾಟನೆ ವಿಚಾರದಲ್ಲಿ ಶಂಕರಾಚಾರ್ಯರು ಅಪಸ್ವರ ಎತ್ತಿರುವುದು ಸರಿಯಲ್ಲ. ಕೆಲವೊಂದು ವಿಚಾರಗಳನ್ನು ಮುಂದಿಟ್ಟುಕೊಂಡು ಟೀಕಿಸುವ ಬದಲು ರಾಮ ಮಂದಿರ ಉದ್ಘಾಟನೆ ಸಮಾರಂಭಕ್ಕೆ ಹರಸಬೇಕು’ ಎಂದು ರಾಣೆ ಶನಿವಾರ ಹೇಳಿದ್ದರು.

‘ರಾಮ ಮಂದಿರ ನಿರ್ಮಿಸಲು ಇದುವರೆಗೆ ಯಾರಿಗೂ ಸಾಧ್ಯವಾಗಿರಲಿಲ್ಲ. ಮೋದಿ ನೇತೃತ್ವದಲ್ಲಿ ಬಿಜೆಪಿಯು ಮಂದಿರ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿದೆ. ಶಂಕರಾಚಾರ್ಯರು ಈ ಕೆಲಸವನ್ನು ಟೀಕಿಸಬೇಕೇ ಅಥವಾ ಹರಸಬೇಕೇ? ಶಂಕರಾಚಾರ್ಯರು ಪ್ರಧಾನಿ ಮತ್ತು ಬಿಜೆಪಿಯ ಕೆಲಸವನ್ನು ರಾಜಕೀಯ ದೃಷ್ಟಿಯಿಂದ ನೋಡುತ್ತಿದ್ದಾರೆ ಎಂಬುದು ಇದರ ಅರ್ಥ. ರಾಮಮಂದಿರವನ್ನು ರಾಜಕೀಯದ ಆಧಾರದಲ್ಲಿ ನಿರ್ಮಿಸಿಲ್ಲ. ಧರ್ಮದ ಮೇಲೆ ನಿರ್ಮಿಸಲಾಗಿದೆ. ರಾಮ ನಮ್ಮ ದೇವರು’ ಎಂದು ರಾಣೆ ಹೇಳಿದ್ದರು.

‘ಹಿಂದೂಗಳಿಗೆ ಮಾಡಿದ ಅವಮಾನ’: ಶಂಕರಾಚಾರ್ಯರ ಕೊಡುಗೆಗಳನ್ನು ಪ್ರಶ್ನಿಸುವ ಮೂಲಕ ರಾಣೆ ಅವರು ಹಿಂದುತ್ವಕ್ಕೆ ಅವಮಾನ ಮಾಡಿದ್ದಾರೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಟೀಕಿಸಿದ್ದಾರೆ.

‘ರಾಣೆ ಹೇಳಿಕೆಗೆ ಸಂಬಂಧಿಸಿದಂತೆ ಬಿಜೆಪಿಯು ಜನವರಿ 22ರ ಒಳಗಾಗಿ (ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ದಿನ) ದೇಶದ ಜನರ ಕ್ಷಮೆ ಯಾಚಿಸಬೇಕು. ಪ್ರಧಾನಿ ಮೋದಿ ಅವರು ರಾಣೆ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು’ ಎಂದು ಭಾನುವಾರ ಆಗ್ರಹಿಸಿದರು.

ರಾಣೆ ಹೇಳಿಕೆ ಬಗ್ಗೆ ಬಿಜೆಪಿಯು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಎನ್‌ಸಿಪಿ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ರಾಣೆ ವಿರುದ್ಧ ಮುಂಬೈನ ತಮ್ಮ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.

‘ನಾಲ್ವರು ಶಂಕರಾಚಾರ್ಯರಲ್ಲಿ ಇಬ್ಬರು ರಾಮನ ಮೂರ್ತಿ ಪ್ರತಿಷ್ಠಾಪನೆ ಸಮಾರಂಭವನ್ನು ಸ್ವಾಗತಿಸಿದ್ದಾರೆ. ಆದರೆ ಜನವರಿ 22ರ ಕಾರ್ಯಕ್ರಮದಲ್ಲಿ ನಾಲ್ವರು ಶಂಕರಾಚಾರ್ಯರೂ ಪಾಲ್ಗೊಳ್ಳುವುದಿಲ್ಲ. ಅವರ ಅನುಕೂಲಕ್ಕೆ ತಕ್ಕಂತೆ ಮುಂದೊಂದು ದಿನ ರಾಮಮಂದಿರಕ್ಕೆ ಭೇಟಿ ನೀಡಲಿದ್ದಾರೆ’ ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಶುಕ್ರವಾರ ಹೇಳಿದ್ದರು.

- ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ದೆಹಲಿ ವಿಶ್ವವಿದ್ಯಾಲಯದ ಕುಲಪತಿ ಯೋಗೇಶ್ ಸಿಂಗ್ ಮತ್ತು ಲೋಕಸಭೆಯ ಮಾಜಿ ಸ್ಪೀಕರ್, ಕಾಂಗ್ರೆಸ್ ಮುಖಂಡರಾದ ಮೀರಾ ಕುಮಾರ್ ಅವರಿಗೆ ಆಹ್ವಾನ ನೀಡಿರುವುದಾಗಿ ವಿಎಚ್‌ಪಿ ಭಾನುವಾರ ಹೇಳಿದೆ.
- ರಾಮಚರಿತಮಾನಸ ಕೃತಿಯ ಪ್ರತಿಗಳನ್ನು ಬೇಡಿಕೆಗೆ ತಕ್ಕಂತೆ ಪೂರೈಸಲು ಆಗದ ಕಾರಣ, ಉತ್ತರ ಪ್ರದೇಶದ ಗೋರಖಪುರದ ಪುಸ್ತಕ ಪ್ರಕಾಶನ ಸಂಸ್ಥೆ ‘ಗೀತಾ ಪ್ರೆಸ್’ ತನ್ನ ವೆಬ್‌ಸೈಟ್‌ನಲ್ಲಿ ಉಚಿತ ಡೌನ್‌ಲೋಡ್‌ಗೆ ಅವಕಾಶ ಕಲ್ಪಿಸಿಕೊಡುವುದಾಗಿ ತಿಳಿಸಿದೆ.
- ಪ್ರಾಣ ಪ್ರತಿಷ್ಠಾಪನಾ ದಿನದಂದು ಭಗವಾನ್ ರಾಮನ ಹೆಸರನ್ನು 11 ಸಾವಿರ ಸಲ ಬರೆಯುವುದಾಗಿ ಅಮೆರಿಕದ ನ್ಯೂಯಾರ್ಕ್‌ನಲ್ಲಿ ನೆಲೆಸಿರುವ, ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ, ಅಯೋಧ್ಯೆ ಮೂಲದ ಸೋನಲ್ ಸಿಂಗ್ ಹೇಳಿದ್ದಾರೆ

ಪ್ರಮುಖ ಧಾರ್ಮಿಕ ಸ್ಥಳಗಳಿಂದ ಅಯೋಧ್ಯೆಗೆ ರೈಲು ಸಂಪರ್ಕ ಶೀಘ್ರ

ನವದೆಹಲಿ: ರಾಮ ಮಂದಿರಕ್ಕೆ ಭೇಟಿ ನೀಡುವ ಭಕ್ತರಿಗೆ ಅನುಕೂಲ ಕಲ್ಪಿಸಲು ದೇಶದ 25 ಪ್ರಮುಖ ಧಾರ್ಮಿಕ ಸ್ಥಳಗಳಿಂದ ಅಯೋಧ್ಯೆಗೆ ರೈಲು ಸಂಪರ್ಕ ಕಲ್ಪಿಸಲು ಭಾರತೀಯ ರೈಲ್ವೆ ಯೋಜನೆ ಹಾಕಿಕೊಂಡಿದೆ.

ಅಯೋಧ್ಯೆಯಿಂದ ಶೀಘ್ರದಲ್ಲೇ ಪುರಿ, ತಿರುಪತಿ, ಅಮೃತಸರ, ವೈಷ್ಣೋದೇವಿ, ಶಿರಡಿ, ದ್ವಾರಕ, ಉಜ್ಜಯಿನಿ, ತಿರುನೆಲ್ವೇಲಿ ಮತ್ತು ಚಿತ್ರಕೂಟ ಸೇರಿದಂತೆ ಧಾರ್ಮಿಕ ತಾಣಗಳಿಗೆ ರೈಲು ಸೇವೆ ಆರಂಭಿಸಲು ಅಗತ್ಯ ಪ್ರಕ್ರಿಯೆಯನ್ನು ರೈಲ್ವೆ ಇಲಾಖೆ ಆರಂಭಿಸಿದೆ.

‘ಹೊಸ ರೈಲು ಸಂಪರ್ಕಗಳನ್ನು ಹಂತ ಹಂತವಾಗಿ ಆರಂಭಿಸಲಾಗುವುದು. ಇವುಗಳಲ್ಲಿ ಹೆಚ್ಚಿನವು ಅಮೃತ್ ಭಾರತ್ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಆಗಿರಲಿವೆ’ ಎಂದು ರೈಲ್ವೆ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮರು ಅಭಿವೃದ್ಧಿ ಆಗಿರುವ ಅಯೋಧ್ಯಾ ಧಾಮ ರೈಲು ನಿಲ್ದಾಣವು ಪ್ರತಿದಿನ 50 ಸಾವಿರ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದೆ.

ಅಯೋಧ್ಯೆಯಿಂದ ಈಗಾಗಲೇ ದೆಹಲಿ, ಕಾನ್ಪುರ, ಲಖನೌ ಮತ್ತು ಗೋರಖ್‌ಪುರಕ್ಕೆ ನೇರ ಹಾಗೂ ಎಕ್ಸ್‌ಪ್ರೆಸ್ ರೈಲು ಸಂಪರ್ಕ ಇದೆ. ದೆಹಲಿಯ ಅನಂದ್ ವಿಹಾರ್‌ಗೆ ವಂದೇ ಭಾರತ್ ರೈಲು ಸೇವೆಯನ್ನು ಕಳೆದ ತಿಂಗಳು ಆರಂಭಿಸಲಾಗಿತ್ತು.

‘ನ್ಯಾಯ ಯಾತ್ರೆ’ಗೆ ಚಾಲನೆ

ಒಂದನೇ ಪುಟದಿಂದ...

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅನ್ಯಾಯವು ಮೋದಿ ನೇತೃತ್ವದ ಸರ್ಕಾರದ ಆಡಳಿತಾವಧಿಯಲ್ಲಿ ಏಕೆ ಹೆಚ್ಚಾಗುತ್ತಿದೆ, ಮೋದಿ ಅವರು ಗಲಭೆಗ್ರಸ್ತ ಮಣಿಪುರಕ್ಕೆ ಏಕೆ ಭೇಟಿ ನೀಡಿಲ್ಲ ಎಂದು ಇಬ್ಬರೂ ನಾಯಕರು ಪ್ರಶ್ನಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ದ್ವೇಷದ ರಾಜಕಾರಣಕ್ಕೆ ಮಣಿಪುರವು ಒಂದು ಸಂಕೇತವಾಗಿ ಪರಿವರ್ತನೆ ಕಂಡಿದೆ ಎಂದು ರಾಹುಲ್ ಆರೋಪಿಸಿದರು. ಮೋದಿ ಅವರನ್ನು ಗುರಿಯಾಗಿಸಿಕೊಂಡು ಮಾತನಾಡಿದ ಖರ್ಗೆ, ‘ಅವರು ಸಮುದ್ರದ ದಡದಲ್ಲಿ ಉಲ್ಲಾಸದಿಂದ ಇದ್ದಂತೆ ಕಾಣಿಸಿಕೊಳ್ಳುತ್ತಾರೆ, ಕುಳಿತು ರಾಮ ರಾಮ ಎನ್ನುತ್ತಿರುತ್ತಾರೆ. ಆದರೆ, ಮುಖದಲ್ಲಿ ರಾಮನಾಮ ಇರುತ್ತದೆ, ಬಗಲಿನಲ್ಲಿ ಚೂರಿ ಇರುತ್ತದೆ’ (ಮುಖ್ ಮೆ ರಾಮ್, ಬಗಲ್ ಮೆ ಚೂರಿ) ಎಂದು ಟೀಕಿಸಿದರು. ‘ಇಂತಹ ಕೆಲಸವನ್ನು ಜನರ ಜೊತೆ ಮಾಡಬಾರದು’ ಎಂದರು.

ಮಾತು ಮತ್ತು ಕ್ರಿಯೆಗಳ ನಡುವೆ ಅಂತರ ಇರುವವರ ಬಗ್ಗೆ ಎಚ್ಚರಿಕೆ ನೀಡಲು ‘ಮುಖ್ ಮೆ ರಾಮ್, ಬಗಲ್ ಮೆ ಚೂರಿ’ ನಾಣ್ಣುಡಿಯನ್ನು ಹಿಂದಿಯಲ್ಲಿ ಬಳಸಲಾಗುತ್ತದೆ.

‘ಎಲ್ಲರಿಗೂ ದೇವರಲ್ಲಿ ನಂಬಿಕೆ ಇದೆ, ದೇವರನ್ನು ಎಲ್ಲರೂ ನೆನಪಿಸಿಕೊಳ್ಳುತ್ತಾರೆ. ಈ ವಿಚಾರವಾಗಿ ಅನುಮಾನ ಬೇಡ. ಆದರೆ, ಈ ಕೆಲಸವನ್ನು ಮತ ಗಳಿಸುವ ಉದ್ದೇಶದಿಂದ ಮಾಡಬಾರದು. ಮತ ಗಳಿಸಲು ಯಾರೂ ವಂಚಿಸಬಾರದು’ ಎಂದು ಖರ್ಗೆ ಹೇಳಿದರು. ರಾಮ ಮಂದಿರ ಉದ್ಘಾಟನೆಗೂ ಮೊದಲು 11 ದಿನಗಳ ವ್ರತ ಆಚರಿಸಲಾಗುವುದು ಎಂದು ಮೋದಿ ಅವರು ಶುಕ್ರವಾರ ಹೇಳಿರುವುದನ್ನು ಗುರಿಯಾಗಿಸಿಕೊಂಡು ಖರ್ಗೆ ಈ ಮಾತು ಆಡಿದ್ದಾರೆ ಎನ್ನಲಾಗಿದೆ.

ರಾಹುಲ್ ಹಾಗೂ ಇತರ ಕೆಲವು ಮುಖಂಡರು ಯಾತ್ರೆ ಆರಂಭವಾಗುವ ಸ್ಥಳ ತಲುಪುವುದು ತುಸು ತಡವಾದ ಕಾರಣದಿಂದಾಗಿ, ಯಾತ್ರೆಯ ಆರಂಭ ಕೂಡ ವಿಳಂಬವಾಯಿತು.

ಕಳೆದ ವರ್ಷದ ಮೇ ತಿಂಗಳಲ್ಲಿ ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಶುರುವಾದ ನಂತರದಲ್ಲಿ ಮೋದಿ ಅವರು ಅಲ್ಲಿಗೆ ಭೇಟಿ ನೀಡಿಲ್ಲ ಎಂದು ಇಬ್ಬರೂ ನಾಯಕರು ಟೀಕಿಸಿದರು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಪಾಲಿಗೆ ಮಣಿಪುರವು ಭಾರತದ ಭಾಗವಾಗಿ ಕಾಣುತ್ತಿಲ್ಲ ಎಂಬುದು ಸ್ಪಷ್ಟ ಎಂದು ರಾಹುಲ್ ಅವರು ಆರೋಪಿಸಿದರು.



‘ಭಾರತ್ ಜೋಡೊ ನ್ಯಾಯ ಯಾತ್ರೆ’ಯ ಮೊದಲ ದಿನವಾದ ಭಾನುವಾರ ರಾಹುಲ್ ಗಾಂಧಿ ಅವರಿಗೆ ಮಣಿಪುರದ ಥೌಬಲ್‌ನಲ್ಲಿ ಬಾಲಕಿಯೊಬ್ಬಳು ಗುಲಾಬಿ ನೀಡಿ ಶುಭಕೋರಿದಳು —ಪಿಟಿಐ ಚಿತ್ರ

ಪ್ರತಿಪಾದನೆ ಏನು?

ಯಾತ್ರೆಯು ಪ್ರತಿಪಾದಿಸುವುದು ಏನು ಎಂಬುದನ್ನು ರಾಹುಲ್ ವಿವರಿಸಿದರು. ತಮ್ಮ ಮನದ ಮಾತುಗಳನ್ನು ಯಾತ್ರೆಯ ಸಂದರ್ಭದಲ್ಲಿ ಹೇಳಲು ಬಯಸುವುದಿಲ್ಲ ಎಂದರು. ಅದರ ಬದಲಿಗೆ, ಜನರ ಮನದ ಮಾತುಗಳನ್ನು ಆಲಿಸಲು ಮತ್ತು ಅವರ ಸಂಕಟಗಳನ್ನು ಅರ್ಥ ಮಾಡಿಕೊಳ್ಳಲು ಬಯಸುವುದಾಗಿ ಹೇಳಿದರು. ಹಿಂಸೆ, ದ್ವೇಷ ಮತ್ತು ಆರ್ಥಿಕ ಏಕಸ್ವಾಮ್ಯವು ಭಾರತವನ್ನು ಪ್ರತಿನಿಧಿಸುವುದಿಲ್ಲ ಎಂದರು. ಸೌಹಾರ್ದ, ಸಮಾನತೆ ಮತ್ತು ಭ್ರಾತೃತ್ವವು ಯಾತ್ರೆಗೆ ದಾರಿದೀಪಗಳಾಗಿ ಇರಲಿವೆ ಎಂದು ತಿಳಿಸಿದರು.

ಯುವಕರಿಗೆ ಉದ್ಯೋಗ ಕೊಡಿಸಲು, ಬಡವರು ಹಾಗೂ ಶ್ರೀಮಂತರ ನಡುವಿನ ಅಂತರವು ತಗ್ಗುವಂತೆ ಮಾಡಲು ಮತ್ತು ರೈತರಿಗೆ ಅವರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗುವಂತೆ ಮಾಡಲು, ಅಪರಾಧ ಕೃತ್ಯಗಳ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಒದಗಿಸಲು, ಸರ್ಕಾರವನ್ನು ಪ್ರಶ್ನಿಸಿದ್ದಕ್ಕಾಗಿ ಜೈಲುಪಾಲಾದವರಿಗೆ ನ್ಯಾಯ ಕೊಡಿಸಲು, ದಲಿತರು, ಆದಿವಾಸಿಗಳು ಮತ್ತು ದುರ್ಬಲ ವರ್ಗಗಳಿಗಾಗಿ ಈ ಯಾತ್ರೆ ಆಯೋಜಿಸಲಾಗಿದೆ ಎಂದು ಖರ್ಗೆ ಹೇಳಿದರು.

ಮೋದಿ ಟೀಕಾಕಾರ ಎನ್ನುವ ಕಾರಣಕ್ಕೆ ದುಂಬಾಲು: ಸಿದ್ಧಾಂತಕ್ಕೆ ಅಲ್ಲ- ಪ್ರಕಾಶ್ ರಾಜ್

‘ಕಣಕ್ಕಿಳಿಸಲು 3 ಪಕ್ಷಗಳು ನನ್ನ ಬೆನ್ನುಬಿದ್ದಿವೆ’



ಪ್ರಕಾಶ್ ರಾಜ್

ಕೋಯಿಕ್ಕೋಡ್ (ಪಿಟಿಐ): ‘ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ತಮಗೆ ಮೂರು ಪಕ್ಷಗಳು ಬೆನ್ನುಬಿದ್ದಿವೆ’ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ತಿಳಿಸಿದ್ದಾರೆ.

ಇಲ್ಲಿ ಶನಿವಾರ ಕೇರಳ ಸಾಹಿತ್ಯೋತ್ಸವದಲ್ಲಿ (ಕೆಎಲ್‌ಎಫ್) ‘ತಾರಾ ಶಕ್ತಿ ಮತ್ತು ರಾಜಕೀಯ ನಾಯಕ: ಸಾರ್ವಜನಿಕ ವ್ಯಕ್ತಿ ಮತ್ತು ಚುನಾವಣಾ ರಾಜಕೀಯ’ ವಿಷಯ ಕುರಿತ ಅಧಿವೇಶನದಲ್ಲಿ ಮಾತನಾಡಿದ ಅವರು ‘ಮೂರು ಪಕ್ಷಗಳು ನನ್ನ ಸಿದ್ಧಾಂತ ನೋಡಿ ಬೆನ್ನುಬಿದ್ದಿಲ್ಲ, ನಾನು ಮೋದಿ ಟೀಕಾಕಾರ ಎನ್ನುವ ಕಾರಣಕ್ಕೆ ಮಾತ್ರ ನನ್ನನ್ನು ಅಭ್ಯರ್ಥಿಯಾಗಿಸಲು ಬಯಸಿವೆ. ಆದರೆ, ನಾನು ಅವರ ಬಲೆಯಲ್ಲಿ ಬೀಳುವುದಿಲ್ಲ’ ಎಂದು ಹೇಳಿದ್ದಾರೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತ ನಟರಾದ ಪ್ರಕಾಶ್ ರಾಜ್, 2019ರ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

‘ಈಗ ಚುನಾವಣೆ ಬರುತ್ತಿದೆ. ಮೂರು ರಾಜಕೀಯ ಪಕ್ಷಗಳು ನನ್ನ ಬೆನ್ನುಬಿದ್ದಿವೆ. ನನ್ನ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದೇನೆ. ಅವರ್‍ಯಾರು ಜನರಿಗಾಗಿ, ನನ್ನ ಸಿದ್ಧಾಂತ ನೋಡಿ ನನ್ನನ್ನು ಹುಡುಕಿ ಬರುತ್ತಿಲ್ಲ. ನಾನೊಬ್ಬ ಮೋದಿಯವರ ಕಟು ಟೀಕಾಕಾರ ಎನ್ನುವ ಕಾರಣಕ್ಕೆ ಒಳ್ಳೆಯ ಅಭ್ಯರ್ಥಿ ಎನ್ನುವ ಮಾತನ್ನು ಅವರು ಹೇಳುತ್ತಾರೆ’ ಎಂದು ಪ್ರಕಾಶ್ ರಾಜ್ ಹೇಳಿದರು.

‘ರಾಜಕೀಯ ಪಕ್ಷಗಳು ಇಂದು ತಮ್ಮ ಧ್ವನಿಯನ್ನು ಕಳೆದುಕೊಂಡಿವೆ. ಅವು ಸತ್ಯದಿಂದ ವಿಮುಖವಾಗಿವೆ. ಇದೇ ಕಾರಣದಿಂದಾಗಿ ಹಲವು ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಗೆ ಹರಸಾಹಸಪಡುತ್ತಿವೆ’ ಎಂದು ಹೇಳಿದರು.

‘ಈ ದೇಶದಲ್ಲಿ ಅಭ್ಯರ್ಥಿಗಳೇ ಇಲ್ಲ. ಒಂದು ಕ್ಷೇತ್ರದ ಪ್ರತಿನಿಧಿಯನ್ನು ಹುಡುಕಲು ರಾಜಕೀಯ ಪಕ್ಷಗಳು ಹೆಣಗಾಡುತ್ತಿವೆ. ನಾವು ಎಷ್ಟೊಂದು ಬಡವರು ಅಲ್ಲವೇ’ ಎಂಬ ಪ್ರಶ್ನೆಯನ್ನು ಪ್ರಕಾಶ್ ರಾಜ್, ಸಭಾಂಗಣದಲ್ಲಿ ಕಿಕ್ಕಿರಿದಿದ್ದ ಸಭಿಕರ ಮುಂದಿಟ್ಟರು.

ಪ್ರಧಾನಿ ನರೇಂದ್ರ ಮೋದಿಯವರನ್ನೇಕೆ ದ್ವೇಷಿಸುತ್ತೀರಿ ಎಂದು ಸಭಿಕರೊಬ್ಬರು ಕೇಳಿದ ಪ್ರಶ್ನೆಗೆ ಪ್ರಕಾಶ್ ರಾಜ್, ‘ನಾನು ಮೋದಿಯನ್ನು ದ್ವೇಷಿಸುವುದಿಲ್ಲ. ಅವರು ನನ್ನ ಮಾವನಾ ಅಥವಾ ಅವರೊಂದಿಗೆ ನನಗೆ ಯಾವುದಾದರೂ ಆಸ್ತಿ ವ್ಯಾಜ್ಯ ಇದೆಯಾ? ನಾನು ತೆರಿಗೆದಾರ ಎಂದು ಅವರಿಗೆ ಹೇಳುತ್ತಿದ್ದೇನೆ. ನಾನು ನಿಮ್ಮ ವೇತನ ಪಾವತಿಸಿದ್ದೇನೆ ಮತ್ತು ನೀವು ನನ್ನನ್ನು ಸೇವಕನಂತೆ ನಡೆಸಿಕೊಳ್ಳುತ್ತಿದ್ದೀರಿ. ನೀವು ನಿಮ್ಮ ಕೆಲಸ ಮಾಡುತ್ತಿಲ್ಲ, ನಿಮ್ಮ ಕೆಲಸ ಸರಿಯಾಗಿ ಮಾಡಿ ಎಂದಷ್ಟೇ ಹೇಳುತ್ತಿದ್ದೀನಿ’ ಎಂದು ರಾಜ್ ಉತ್ತರಿಸಿದರು.

ಬಾಲೇಶ್ವರದಿಂದ ಕಣಕ್ಕೆ ಇಳಿಯುವುದಿಲ್ಲ: ಸಚಿವ ವೈಷ್ಣವ್

ಬಾಲೇಶ್ವರ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ತಾವು ಒಡಿಶಾದ ಬಾಲೇಶ್ವರ ಕ್ಷೇತ್ರದಿಂದ ಕಣಕ್ಕೆ ಇಳಿಯುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಸ್ಪಷ್ಟಪಡಿಸಿದ್ದಾರೆ.

ಈಗ ರಾಜ್ಯಸಭಾ ಸದಸ್ಯ ಆಗಿರುವ ವೈಷ್ಣವ್ ಅವರನ್ನು ಬಿಜೆಪಿಯು ಬಾಲೇಶ್ವರದಿಂದ ಕಣಕ್ಕೆ ಇಳಿಸಬಹುದು ಎಂಬ ಊಹಾಪೋಹಗಳು ಇದ್ದವು. ಅವರು ಐಎಎಸ್ ಅಧಿಕಾರಿ ಆಗಿದ್ದಾಗ ಬಾಲೇಶ್ವರದಲ್ಲಿ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಅವರು ಬಾಲೇಶ್ವರಕ್ಕೆ ಮತ್ತೆ ಮತ್ತೆ ಭೇಟಿ ನೀಡಿದ್ದು ಹಾಗೂ ಇಲ್ಲಿನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದು ಊಹಾಪೋಹಗಳು ಇನ್ನಷ್ಟು ಹೆಚ್ಚಲು ಕಾರಣವಾಗಿತ್ತು.

ಈಗ ಬಿಜೆಪಿಯ ಪ್ರತಾಪ್ ಸಾರಂಗಿ ಅವರು ಬಾಲೇಶ್ವರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ‘ಇಲ್ಲಿ ಪ್ರತಾಪ್ ಇದ್ದಾರೆ. ನಾನು ಇಲ್ಲಿಂದ ಸ್ಪರ್ಧಿಸುವುದಿಲ್ಲ’ ಎಂದು ವೈಷ್ಣವ್ ಹೇಳಿದರು. ಇಲ್ಲಿನ ರೈಲು ನಿಲ್ದಾಣದ ಫಲಕಗಳಲ್ಲಿ ಇರುವ ‘ಬಾಲಾಸೋರ್’ ಹೆಸರನ್ನು ‘ಬಾಲೇಶ್ವರ’ ಎಂದು ಬದಲಿಸುವಂತೆ ವೈಷ್ಣವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಫ್ತಿನ ಮೇಲೆ ಪರಿಣಾಮ ಬೀರಿದ ಜಾಗತಿಕ ಬಿಕ್ಕಟ್ಟು

ವಾಹನ ರಫ್ತು ಶೇ 21 ಇಳಿಕೆ

ನವದೆಹಲಿ (ಪಿಟಿಐ): ದೇಶದ ವಾಹನ ರಫ್ತು ವಹಿವಾಟು 2022ಕ್ಕೆ ಹೋಲಿಸಿದರೆ 2023ರಲ್ಲಿ ಶೇ 21ರಷ್ಟು ಕುಸಿದಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಹೇಳಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಮುಂದುವರಿದ ಹಣಕಾಸು ಮತ್ತು ರಾಜಕೀಯ ಬಿಕ್ಕಟ್ಟಿನಿಂದಾಗಿ ಈ ಹಿನ್ನಡೆ ಆಗಿದೆ ಎನ್ನಲಾಗಿದೆ.

2022ರಲ್ಲಿ 52.04 ಲಕ್ಷ ವಾಹನಗಳು ಒಟ್ಟು ರಫ್ತಾಗಿದ್ದರೆ, 2023ರಲ್ಲಿ 42.85 ಲಕ್ಷ ವಾಹನಗಳು ರಫ್ತಾಗಿವೆ. ಪ್ರಯಾಣಿಕ ವಾಹನಗಳ ವಿಭಾಗದಲ್ಲಿನ ರಫ್ತು ಮಾತ್ರ 6.44 ಲಕ್ಷದಿಂದ 6.77 ಲಕ್ಷಕ್ಕೆ ಶೇ 5ರಷ್ಟು ಏರಿಕೆಯಾಗಿದೆ ಎಂದು ಎಸ್‌ಐಎಎಂ ಅಂಕಿ ಅಂಶಗಳು ತಿಳಿಸಿವೆ.


ದ್ವಿಚಕ್ರ ವಾಹನಗಳ ರಫ್ತು 40.53 ಲಕ್ಷದಿಂದ 32.43 ಲಕ್ಷಕ್ಕೆ ಇಳಿದಿದ್ದು, ಶೇ 20ರಷ್ಟು ಕುಸಿತವಾಗಿದೆ. ವಾಣಿಜ್ಯ ವಾಹನಗಳ ರಫ್ತು 88,305 ರಿಂದ 68,473ಕ್ಕೆ ಇಳಿಕೆ ಆಗಿದೆ. ತ್ರಿಚಕ್ರ ವಾಹನಗಳ ರಫ್ತು ಶೇ 30ರಷ್ಟು ಕಡಿಮೆ ಆಗಿದೆ. 2022ರಲ್ಲಿ 4.17 ಲಕ್ಷ ವಾಹನಗಳು ರಫ್ತಾಗಿದ್ದರೆ, 2023ರಲ್ಲಿ 2.91 ಲಕ್ಷ ವಾಹನಗಳು ರಫ್ತಾಗಿವೆ.

2023ರ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್‌ನಲ್ಲಿ ಮಾರುತಿ ಸುಜುಕಿ ಇಂಡಿಯಾದ ವಾಹನದ ರಫ್ತಿನಲ್ಲಿ ಶೇ 6ರಷ್ಟು ಹೆಚ್ಚಳವಾಗಿದೆ. 2022ರಲ್ಲಿ 1.92 ಲಕ್ಷದಷ್ಟು ವಾಹನಗಳ ರಫ್ತು 2023ರಲ್ಲಿ 2.02 ಲಕ್ಷಕ್ಕೆ ಏರಿಕೆಯಾಗಿದೆ. ಹುಂಡೈ ಮೋಟರ್ ಇಂಡಿಯಾ 1.29 ಲಕ್ಷ, ಕಿಯಾ ಇಂಡಿಯಾ 47,792, ಫೋಕ್ಸ್‌ವ್ಯಾಗನ್ 33,872, ನಿಸ್ಸಾನ್ 31,678 ಮತ್ತು ಹೋಂಡಾ ಕಾರುಗಳು 20,262 ರಫ್ತಾಗಿವೆ ಎಂದು ಎಸ್‌ಐಎಎಂ ಅಂಕಿ ಅಂಶಗಳು ತಿಳಿಸಿವೆ.

ಹೊಸ ವಾಹನಗಳು ಮಾರುಕಟ್ಟೆಗೆ ಬಿಡುಗಡೆ ಆಗಿರುವುದು ಮತ್ತು ದಕ್ಷಿಣ ಆಫ್ರಿಕಾ ಹಾಗೂ ಗಲ್ಫ್ ರಾಷ್ಟ್ರದ ಮಾರುಕಟ್ಟೆಯಲ್ಲಿ ಪ್ರಯಾಣಿಕ ವಾಹನಗಳಿಗೆ ಬೇಡಿಕೆ ಹೆಚ್ಚಾಗಿರುವುದು 2023ರಲ್ಲಿ ವಾಹನದ ರಫ್ತಿನಲ್ಲಿ ಏರಿಕೆ ಆಗಲು ಕಾರಣ ಎಂದು ಎಸ್‌ಐಎಎಂನ ಮಹಾನಿರ್ದೇಶಕ ರಾಜೇಶ್ ಮೆನನ್ ಪಿಟಿಐಗೆ ತಿಳಿಸಿದ್ದಾರೆ.

2022ಕ್ಕೆ ಹೋಲಿಸಿದರೆ ಸುಗಮ ಪೂರೈಕೆಯು ಹೆಚ್ಚಳಕ್ಕೆ ಕಾರಣವಾಗಿದೆ ಎಂದೂ ಸಹ ಅವರು ತಿಳಿಸಿದ್ದಾರೆ.

ರಫ್ತು ಹೆಚ್ಚಿಸಲು ನಾಳೆ ಸಭೆ


ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ದೇಶದ ರಫ್ತು ಹೆಚ್ಚಿಸುವ ಮಾರ್ಗಗಳ ಕುರಿತು ಚರ್ಚಿಸಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅಧ್ಯಕ್ಷತೆಯಲ್ಲಿ ಮಂಗಳವಾರ ಸಭೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೂಪಾಯಿ ಪಾವತಿ ಸವಾಲುಗಳು, ಜಾಗತಿಕ ರಫ್ತು ಅವಕಾಶ, ಕೆಂಪು ಸಮುದ್ರದ ಬಿಕ್ಕಟ್ಟಿನಿಂದ ವ್ಯಾಪಾರಿಗಳು ಎದುರಿಸುತ್ತಿರುವ ಸವಾಲುಗಳು ಮತ್ತು ರಷ್ಯಾ–ಉಕ್ರೇನ್ ಯುದ್ಧ ಹಾಗೂ ಇಸ್ರೇಲ್–ಹಮಾಸ್ ಸಂಘರ್ಷದಿಂದ ಉಂಟಾಗಿರುವ ಜಾಗತಿಕ ಆರ್ಥಿಕ ಅನಿಶ್ಚಿತ ಸ್ಥಿತಿ ಕುರಿತು ಸಭೆಯಲ್ಲಿ ಚರ್ಚೆ ನಡೆಸುವ ನಿರೀಕ್ಷೆ ಇದೆ. ಸಭೆಯಲ್ಲಿ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶ ಮತ್ತು ಸಾರ್ವಜನಿಕ ಹಾಗೂ ಖಾಸಗಿ ವಲಯದ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ಸ್ ಸಾಧನ ರಫ್ತು 2 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): 2023ರ ಜನವರಿ–ಸೆಪ್ಟೆಂಬರ್‌ನಲ್ಲಿ ಭಾರತದಿಂದ ಅಮೆರಿಕಕ್ಕೆ ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತು ವಹಿವಾಟು ಈ ಅವಧಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿ, ₹54,695 ಕೋಟಿಗೆ ಏರಿದೆ ಎಂದು ಉದ್ಯಮ ಸಂಸ್ಥೆ 'ಇಂಡಿಯಾ ಸೆಲ್ಯುಲರ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಅಸೋಸಿಯೇಷನ್' (ಐಸಿಇಎ) ತಿಳಿಸಿದೆ.

ಭಾರತದಿಂದಾದ ಸಾರ್ವಕಾಲಿಕ ಹೆಚ್ಚಿನ ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತು ಇದಾಗಿದೆ. ಈ ವೇಳೆ ಚೀನಾದಿಂದ ಅಮೆರಿಕ ಮಾರುಕಟ್ಟೆಗೆ ಆಮದು ಮಾಡಿಕೊಳ್ಳುವ ಎಲೆಕ್ಟ್ರಾನಿಕ್ಸ್ ವಸ್ತುಗಳ ಪಾಲು ಇಳಿಕೆಯಾಗಿದೆ ಎಂದು ಐಸಿಇಎ ಅಧ್ಯಕ್ಷ ಪಂಕಜ್ ಮಹಿಂದ್ರೂ ಅವರು ಪಿಟಿಐಗೆ ತಿಳಿಸಿದ್ದಾರೆ.

ಇತ್ತೀಚಿನ ಅಂಕಿ–ಅಂಶಗಳು ಭಾರತದ ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತಿನಲ್ಲಿ ಗಮನಾರ್ಹವಾದ ಹೆಚ್ಚಳವನ್ನು ತೋರಿಸುತ್ತದೆ. 2022ರ ಜನವರಿ–ಸೆಪ್ಟೆಂಬರ್‌ನಲ್ಲಿ ₹21,546 ಕೋಟಿ ವಹಿವಾಟು ನಡೆದಿದ್ದರೆ, 2023ರಲ್ಲಿ ₹54,695 ಕೋಟಿಗೆ ಏರಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 253ರಷ್ಟು ಹೆಚ್ಚಳವಾಗಿದೆ ಎಂದು ಮಹಿಂದ್ರೂ ಹೇಳಿದ್ದಾರೆ.

ಷೇರುಗಳ ಬೆಲೆ ಏರಿಳಿತ ಕಾಣುವುದೇಕೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಷೇರುಪೇಟೆಯಲ್ಲಿ ಷೇರುಗಳ ಬೆಲೆ ಏರಿಳಿತ ಕಾಣುವುದು ಸರ್ವೇ ಸಾಮಾನ್ಯ ಸಂಗತಿ. ಕಂಪನಿಯೊಂದರ ಷೇರಿನ ಬೆಲೆ ಇಂದು ₹100 ಇದ್ದರೆ, ನಾಳೆ ₹120 ಆಗಿಬಿಡುತ್ತದೆ ಅಥವಾ ₹90ಕ್ಕೆ ಕುಸಿಯಲೂಬಹುದು. ಅಸಲಿಗೆ ಷೇರುಗಳ ಬೆಲೆ ಧುತ್ತೆಂದು ಮೇಲೆ ಹೋಗುವುದು, ದಿಢೀರ್ ಕುಸಿತ ಕಾಣುವುದೇಕೆ ಎಂಬ ಪ್ರಶ್ನೆ ನಿಮ್ಮನ್ನು ಕಾಡಿರಬಹುದು. ಬನ್ನಿ ಷೇರುಗಳ ಬೆಲೆಯ ಹಗ್ಗಜಗ್ಗಾಟಕ್ಕೆ ಅಸಲಿ ಕಾರಣ ಏನು ತಿಳಿಯೋಣ.

ಷೇರುಪೇಟೆ ಬೇಡಿಕೆ ಮತ್ತು ಪೂರೈಕೆ ಲೆಕ್ಕಾಚಾರ: ಟೊಮೆಟೊ ಬೆಲೆಯು ಕೆಲ ಸಂದರ್ಭಗಳಲ್ಲಿ ₹10 ಆಗಿರುತ್ತದೆ. ಆದರೆ, ಇನ್ನು ಕೆಲ ಸಂದರ್ಭಗಳಲ್ಲಿ ₹100ರ ಗಡಿ ದಾಟುತ್ತದೆ. ಇದಕ್ಕೆ ಕಾರಣ ಏನೆಂದರೆ ಬೇಡಿಕೆ ಮತ್ತು ಪೂರೈಕೆ ಲೆಕ್ಕಾಚಾರ. ಮಾರುಕಟ್ಟೆಯಲ್ಲಿ ಟೊಮೆಟೊಗೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ಕಡಿಮೆಯಾದರೆ ಬೆಲೆ ಜಾಸ್ತಿಯಾಗುತ್ತದೆ. ಹಾಗೆಯೇ ಟೊಮೆಟೊಗೆ ಬೇಡಿಕೆ ಕಡಿಮೆ ಇದ್ದು ಪೂರೈಕೆ ಹೆಚ್ಚಿದ್ದರೆ ಬೆಲೆ ಕಡಿಮೆಯಾಗುತ್ತದೆ.

ಇದೇ ಲೆಕ್ಕಾಚಾರದಲ್ಲಿ ಷೇರು ಮಾರುಕಟ್ಟೆಯೂ ಕೆಲಸ ಮಾಡುತ್ತದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರು ಗ್ರಾಹಕರಾದರೆ ವಿವಿಧ ಕಂಪನಿಗಳ ಷೇರುಗಳು ಉತ್ಪನ್ನಗಳ ಸ್ಥಾನ ಪಡೆಯುತ್ತವೆ. ನಿರ್ದಿಷ್ಟ ಷೇರು ಒಂದಕ್ಕೆ ಬೇಡಿಕೆ ಜಾಸ್ತಿ ಇದ್ದು, ಆ ಷೇರಿನ ಪೂರೈಕೆ ಕಡಿಮೆ ಇದ್ದರೆ ಅದರ ಬೆಲೆ ಹೆಚ್ಚಾಗುತ್ತದೆ. ಬೇಡಿಕೆ ಕಡಿಮೆ ಇದ್ದು ಪೂರೈಕೆ ಜಾಸ್ತಿ ಇದ್ದರೆ ಷೇರಿನ ಬೆಲೆ ತಗ್ಗುತ್ತದೆ. ಹಲವು ಅಂಶಗಳು ಷೇರಿನ ಬೇಡಿಕೆ ಮತ್ತು ಪೂರೈಕೆಯನ್ನು ನಿರ್ಧರಿಸುತ್ತವೆ.

1. ಕಂಪನಿಗೆ ಸಂಬಂಧಿಸಿದ ಅಂಶಗಳು: ನಿರ್ದಿಷ್ಟ ಕಂಪನಿ ಯಾವ ರೀತಿ ಬೆಳವಣಿಗೆ ಸಾಧಿಸಿದೆ ಎನ್ನುವುದು ಆ ಷೇರಿನ ಬೇಡಿಕೆಯನ್ನು ನಿರ್ಧರಿಸುತ್ತದೆ. ಉದಾಹರಣೆಗೆ ಕಂಪನಿಯೊಂದರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದ್ದು ಆ ಕಂಪನಿ ಉತ್ತಮ ಬೆಳವಣಿಗೆಯ ಜೊತೆ ಲಾಭಾಂಶ ಗಳಿಸುತ್ತಿದ್ದರೆ ಷೇರಿನ ಬೆಲೆ ಸಹಜವಾಗಿ ಹೆಚ್ಚಾಗುತ್ತದೆ. ಕಂಪನಿಯ ಬೆಳವಣಿಗೆಯಲ್ಲಿ ಹಿನ್ನಡೆಯಾದರೆ, ನಿರ್ವಹಣಾ ವೆಚ್ಚ ಹೆಚ್ಚಾಗಿ ಲಾಭಾಂಶ ತಗ್ಗಿದರೆ ಷೇರಿನ ಬೆಲೆ ಇಳಿಕೆ ಕಾಣುತ್ತದೆ. ಹೀಗೆ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳು ಷೇರಿನ ಬೆಲೆ ನಿರ್ಧರಿಸುತ್ತವೆ.

2. ವಲಯ ಕೇಂದ್ರಿತ ಅಂಶಗಳು: ಷೇರು ಮಾರುಕಟ್ಟೆಯಲ್ಲಿ ಬ್ಯಾಂಕಿಂಗ್, ರಿಯಲ್ ಎಸ್ಟೇಟ್, ಮಾಧ್ಯಮ, ಫಾರ್ಮಾ, ಮಾಹಿತಿ ತಂತ್ರಜ್ಞಾನ, ಲೋಹ ಹೀಗೆ ಹಲವು ವಲಯಗಳಿರುತ್ತವೆ. ಈ ವಲಯಗಳ ಮಟ್ಟದಲ್ಲಿ ದೊಡ್ಡ ಬೆಳವಣಿಗೆಗಳು ನಡೆದರೆ ಷೇರಿನ ಬೆಲೆ ಮೇಲೆ ಅದು ಪರಿಣಾಮ ಉಂಟು ಮಾಡುತ್ತದೆ. ಉದಾಹರಣೆಗೆ 2020ರ ಕೋವಿಡ್ ಸಮಯದಲ್ಲಿ ಫಾರ್ಮಾ ವಲಯದ ಷೇರುಗಳು ಭಾರಿ ಜಿಗಿತ ಕಂಡವು. ಭಾರತ್ ಸ್ಟೇಜ್ 6 ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದಾಗ ವಾಹನ ಉತ್ಪಾದನಾ ಕಂಪನಿಗಳ ಷೇರುಗಳು ಕುಸಿತ ದಾಖಲಿಸಿದವು. ಹೀಗೆ ದೊಡ್ಡಮಟ್ಟದ ವಲಯ ಕೇಂದ್ರಿತ ನಿರ್ಧಾರಗಳು ಷೇರಿನ ಬೆಲೆ ಮೇಲೆ ನಕಾರಾತ್ಮಕ ಮತ್ತು ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡುತ್ತವೆ.

3. ಮಾರುಕಟ್ಟೆ ಚಕ್ರಗಳು (ಮಾರ್ಕೆಟ್ ಸೈಕಲ್ಸ್): ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ತಮ ಪ್ರಗತಿಯಿದ್ದು ಸಕಾರಾತ್ಮಕತೆ ಕಂಡುಬಂದಾಗ ಷೇರುಪೇಟೆಯಲ್ಲಿ ಗೂಳಿ ಓಟ ಶುರುವಾಗಿ ಸೂಚ್ಯಂಕಗಳು ಏರುಗತಿಯಲ್ಲಿ ಇರುತ್ತವೆ. ಇಂತಹ ಸಂದರ್ಭಗಳಲ್ಲಿ ಉತ್ತಮ ಕಂಪನಿಗಳ ಷೇರಿನ ಬೆಲೆಯು ಗಣನೀಯ ಏರಿಕೆ ಕಾಣುತ್ತದೆ. ಆದರೆ, ಆರ್ಥಿಕ ಹಿನ್ನಡೆಯಾಗಿದ್ದು ಒಟ್ಟಾರೆ ಪ್ರಗತಿ ಕುಂಠಿತಗೊಂಡರೆ ಮಾರುಕಟ್ಟೆಯಲ್ಲಿ ನಕಾರಾತ್ಮಕತೆ ಹೆಚ್ಚಾಗಿ ಕರಡಿ ಹಿಡಿತದ ಕಾರಣಕ್ಕಾಗಿ ಸೂಚ್ಯಂಕಗಳು ಕುಸಿತ ಕಾಣುತ್ತವೆ. ಇಂತಹ ಸಂದರ್ಭಗಳಲ್ಲಿ ಉತ್ತಮ ಕಂಪನಿಗಳ ಷೇರುಗಳು ಸಹಿತ ಕುಸಿತಕ್ಕೆ ಒಳಗಾಗುತ್ತವೆ. ಮಾರುಕಟ್ಟೆ ಬಗ್ಗೆ ಒಟ್ಟಾರೆ ಯಾವ ಮನಃಸ್ಥಿತಿ ಇದೆ ಎನ್ನುವುದು ಸಹ ಷೇರಿನ ಬೆಲೆಯ ಏರಿಳಿತಕ್ಕೆ ಕಾರಣವಾಗುತ್ತದೆ.

4. ಕಂಪನಿಗೆ ಸಂಬಂಧಿಸಿದ ಸುದ್ದಿಗಳು: ನಿರ್ದಿಷ್ಟ ಕಂಪನಿಯ ಕಾರ್ಯವೈಖರಿ ಬಗ್ಗೆ ಸಕಾರಾತ್ಮಕ ಅಥವಾ ನಕಾರಾತ್ಮಕ ಸುದ್ದಿಗಳು ಬಿತ್ತರಗೊಂಡರೆ ಅದು ಷೇರಿನ ಬೆಲೆ ಏರಿಕೆ ಅಥವಾ ಇಳಿಕೆಗೆ ಕಾರಣವಾಗುತ್ತದೆ. ಉದಾಹರಣೆಗೆ ಯಾವುದೋ ಕಂಪನಿಗೆ ಸರ್ಕಾರ ತೆರಿಗೆ ನೋಟಿಸ್ ಕೊಟ್ಟಿದೆ ಅಂತಾದರೆ ಆ ಕಂಪನಿಯ ಷೇರಿನ ಬೆಲೆ ದಿಢೀರ್ ಕುಸಿತ ಕಾಣುತ್ತದೆ. ಯಾವುದೋ ದೊಡ್ಡ ಕಂಪನಿ ಬೆಳವಣಿಗೆ ದೃಷ್ಟಿಯಿಂದ ಮತ್ತೊಂದು ಸಣ್ಣ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದೆ ಎನ್ನುವ ಸುದ್ದಿ ಬಂದಾಗ ಆ ಕಂಪನಿಯ ಷೇರಿನ ಬೆಲೆ ಹೆಚ್ಚಾಗುತ್ತದೆ. ಹೀಗೆ ಯಾವುದೇ ಕಂಪನಿಯ ಷೇರಿನ ಬಗ್ಗೆ ಒಳ್ಳೆಯ ಅಥವಾ ಕೆಟ್ಟ ಸುದ್ದಿಗಳು ಬೆಲೆ ಏರಿಳಿತಕ್ಕೆ ದಾರಿ ಮಾಡಿಕೊಡುತ್ತವೆ.

5. ಸ್ಥೂಲ ಅರ್ಥಶಾಸ್ತ್ರದ ಅಂಶಗಳು: 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟು ಷೇರು ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿತು. ಆಗ 17,000 ಅಂಶಗಳಲ್ಲಿದ್ದ ಸೆನ್ಸೆಕ್ಸ್ 8000 ಅಂಶಗಳಿಗೆ ಕುಸಿತ ಕಂಡಿತ್ತು. 2020ರಲ್ಲಿ ಕೋವಿಡ್ ಉಲ್ಬಣಗೊಂಡಾಗ 40,000 ಅಂಶಗಳಿಂದ 25,000 ಅಂಶಗಳಿಗೆ ಸೆನ್ಸೆಕ್ಸ್ ಇಳಿಕೆಯಾಗಿತ್ತು. ಹೀಗೆ ಸ್ಥೂಲ ಅರ್ಥಶಾಸ್ತ್ರದ ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತವೆ. ದೇಶದ ಹಣದುಬ್ಬರ ಪ್ರಮಾಣ, ಜಿಡಿಪಿ, ಬಡ್ಡಿದರ, ಉತ್ಪಾದನಾ ಬೆಳವಣಿಗೆ, ಅಂತರರಾಷ್ಟ್ರೀಯ ವಿದ್ಯಮಾನಗಳು ಮಾರುಕಟ್ಟೆಯ ಗತಿಯನ್ನು ನಿರ್ಧರಿಸುತ್ತವೆ.

(ಚಾರ್ಟರ್ಡ್ ಅಕೌಂಟೆಂಟ್)

ದಾಖಲೆ ಮಟ್ಟದ ಏರಿಕೆ ಕಂಡ ಷೇರುಪೇಟೆ

ಜನವರಿ 12ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ದಾಖಲೆ ಮಟ್ಟದ ಏರಿಕೆ ಕಂಡಿವೆ. 72,568 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.75ರಷ್ಟು ಗಳಿಸಿಕೊಂಡಿದೆ. 21,894 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.84ರಷ್ಟು ಜಿಗಿದಿದೆ. ಈ ಹಣಕಾಸು ವರ್ಷದ ಕೊನೆಯಲ್ಲಿ ಬಡ್ಡಿದರ ಇಳಿಕೆಯಾಗಲಿದೆ ಎಂಬ ಮುನ್ಸೂಚನೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸ್ಥಿರತೆ ಕಾರಣದಿಂದ ಷೇರುಪೇಟೆ ಪುಟಿದೆದ್ದಿದೆ.

ವಲಯವಾರು ಪ್ರಗತಿಯಲ್ಲಿ ಬಿಎಸ್ಇ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4.5, ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.3, ಬಿಎಸ್ಇ ಎನರ್ಜಿ, ಅನಿಲ ಹಾಗೂ ತೈಲ ಸೂಚ್ಯಂಕ ಮತ್ತು ವಾಹನ ಸೂಚ್ಯಂಕ ತಲಾ ಶೇ 2ರಷ್ಟು ಗಳಿಸಿಕೊಂಡಿವೆ. ಬಿಎಸ್ಇ ಎಫ್‌ಎಂಸಿಜಿ ಸೂಚ್ಯಂಕ ಶೇ 1.7ರಷ್ಟು ಕುಸಿತ ಕಂಡಿದ್ದರೆ ಬ್ಯಾಂಕ್ ಸೂಚ್ಯಂಕ ಶೇ 0.9ರಷ್ಟು ಇಳಿಕೆ ಕಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,901.27 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹6,858.47 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್ಇ ಲಾರ್ಜ್ ಕ್ಯಾಪ್‌ನಲ್ಲಿ ಹೀರೊ ಮೋಟೊ ಕಾರ್ಪ್, ನೈಕಾ, ಮ್ಯಾನ್‌ಕೈಂಡ್ ಫಾರ್ಮಾ, ಎಚ್ ಸಿಎಲ್ ಟೆಕ್ನಾಲಜೀಸ್, ಡಿಎಲ್‌ಎಫ್, ಇನ್ಫೊಸಿಸ್, ರಿಲಯನ್ಸ್ ಇಂಡಸ್ಟ್ರೀಸ್ ಗಳಿಕೆ ಕಂಡಿವೆ. ಬಂಧನ್ ಬ್ಯಾಂಕ್, ಎಸ್‌ಆರ್‌ಎಫ್, ಗೋದ್ರೇಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್, ನೆಸ್ಲೆ ಇಂಡಿಯಾ ಡಿವೀಸ್ ಲ್ಯಾಬ್ಸ್ ಮತ್ತು ಡಾಬರ್ ಇಂಡಿಯಾ ಕುಸಿತ ಕಂಡಿವೆ.

ಮುನ್ನೋಟ: ಏಂಜಲ್ ಒನ್ , ಜಿಯೋ ಫೈನಾನ್ಶಿಯಲ್ ಸರ್ವೀಸಸ್, ಎಚ್‌ಡಿಎಫ್‌ಸಿ ಬ್ಯಾಂಕ್, ನೆಟ್‌ವರ್ಕ್ 18, ಪಾಲಿಕ್ಯಾಬ್, ಇಂಡಸ್ ಇಂಡ್ ಬ್ಯಾಂಕ್, ಇಂಡಿಯಾ ಮಾರ್ಟ್, ರಿಲಯನ್ಸ್ ಇಂಡಸ್ಟ್ರೀಸ್, ಜೆಕೆ ಸಿಮೆಂಟ್, ಐಸಿಐಸಿಐ ಬ್ಯಾಂಕ್, ಯೂನಿಯನ್ ಬ್ಯಾಂಕ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸಲಿವೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು, ಮುಂಬರುವ ಬಜೆಟ್ ಮೇಲಿನ ನಿರೀಕ್ಷೆಗಳು ಸೇರಿ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

‘ಮಕರವಿಳಕ್ಕು’ ಮಹೋತ್ಸವ ಇಂದು: ಶಬರಿಮಲೆ ಸಜ್ಜು

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇಗುಲದಲ್ಲಿ ಮಕರವಿಳಕ್ಕು ಮಹೋತ್ಸವ ಸೋಮವಾರ ನಡೆಯಲಿದ್ದು, ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಅಧ್ಯಕ್ಷ ಪಿ.ಎಸ್. ಪ್ರಶಾಂತ್ ಹೇಳಿದ್ದಾರೆ.

ದೇವಾಲಯಕ್ಕೆ ಭೇಟಿ ನೀಡುವ ಭಕ್ತರಿಗೆ ‘ಮಕರ ಜ್ಯೋತಿ’ ವೀಕ್ಷಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮಕರವಿಳಕ್ಕು ಮಹೋತ್ಸವದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಸಾವಿರಾರು ಭಕ್ತರು ಮಕರ ಜ್ಯೋತಿಯನ್ನು ಕಣ್ತುಂಬಿಕೊಳ್ಳಲಿದ್ದಾರೆ ಎಂದಿದ್ದಾರೆ.

ಮಕರಜ್ಯೋತಿ ವೀಕ್ಷಣೆಗಾಗಿ ಶಬರಿಮಲೆಯ ಸುತ್ತಮುತ್ತ 10 ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದೆ. ಪೊಲೀಸರು ಮತ್ತು ಅಗ್ನಿಶಾಮಕ ದಳದವರು ನೀಡುವ ಸೂಚನೆಗಳನ್ನು ಭಕ್ತರು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಅವರು ಹೇಳಿದ್ದಾರೆ.

ತಮಿಳುನಾಡಿನ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಯು ಅಂದಾಜು 80 ಲಕ್ಷ ಬಿಸ್ಕತ್ತುಗಳನ್ನು ನೀಡಿದ್ದು, ಅದನ್ನು ಭಕ್ತರಿಗೆ ವಿತರಿಸಲಾಗುವುದು ಎಂದಿದ್ದಾರೆ.

ತಿರುವಾಭರಣ (ಪವಿತ್ರ ಆಭರಣಗಳು) ಮೆರವಣಿಗೆಯು ಮಕರವಿಳಕ್ಕು ಮಹೋತ್ಸವದಂದು ಸಂಜೆ ದೇವಾಲಯಕ್ಕೆ ತಲುಪಲಿದ್ದು, ಟಿಡಿಬಿ ಅಧಿಕಾರಿಗಳು ಅದನ್ನು ಸ್ವಾಗತಿಸುವರು. ದೀಪಾರಾಧನೆಗೂ ಮುನ್ನ ಅರ್ಚಕರು ಈ ಆಭರಣಗಳಿಂದ ದೇವರ ಮೂರ್ತಿಯನ್ನು ಅಲಂಕರಿಸುವರು ಎಂದು ವಿವರಿಸಿದ್ದಾರೆ.

ದೀಪಾರಾಧನೆಯಾದ ಬಳಿಕ ದೇಗುಲದಿಂದ ಎಂಟು ಕಿ.ಮೀ. ದೂರದ ಪೊನ್ನಂಬಲಮೇಡು ಬೆಟ್ಟದ ಕಾಡಿನೊಳಗಿನಿಂದ ಮಕರಜ್ಯೋತಿ ಕಾಣಿಸಿಕೊಳ್ಳಲಿದೆ.

‘ಯುಸಿಸಿ ಜಾರಿಯಲ್ಲಿ ಉತ್ತರಾಖಂಡ ಮೊದಲು’

ಲಖನೌ(ಪಿಟಿಐ):‘ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತಂದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಉತ್ತರಾಖಂಡ ಪಾತ್ರವಾಗಲಿದೆ’ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದರು.

‘ಉತ್ತರಾಯಣಿ ಕೌತಿಕ್’ ಕಾರ್ಯಕ್ರಮದಲ್ಲಿ ಸೇರಿದ್ದ ಜನತೆ ಉದ್ದೇಶಿಸಿ ಮಾತನಾಡಿದ ರಾಜನಾಥ್ ಸಿಂಗ್, ‘ಯುಸಿಸಿಯನ್ನು ಯಾವುದಾದರೂ ರಾಜ್ಯ ಜಾರಿಗೆ ತಂದಿದ್ದರೆ ಅದರಲ್ಲಿ ಉತ್ತರಾಖಂಡವು ಮೊದಲ ರಾಜ್ಯವಾಗಲಿದೆ’ ಎಂದರು. ಆದರೆ, ಅವರು ಈ ಬಗ್ಗೆ ಹೆಚ್ಚಿನ ವಿವರಣೆ ನೀಡಲಿಲ್ಲ. 2022ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೀಡಿದ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಯುಸಿಸಿ ಕೂಡ ಒಂದಾಗಿತ್ತು. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಮೊದಲ ಸಚಿವ ಸಂಪುಟ ಸಭೆಯಲ್ಲಿ ಯುಸಿಸಿಯ ಕರಡು ರಚಿಸಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದ ಸಮಿತಿ ರಚಿಸಲು ಒಪ್ಪಿಗೆ ನೀಡಿದ್ದಾರೆ.

‘ಉತ್ತರಾಖಂಡವು ಕೇವಲ ದೇವರು ಮತ್ತು ವೀರರ ನಾಡು ಮಾತ್ರವಲ್ಲದೆ ಈಗ ಅಭಿವೃದ್ಧಿಯ ನಾಡು ಎಂದು ಗುರುತಿಸಲ್ಪಟ್ಟಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯ ಗಮನಾರ್ಹ ಪ್ರಗತಿ ಸಾಧಿಸಿದೆ’ ಎಂದು ರಾಜನಾಥ್ ಸಿಂಗ್ ಹೇಳಿದರು.

ಉತ್ತರ ಪ್ರದೇಶ ಮತ್ತು ಉತ್ತರಾಖಂಡ ನಡುವಿನ ಸಂಬಂಧ ಉಲ್ಲೇಖಿಸಿದ ಅವರು, ‘ಉತ್ತರಾಖಂಡವನ್ನು ಉತ್ತರ ಪ್ರದೇಶದಿಂದ ಬೇರ್ಪಡಿಸಿದ ನಂತರ, ಎರಡು ರಾಜ್ಯಗಳ ನಡುವಿನ ಸಂಬಂಧದಲ್ಲಿ ಸ್ವಲ್ಪ ಕಾಲ ಬಿರುಕು ಇತ್ತು. ಆದರೆ ಇದು ಜನರಲ್ಲಿ ಎಂದಿಗೂ ಕಂಡುಬಂದಿಲ್ಲ. ತೆಲಂಗಾಣವನ್ನು ಆಂಧ್ರಪ್ರದೇಶದಿಂದ ಬೇರ್ಪಡಿಸಿ 10 ವರ್ಷಗಳಾದರೂ ಎರಡು ರಾಜ್ಯಗಳ ನಡುವೆ ಹಲವು ಸಮಸ್ಯೆಗಳು ಬಗೆಹರಿದಿಲ್ಲ’ ಎಂದು ಹೇಳಿದರು.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹288-458
ದ್ವಿತಳಿ (ಬಿ.ವಿ)
₹251-571

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹565

‘ತೈವಾನ್ ಪ್ರತ್ಯೇಕ ರಾಷ್ಟ್ರವಲ್ಲ, ಇರುವುದೂ ಇಲ್ಲ’

ಬೀಜಿಂಗ್ (ಎಎಫ್‌ಪಿ): ‘ತೈವಾನ್ ಎಂದಿಗೂ ಒಂದು ರಾಷ್ಟ್ರವಾಗಿರಲಿಲ್ಲ. ಭವಿಷ್ಯದಲ್ಲೂ ಅದು ರಾಷ್ಟ್ರವಾಗಿ ಇರುವುದಿಲ್ಲ’ ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಭಾನುವಾರ ಎಚ್ಚರಿಸಿದ್ದಾರೆ.

ಕೈರೊದಲ್ಲಿ ಭಾನುವಾರ ಈಜಿಪ್ಟ್‌ನ ವಿದೇಶಾಂಗ ಸಚಿವ ಸಮೇಹ್ ಶೌಕ್ರಿ ಅವರ ಜೊತೆಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ವಾಂಗ್ ಯಿ ಈ ಮಾತು ಹೇಳಿದರು.

ಚೀನಾದ ಪುನರಾವರ್ತಿತ ಎಚ್ಚರಿಕೆ ನಡುವೆಯೂ, ಸ್ವಯಂ ಆಡಳಿತವುಳ್ಳ ದ್ವೀಪರಾಷ್ಟ್ರ ತೈವಾನ್‌ನ ನಾಗರಿಕರು, ಶನಿವಾರ ನಡೆದ ಚುನಾವಣೆಯಲ್ಲಿ ದೇಶದ ಅಧ್ಯಕ್ಷರಾಗಿ ಲಾಯ್ ಚಿಂಗ್ ಟೆ ಅವರನ್ನು ಆಯ್ಕೆ ಮಾಡಿದ್ದರು. ಚೀನಾದ ಕಮ್ಯುನಿಸ್ಟ್ ಪಕ್ಷವು ತೈವಾನ್ ಭೌಗೋಳಿಕವಾಗಿ ತನ್ನದೇಶದ ಭಾಗ ಎಂದು ಬಲವಾಗಿ ಪ್ರತಿಪಾದಿಸುತ್ತಿದೆ. ಇದನ್ನು ವಿರೋಧಿಸಿದ್ದ ಲಾಯ್ ಮತ್ತು ಡಿಪಿಸಿ, ಚುನಾವಣೆಯಲ್ಲಿ ಪ್ರಮುಖವಾಗಿ ಸ್ಪರ್ಧಿಸಿದ್ದರು. ತೈವಾನ್ ಎಂದಿಗೂ ರಾಷ್ಟ್ರವಾಗಿರಲಿಲ್ಲ ಎಂಬ ಹೇಳಿಕೆ ಚುನಾವಣೆ ಪ್ರಚಾರದಲ್ಲಿ ಪ್ರಮುಖ ಪ್ರಭಾವ ಬೀರಿತ್ತು. ತೈವಾನ್ ತನ್ನ ಹಾದಿಯನ್ನು ಕಂಡುಕೊಂಡಿದೆ. ಹಳೆಯ ಪಥಕ್ಕೆ ಮತ್ತೆ ಮರಳಲು ಬಯಸುವುದಿಲ್ಲ. ಚೀನಾ ಜೊತೆಗೂಡಲು ಬಯಸುವುದಿಲ್ಲ ಎಂದು ಲಾಯ್ ಗೆಲುವು ಕುರಿತು, 58 ವರ್ಷದ ಸಿಂಡಿ ಹುಯಾಂಗ್ ಪ್ರತಿಕ್ರಿಯಿಸಿದರು.

ಇಳುವರಿ ಕುಂಠಿತ, ಬೆಲೆ ಇಳಿಕೆ: ರೈತರಿಗೆ ಸಂಕಷ್ಟ

ಒಣಮೆಣಸಿನಕಾಯಿ ಮತ್ತಷ್ಟು‘ಖಾರ’

• ಬಸವರಾಜ ಹವಾಲ್ದಾರ


ಬಾಗಲಕೋಟೆ ಜಿಲ್ಲೆಯ ಹಳ್ಳೂರಿನಲ್ಲಿ ಮೆಣಸಿನಕಾಯಿ ಸಂಸ್ಕರಣೆ ಮಾಡುತ್ತಿರುವ ಮಹಿಳೆಯರು

ಬಾಗಲಕೋಟೆ: ಬರದಿಂದ ಬಳಲುತ್ತಿರುವ ಜಿಲ್ಲೆಯ ರೈತರು, ಈಗ ಬಂದಿರುವ ಅಲ್ಪ ಸ್ವಲ್ಪ ಇಳುವರಿ ಪಡೆದಿರುವ ಮೆಣಸಿನಕಾಯಿ ಬೆಳೆಗೂ ಬೆಲೆ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜೋಳ, ಕಡಲೆ, ಗೋಧಿ ಬೆಳೆದುಕೊಡಿದ್ದ ರೈತರು ಈಗ ಬ್ಯಾಡಗಿ ಹಾಗೂ ಗುಂಟೂರು ಮೆಣಸಿನಕಾಯಿ ಬೆಳೆಯುತ್ತಿದ್ದಾರೆ. ಬೆಲೆ ಕುಸಿತದಿಂದಾಗಿ ಮೆಣಸಿನಕಾಯಿ ರೈತರ ಪಾಲಿಗೆ ಖಾರವಾಗಿ ತಳಮಳ ಹೆಚ್ಚಿಸಿದೆ.

ಹಿಂದೆ ಜಿಲ್ಲೆಯಲ್ಲಿ ಮೆಣಸಿನಕಾಯಿಯನ್ನು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಈಗ 11 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಮಳೆ ಕೊರತೆಯಿಂದಾಗಿ ನಿರೀಕ್ಷಿಸಿದಷ್ಟು ಇಳುವರಿ ಬಂದಿಲ್ಲ.

‘ಬ್ಯಾಡಗಿ ಹಾಗೂ ಗುಂಟೂರು ಮೆಣಸಿನಕಾಯಿಗಳೆರಡನ್ನೂ ಬೆಳೆದಿದ್ದೇವೆ. ಎಕರೆಗೆ ಬ್ಯಾಡಗಿ ಮೆಣಸಿನಕಾಯಿ ಮೂರು ಕ್ವಿಂಟಲ್ ಇಳುವರಿ ಬರುತ್ತಿತ್ತು. ಈ ಬಾರಿ ಮಳೆಯಾಗದ್ದರಿಂದ ಒಂದು ಕ್ವಿಂಟಲ್ ಮಾತ್ರ ಬಂದಿದೆ. ಗುಂಟೂರು 8 ರಿಂದ 10 ಕ್ವಿಂಟಲ್ ಬೆಳೆಯುತ್ತಿತ್ತು. ಈಗ 3-4 ಕ್ವಿಂಟಲ್ ಬಂದಿದೆ' ಎಂದು ರೈತ ವಿರೂಪಾಕ್ಷಪ್ಪ ಹುದ್ದಾರ ಹೇಳಿದರು.

‘ಪ್ರತಿ ಕ್ವಿಂಟಲ್ ಗೆ ಬ್ಯಾಡಗಿ ಮೆಣಸಿನಕಾಯಿಗೆ ಕಳೆದ ವರ್ಷ ₹60 ರಿಂದ ₹65 ಸಾವಿರ ಬೆಲೆ ಸಿಕ್ಕಿತ್ತು. ಈ ಬಾರಿ ₹ 38 ರಿಂದ ₹40 ಸಾವಿರ ಇದೆ. ಗುಂಟೂರು ₹20 ರಿಂದ ₹22 ಸಾವಿರ ಕ್ವಿಂಟಲ್ ಇರುತ್ತಿದ್ದ ಬೆಲೆ ಈಗ ₹ 15 ಸಾವಿರ ಆಸುಪಾಸಿನಲ್ಲಿದೆ. ಪ್ರತಿ ಎಕರೆಗೆ ₹50 ರಿಂದ ₹60 ಸಾವಿರ ಖರ್ಚಾಗುತ್ತದೆ. ಬೆಲೆ ಇಲ್ಲದ್ದರಿಂದ ನಷ್ಟವಾಗುತ್ತಿದೆ’ ಎಂದು ಹಳ್ಳೂರಿನ ರೈತ ಯಂಕಣ್ಣ ಮೇಟಿ ಅಳಲು ತೋಡಿಕೊಂಡರು.

ಉತ್ತಮ ಮಳೆಯಾಗುತ್ತಿದ್ದರಿಂದ ಹಿಂದಿನ ವರ್ಷ ನೀರಿನ ಕೊರತೆಯಾಗುತ್ತಿರಲಿಲ್ಲ. ಈ ವರ್ಷ ಮಳೆ ಸರಿಯಾಗಿ ಆಗದೇ ಕೆಲವು ರೈತರು ಟ್ಯಾಂಕರ್ ಮೂಲಕ ನೀರು ಹಾಕಿ ಬೆಳೆ ಉಳಿಸಿಕೊಳ್ಳಲು ಹೆಣಗಾಡಿದ್ದಾರೆ. ಇದರಿಂದ ಖರ್ಚು ಹೆಚ್ಚಿದೆ.

‘ಕಳೆದ ಎರಡು ವರ್ಷ ಉತ್ತಮ ಬೆಲೆ ದೊರೆತಿತ್ತು. ಈ ವರ್ಷ ಮತ್ತಷ್ಟು ರೈತರು ಮೆಣಸಿನಕಾಯಿ ಬೆಳೆದಿದ್ದಾರೆ. ಇಳುವರಿ ಕಡಿಮೆಯಾಗಿದೆ. ಉತ್ತಮ ಬೆಲೆ ಸಿಗುವ ನಿರೀಕ್ಷೆ ಹುಸಿಯಾಗಿದೆ’ ಎಂದು ರೈತ ಶಿವಾನಂದ ಹಡಗಲಿ ದೂರಿದರು.

‘ಬಾಗಲಕೋಟೆ ಜಿಲ್ಲೆಯಲ್ಲಿ ಮೆಣಸಿನಕಾಯಿಗೆ ಮಾರುಕಟ್ಟೆಯಿಲ್ಲ. ಹುಬ್ಬಳ್ಳಿ ಅಥವಾ ಬ್ಯಾಡಗಿ ಮಾರುಕಟ್ಟೆಗೆ ತೆಗೆದು ಕೊಂಡು ಹೋಗಬೇಕು. ಅದಕ್ಕೆ ಸಾರಿಗೆ ಖರ್ಚು ಹೆಚ್ಚುವರಿಯಾಗುತ್ತದೆ’ ಎಂದರು.

> **ಈರುಳ್ಳಿಗೂ ಬೆಲೆ ಇಲ್ಲ. ಪ್ರತಿ ಕ್ವಿಂಟಲ್ ಗೆ ₹800 ರಿಂದ ಸಾವಿರ ಇದೆ. ಮೆಣಸಿನಕಾಯಿಗೂ ಬೆಲೆ ಇಲ್ಲ. ಯಾವ ಬೆಳೆ ಬೆಳೆಯಬೇಕು ಎಂಬುದೇ ತಿಳಿಯದಂತಾಗಿದೆ**
> **ಶಿವಾನಂದ ಹಡಗಲಿ, ರೈತ**

ಕೊಚ್ಚಿಯಿಂದ ಮೈಸೂರು ಸೇರಿ ನಾಲ್ಕು ನಗರಗಳಿಗೆ ವಿಮಾನ ಸೇವೆ

ಕೊಚ್ಚಿ (ಪಿಟಿಐ): ಕೇರಳದ ಕೊಚ್ಚಿ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಸಂಸ್ಥೆಯು (ಸಿಐಎಎಲ್) ಶೀಘ್ರದಲ್ಲಿಯೇ ಮೈಸೂರು ಸೇರಿದಂತೆ ನಾಲ್ಕು ನಗರಗಳಿಗೆ ವಿಮಾನ ಸೇವೆ ಆರಂಭಿಸಲಿದೆ.

ಕೊಚ್ಚಿಯಿಂದ ಮೈಸೂರು, ಕಣ್ಣೂರು, ತಿರುಚ್ಚಿ, ತಿರುಪತಿಗೆ ವೈಮಾನಿಕ ಸೇವೆ ಆರಂಭವಾಗಲಿದೆ. ಬಹುಶಃ ಜನವರಿ ಅಂತ್ಯದೊಳಗೆ ಸೇವೆ ಆರಂಭವಾಗಲಿದೆ ಎಂದು ಸಿಐಎಎಲ್ ಹೇಳಿಕೆಯಲ್ಲಿ ತಿಳಿಸಿದೆ.

ಅಲೈಯನ್ಸ್ ಏರ್ ಸಂಸ್ಥೆಯು ಸೇವೆ ಆರಂಭಿಸಲಿದ್ದು, ಕೊಚ್ಚಿಯಿಂದ ತಿರುಚ್ಚಿ ವಿಮಾನ ಸೇವೆಯನ್ನು ಚೆನ್ನೈಗೆ ವಿಸ್ತರಿಸಲಾಗುತ್ತದೆ. ಇದು, ಪ್ರಾದೇಶಿಕ ಸಂಪರ್ಕ, ಪ್ರವಾಸೋದ್ಯಮದ ಚೇತರಿಕೆಗೆ ನೆರವಾಗಲಿದೆ ಎಂದು ಸಿಐಎಎಲ್ ತಿಳಿಸಿದೆ.

ಅಧಿಕ ರಕ್ತದೊತ್ತಡ ಔಷಧ ಮಾರಾಟಕ್ಕೆ ಅಮೆರಿಕ ಅನುಮೋದನೆ


ನವದೆಹಲಿ (ಪಿಟಿಐ): ಅಮೆರಿಕದಲ್ಲಿ ಜೆನರಿಕ್ ಹೈಪರ್‌ಟೆನ್ಷನ್ (ಅಧಿಕ ರಕ್ತದೊತ್ತಡ) ಔಷಧವನ್ನು ಮಾರುಕಟ್ಟೆಗೆ ತರಲು ಅಲ್ಲಿನ ಆರೋಗ್ಯ ನಿಯಂತ್ರಕದಿಂದ ಅನುಮತಿ ಪಡೆದಿರುವುದಾಗಿ ಔಷಧ ತಯಾರಕ ಸಂಸ್ಥೆ ಲುಪಿನ್ ಭಾನುವಾರ ಹೇಳಿದೆ.

ಕಂಪನಿಯು ಅಮೆರಿಕದ ಆಹಾರ ಮತ್ತು ಔಷಧ ಆಡಳಿತದಿಂದ (ಯುಎಸ್‌ಎಫ್‌ಡಿಎ) ಪ್ರೊಪ್ರಾನೊಲೊಲ್ ಹೈಡ್ರೋಕ್ಲೋರೈಡ್ ಕ್ಯಾಪ್ಸೂಲ್‌ಗಳಿಗಾಗಿ ಅನುಮೋದನೆಯನ್ನು ಪಡೆದಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ. ಪಿತಾಂಪುರದಲ್ಲಿರುವ ಉತ್ಪಾದನಾ ಘಟಕದಲ್ಲಿ ಉತ್ಪನ್ನವನ್ನು ತಯಾರಿಸುತ್ತಿದೆ ಎಂದು ಔಷಧ ಸಂಸ್ಥೆ ತಿಳಿಸಿದೆ.

ಅಧಿಕ ರಕ್ತದೊತ್ತಡದ ನಿರ್ವಹಣೆಗೆ ಪ್ರೊಪ್ರಾನೊಲೊಲ್ ಹೈಡ್ರೋಕ್ಲೋರೈಡ್ ಕ್ಯಾಪ್ಸೂಲ್ ಅನ್ನು ಸೂಚಿಸಲಾಗುತ್ತದೆ. ಅಮೆರಿಕದಲ್ಲಿ ಪ್ರೊಪ್ರಾನೊಲೊಲ್ ಹೈಡ್ರೋಕ್ಲೋರೈಡ್ ಮಾತ್ರೆಗಳು ವಾರ್ಷಿಕ 7 ಕೋಟಿಗೂ ಹೆಚ್ಚು ಮಾರಾಟವಾಗಬಹುದು ಅಂದಾಜಿಸಲಾಗಿದೆ.

10ನೇ ರಾಜನಾಗಿ ಅಧಿಕಾರ ಗ್ರಹಣ • ಲಕ್ಷಾಂತರ ಜನರು ಕಾರ್ಯಕ್ರಮದಲ್ಲಿ ಭಾಗಿ

ಡೆನ್ಮಾರ್ಕ್ ರಾಜನಾಗಿ ಫ್ರೆಡ್ರಿಕ್ ಅಧಿಕಾರ


ಫ್ರೆಡ್ರಿಕ್

ಕೋಪನ್‌ಹೇಗನ್ (ಎಎಫ್‌ಪಿ): ಡೆನ್ಮಾರ್ಕ್‌ನ ರಾಣಿ ಮಾರ್ಗರೀತಾ ಭಾನುವಾರ ಅಧಿಕಾರ ತ್ಯಜಿಸಿದ್ದು, ಅವರ ಪುತ್ರ ಫ್ರೆಡ್ರಿಕ್ 10ನೇ ರಾಜನಾಗಿ ಅಧಿಕಾರ ಗ್ರಹಣ ಮಾಡಿದರು. ಈ ಮೂಲಕ ಡೆನ್ಮಾರ್ಕ್‌ನಲ್ಲಿ ಹೊಸ ಯುಗಾರಂಭವಾಗಿದೆ.

ರಾಜನಾಗಿ ಫ್ರೆಡ್ರಿಕ್ ಅಧಿಕಾರ ಗ್ರಹಣ ಮಾಡುವ ಗಳಿಗೆಗೆ ಲಕ್ಷಾಂತರ ಜನರು ಸಾಕ್ಷಿಯಾದರು. ಇದಕ್ಕೂ ಮೊದಲು ರಾಣಿ ಮಾರ್ಗರೀತಾ ಕೋಪನ್‌ಹೇಗನ್‌ನ ಪ್ರಮುಖ ರಸ್ತೆಗಳಲ್ಲಿ ಕುದುರೆ ಸಾರೋಟಿನಲ್ಲಿ ಸಾಗಿ ಅರಮನೆ ತಲುಪಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಅಸಂಖ್ಯಾತ ನಾಗರಿಕರು ಕೈಬೀಸಿ ಈ ಸಂದರ್ಭಕ್ಕೆ ಸಾಕ್ಷಿಯಾದರು.

ಕ್ರಿಸ್ತಿಯಾನ್ಸ್‌ಬರ್ಗ್ ಅರಮನೆಯಲ್ಲಿ ನಡೆದ ಸಮಾರಂಭದಲ್ಲಿ 83 ವರ್ಷದ ರಾಣಿ ಮಾರ್ಗರೇತ್, ಅಧಿಕಾರ ತ್ಯಜಿಸುವ ಘೋಷಣೆಗೆ ಸಹಿ ಹಾಕಿದರು. ಈ ಮೂಲಕ 52 ವರ್ಷದ ಅವರ ಸುದೀರ್ಘ ಆಡಳಿತಾವಧಿಯ ಯುಗ ಅಂತ್ಯವಾದರೆ, ರಾಜನಾಗಿ ಅವರ 55 ವರ್ಷ ವಯಸ್ಸಿನ ಅವರ ಪುತ್ರ ಫ್ರೆಡ್ರಿಕ್ ಅವರ ಅಧಿಕಾರವಧಿ ಆರಂಭಗೊಂಡಿತು.


ಡೆನ್ಮಾರ್ಕ್ ರಾಜನಾಗಿ ಫ್ರೆಡ್ರಿಕ್ ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಸಾಕ್ಷಿಯಾಗಲು ಭಾನುವಾರ ಕೋಪನ್‌ಹೇಗನ್‌ನ ಕ್ರಿಸ್ತಿಯಾನ್ಸ್‌ಬರ್ಗ್ ಸ್ಕ್ವೇರ್‌ನಲ್ಲಿ ಸೇರಿದ್ದ ಜನಸ್ತೋಮ —ಎಎಫ್‌ಪಿ ಚಿತ್ರ

ಬಳಿಕ ರಾಣಿ ಮಾರ್ಗರೀತಾ ಅವರು ಸಚಿವ ಸಂಪುಟದಿಂದ ನಿರ್ಗಮಿಸಿದರು. ರಾಜ ಫ್ರೆಡ್ರಿಕ್, ಅವರ ಪತ್ನಿ, ಅವರ 18 ವರ್ಷದ ಪುತ್ರನಾದ ನೂತನ ರಾಜಕುಮಾರ ಈ ಸಂದರ್ಭದಲ್ಲಿ ಇದ್ದರು. ‘ರಾಜನಿಗೆ ದೇವರು ಒಳ್ಳೆಯದು ಮಾಡಲಿ’ ಎಂಬ ಹಾರೈಕೆ ಹಾಗೂ ಆನಂದಭಾಷ್ಪದೊಂದಿಗೆ ರಾಣಿ ನಿರ್ಗಮಿಸಿದರು.

ಫ್ರೆಡ್ರಿಕ್ ಅವರು ನೂತನ ರಾಜನಾಗಿ ಅಧಿಕಾರ ಸ್ವೀಕರಿಸಿರುವುದನ್ನು ಪ್ರಧಾನಿ ಮ್ಯಾಟೆ ಫ್ರೆಡೆರಿಕ್ಸೆನ್ ಅವರು ಅರಮನೆಯ ಮಹಡಿಯಲ್ಲಿ ಘೋಷಿಸಿದರು. ಈ ಸಂದರ್ಭದಲ್ಲಿ ರಾಣಿ ಮೇರಿ ಅವರು ಇದ್ದರು. ಆಸ್ಟ್ರೇಲಿಯಾದಲ್ಲಿ ಜನಿಸಿದ ಮೇರಿ, ಈ ಮೂಲಕ ಡೆನ್ಮಾರ್ಕ್‌ನ ರಾಣಿಯಾದ ಪ್ರಥಮ ಸಾಮಾನ್ಯಪ್ರಜೆ ಎಂಬ ಹಿರಿಮೆಗೂ ಪಾತ್ರರಾದರು.

‘ನನ್ನಂತಹ ಸಾಮಾನ್ಯ ಪ್ರಜೆ ರಾಣಿ ಆಗುವುದೇ ನನ್ನನ್ನು ಭಾವೋದ್ವೇಗೊಳಿಸುತ್ತಿದೆ’ ಎಂದು ಆಸ್ಟ್ರೇಲಿಯಾದ ಬ್ರಿಸ್ಬೇನ್‌ನಿಂದ ಕಾರ್ಯಕ್ರಮ ವೀಕ್ಷಿಸಲು ಆಗಮಿಸಿದ್ದ ಜ್ಯೂಡಿ ಲ್ಯಾಂಗ್‌ಟ್ರೀ ಅವರು ಪ್ರತಿಕ್ರಿಯಿಸಿದರು.

ರಣಜಿ ಕ್ರಿಕೆಟ್: ಕೌಶಿಕ್, ರೋಹಿತ್ ಮೋಡಿ • ಸೋಲು ತಪ್ಪಿಸಿಕೊಳ್ಳಲು ಗುಜರಾತ್ ಪ್ರಯತ್ನ

ಮಯಂಕ್ ಪಡೆಗೆ ಚಿಗುರಿದ ಜಯದ ನಿರೀಕ್ಷೆ

ಅಹಮದಾಬಾದ್: ಮಧ್ಯಮವೇಗಿ ವಾಸುಕಿ ಕೌಶಿಕ್ ಮತ್ತು ನವಪ್ರತಿಭೆ ರೋಹಿತ್ ಕುಮಾರ್ ಅವರ ಅಮೋಘ ಬೌಲಿಂಗ್‌ನಿಂದಾಗಿ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿಯೂ ಜಯಿಸುವ ನಿರೀಕ್ಷೆ ಗರಿಗೆದರಿದೆ. ಆತಿಥೇಯ ಗುಜರಾತ್ ತಂಡವು ಸೋಲು ತಪ್ಪಿಸಿ-ಕೊಳ್ಳಲು ಡ್ರಾ ಸಾಧಿಸುವತ್ತ ಚಿತ್ತ ನೆಟ್ಟಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ ಗುಂಪಿನ ಪಂದ್ಯದಲ್ಲಿ ಭಾನುವಾರ ಮೂರನೇ ದಿನದಾಟ ಮುಕ್ತಾಯವಾದಾಗ ಗುಜರಾತ್ ಎರಡನೇ ಇನಿಂಗ್ಸ್‌ನಲ್ಲಿ 68 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 171 ರನ್ ಗಳಿಸಿತು. 61 ರನ್‌ಗಳ ಮುನ್ನಡೆಯನ್ನೂ ಸಾಧಿಸಿದೆ. ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 110 ರನ್‌ಗಳ ಮುನ್ನಡೆಯ ಮೊತ್ತವನ್ನು ಆತಿಥೇಯರು ಚುಕ್ತಾ ಮಾಡಿದರು. ಆದರೆ, ದೀರ್ಘ ಇನಿಂಗ್ಸ್ ಆಡಿ ದೊಡ್ಡ ಗುರಿಯೊಡ್ಡುವ ಅವರ ಕನಸಿಗೆ ಕರ್ನಾಟಕದ ಮಧ್ಯಮವೇಗಿ ಕೌಶಿಕ್ (11ಕ್ಕೆ3) ಮತ್ತು ಸ್ಪಿನ್ನರ್ ರೋಹಿತ್ (42ಕ್ಕೆ2) ಅಡ್ಡಿಯಾದರು.

ಪಂದ್ಯದ ಮೊದಲ ದಿನವೇ ಗಾಯಗೊಂಡು ಹೊರಗುಳಿದ ವೇಗಿ ಪ್ರಸಿದ್ಧ ಕೃಷ್ಣ ಅವರ ಗೈರುಹಾಜರಿ-ಯಲ್ಲಿಯೂ ಕರ್ನಾಟಕ ಬೌಲರ್‌ಗಳು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕು-ವಲ್ಲಿ ಯಶಸ್ವಿಯಾದರು.

ಇದರೊಂದಿಗೆ ಪಂದ್ಯದ ಕೊನೆಯ ದಿನವಾದ ಸೋಮವಾರ ಬೆಳಿಗ್ಗೆ ಬೇಗನೆ ಮೂರು ವಿಕೆಟ್‌ಗಳನ್ನು ಕಬಳಿಸಿ, ಸಣ್ಣ ಮೊತ್ತದ ಗುರಿಯನ್ನು ಬೆನ್ನಟ್ಟಿ ಜಯಿಸುವ ವಿಶ್ವಾಸ ಮಯಂಕ್ ಅಗರವಾಲ್ ಪಡೆಯಲ್ಲಿ ಗರಿಗೆದರಿದೆ.



ಕರ್ನಾಟಕ ರೋಹಿತಕುಮಾರ್ ಬೌಲಿಂಗ್ ವೈಖರಿ

ಕೌಶಿಕ್ ಅವರು ಆರಂಭಿಕ ಬ್ಯಾಟರ್ ಪ್ರಿಯಾಂಕ್ ಪಾಂಚಾಲ್ ಮತ್ತು ಮಧ್ಯಮ ಕ್ರಮಾಂಕದಲ್ಲಿ ಹೆಟ್ ಪಟೇಲ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇನ್ನೊಂದೆಡೆ ಸ್ಪಿನ್ನರ್ ಶುಭಾಂಗ್ ಮತ್ತು ವೇಗಿ ವೈಶಾಖ ವಿಜಯಕುಮಾರ್ ಕೂಡ ಮೇಲಿನ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು ಕೇವಲ 52 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು.

ಈ ನಡುವೆಯೂ ಚೆಂದದ ಅರ್ಧಶತಕ ಗಳಿಸಿದ ಮನನ್ ಹಿಂಗರೇಜಾ (56; 135ಎ, 4X) ಮತ್ತು ಕ್ಷಿತಿಜ್ ಪಟೇಲ್ (26; 58ಎ) ಅವರು ಗುಜರಾತ್ ತಂಡವನ್ನು ಇನಿಂಗ್ಸ್ ಸೋಲಿನ ಆತಂಕದಿಂದ ಪಾರು ಮಾಡಿದರು. ಇವರಿಬ್ಬರೂ ಐದನೇ ವಿಕೆಟ್‌ಗೆ 57 ರನ್ ಸೇರಿಸಿದರು. ಇನಿಂಗ್ಸ್‌ನ 46ನೇ ಓವರ್‌ನಲ್ಲಿ ಕ್ಷಿತಿಜ್ ವಿಕೆಟ್ ಗಳಿಸಿದ ಕೌಶಿಕ್ ಜೊತೆಯಾಟವನ್ನು ಮುರಿದರು.

ಇನಿಂಗ್ಸ್‌ನ 59ನೇ ಓವರ್ ಬೌಲಿಂಗ್ ಮಾಡಿದ ರೋಹಿತ್ ಅವರು ಮನನ್ ಮತ್ತು ರಿಪಲ್ ಪಟೇಲ್ ವಿಕೆಟ್‌ಗಳನ್ನು ಗಳಿಸಿದರು. ಆದರೆ ಹ್ಯಾಟ್ರಿಕ್ ಸಾಧಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಪಾಂಡೆ–ಸುಜಯ್ ಜೊತೆಯಾಟ: ಎರಡನೇ ದಿನವಾದ ಶನಿವಾರ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 328 ರನ್ ಗಳಿಸಿತ್ತು. ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಮತ್ತು ಪದಾರ್ಪಣೆಯ ಪಂದ್ಯ ಆಡುತ್ತಿರುವ ಸುಜಯ್ ಸತೇರಿ ಕ್ರೀಸ್‌ನಲ್ಲಿದ್ದರು. ಭಾನುವಾರ ಆಟ ಮುಂದುವರಿಸಿದ ಇಬ್ಬರೂ ತಂಡದ ಮೊತ್ತವನ್ನು ಹೆಚ್ಚಿಸುವತ್ತ ಚಿತ್ತ ನೆಟ್ಟಿದರು.

ಸುಜಯ್ (31; 48ಎ) ನಾಲ್ಕು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದು ಗಮನ ಸೆಳೆದರು. ಗುಜರಾತ್ ತಂಡದ ಅರ್ಜನ್ ನಾಗವಸ್ವಾಲ್ಲಾ ಬೌಲಿಂಗ್‌ನಲ್ಲಿ ಸುಜಯ್ ಔಟಾಗುವು-ದರೊಂದಿಗೆ ಜೊತೆಯಾಟ ಮುರಿಯಿತು. ಮನೀಷ್ ಮತ್ತು ಸುಜಯ್ 6ನೇ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಗುಜರಾತ್: 264 (88 ಓವರ್‌ಗಳಲ್ಲಿ) ಕರ್ನಾಟಕ: 374 (106.2 ಓವರ್‌ಗಳಲ್ಲಿ) (ಶನಿವಾರ 5 ವಿಕೆಟ್‌ಗೆ 328)

ಪಾಂಡೆ ಸಿ ಕ್ಷಿತಿಜ್ ಬಿ ರಿಂಕೇಶ್ 88 (156ಎ, 4X8, 6X2)
ಸುಜಯ್ ಎಲ್‌ಬಿಡಬ್ಲ್ಯು ಬಿ ನಾಗವಸ್ವಾಲಾ 31 (48ಎ, 4X4, 6X1)
ವೈಶಾಖ ಸಿ ಹೆಟ್ ಬಿ ಚಿಂತನ್ 0 (3ಎ)
ರೋಹಿತ್ ಸಿ ಮನನ್ ಬಿ ಸಿದ್ಧಾರ್ಥ್ 5 (22ಎ, 4X1)
ಕೌಶಿಕ್ ಔಟಾಗದೆ 0
ಪ್ರಸಿದ್ಧ ಗಾಯಗೊಂಡು ನಿವೃತ್ತಿ 0
ಇತರೆ: 6 (ಲೆಗ್‌ಬೈ 3, ವೈಡ್ 1, ನೋಬಾಲ್ 2)
ವಿಕೆಟ್ ಪತನ: 6–348 (ಸುಜಯ್ ಸತೇರಿ; 95.5), 7–349 (ವೈಶಾಖ ವಿಜಯಕುಮಾರ್; 96.6), 8–370 (ರೋಹಿತ್ ಕುಮಾರ್; 105.5), 9–374 (ಮನೀಷ್ ಪಾಂಡೆ; 106.2)
ಬೌಲಿಂಗ್: ಚಿಂತನ್ ಗಜ 23–3–65–3, ಅರ್ಜನ್ ನಾಗವಸ್ವಾಲಾ 20–3–75–1, ಸಿದ್ಧಾರ್ಥ್ ದೇಸಾಯಿ 33–6–113–2, ರಿಪಲ್ ಪಟೇಲ್ 3–0–13–0, ರಿಂಕೇಶ್ ವಘೇಲಾ 25.2–4–95–2, ಮನನ್ ಹಿಂಗರೇಜಾ 2–0–10–0.

ಎರಡನೇ ಇನಿಂಗ್ಸ್: ಗುಜರಾತ್ 7ಕ್ಕೆ 171 (68 ಓವರ್‌ಗಳಲ್ಲಿ)

ಪ್ರಿಯಾಂಕ್ ಸಿ ಸುಜಯ್ ಬಿ ಕೌಶಿಕ್ 4 (21ಎ)
ಸಂಪ್ರೀತ್‌ಸಿಂಗ್ ಸಿ ಪಡಿಕ್ಕಲ್ ಬಿ ಶುಭಾಂಗ್ 27 (85ಎ, 4X2, 6X1)
ಸಿದ್ಧಾರ್ಥ್ ಬಿ ವೈಶಾಖ 0 (10ಎ)
ಹೆಟ್ ಪಟೇಲ್ ಬಿ ಕೌಶಿಕ್ 6 (8ಎ, 4X1)
ಮನನ್ ಸಿ ಪಡಿಕ್ಕಲ್ ಬಿ ರೋಹಿತ್ 56 (135ಎ, 4X5)
ಕ್ಷಿತಿಜ್ ಸಿ ಸುಜಯ್ ಬಿ ಕೌಶಿಕ್ 26 (58ಎ, 4X2)
ಉಮಂಗ್ ಬ್ಯಾಟಿಂಗ್ 29 (61ಎ, 4X3, 6X1)
ರಿಪಲ್ ಸಿ ಪಾಂಡೆ ಬಿ ರೋಹಿತ್ 0 (1ಎ)
ಚಿಂತನ್ ಬ್ಯಾಟಿಂಗ್ 8 (33ಎ, 4X1)
ಇತರೆ: 15 (ಬೈ 9, ಲೆಗ್‌ಬೈ 1, ವೈಡ್ 1, ನೋಬಾಲ್ 4)
ವಿಕೆಟ್ ಪತನ: 1–6 (ಪ್ರಿಯಾಂಕ್ ಪಾಂಚಾಲ್ 6.6), 2–12 (ಸಿದ್ಧಾರ್ಥ್ ದೇಸಾಯಿ; 10.4), 3–21 (ಹೆಟ್ ಪಟೇಲ್; 14.4), 4–52 (ಸಂಪ್ರೀತ್‌ಸಿಂಗ್ ಬಗ್ಗಾ; 26.2), 5–109 (ಕ್ಷಿತಿಜ್ ಪಟೇಲ್ 45.5), 6–145 (ಮನನ್ ಹಿಂಗರೇಜಾ; 58.3), 7–145 (ರಿಪಲ್ ಪಟೇಲ್; 58.4)
ಬೌಲಿಂಗ್: ವಿ. ಕೌಶಿಕ್ 14–10–11–3, ವೈಶಾಖ ವಿಜಯಕುಮಾರ್ 14–2–27–1, ಶುಭಾಂಗ್ ಹೆಗಡೆ 23–4–70–1, ರೋಹಿತ್ ಕುಮಾರ್ 13–2–42–2, ನಿಕಿನ್ ಜೋಸ್ 1–0–5–0, ಮಯಂಕ್ ಅಗರವಾಲ್ 2–1–4–0, ದೇವದತ್ತ ಪಡಿಕ್ಕಲ್ 1–0–2–0

ಸಾತ್ವಿಕ್– ಚಿರಾಗ್ ರನ್ನರ್‌ಅಪ್

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಚೀನಾ ಜೋಡಿಗೆ ಪ್ರಶಸ್ತಿ

ಕ್ವಾಲಾಲಂಪುರ (ಪಿಟಿಐ): ಭಾರತದ ತಾರೆಗಳಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಫೈನಲ್ ಪಂದ್ಯದಲ್ಲಿ ಎಡವಿದರು. ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ ಪರಾಭವಗೊಂಡು, ರನ್ನರ್ ಅಪ್ ಸ್ಥಾನ ಪಡೆದರು.

ಭಾನುವಾರ ನಡೆದ ಪಂದ್ಯದಲ್ಲಿ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಭಾರತದ ಜೋಡಿಯು 21–9, 18–21, 17–21ರಿಂದ ವಿಶ್ವದ ಅಗ್ರಜೋಡಿಗೆ ಶರಣಾದರು. ಈ ಮೂಲಕ ಸಾತ್ವಿಕ್– ಚಿರಾಗ್ ಅವರ ಸೂಪರ್ 1000 ಟೂರ್ನಿಯಲ್ಲಿ ಎರಡನೇ ಪ್ರಶಸ್ತಿ ಗೆಲ್ಲುವ ಕನಸು ಕಮರಿತು. ಕಳೆದ ಜೂನ್‌ನಲ್ಲಿ ಇಂಡೊನೇಷ್ಯಾ ಓಪನ್ ಟೂರ್ನಿಯ ಪ್ರಶಸ್ತಿಯನ್ನು ಈ ಜೋಡಿ ಮುಡಿಗೇರಿಸಿಕೊಂಡಿತ್ತು.

ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತರಾದ ಸಾತ್ವಿಕ್ ಮತ್ತು ಚಿರಾಗ್ ಫೈನಲ್‌ನಲ್ಲಿ ಉತ್ತಮ ಆರಂಭ ಮಾಡಿದ್ದರು. ಮೊದಲ ಗೇಮ್‌ನಲ್ಲಿ ಸಂಪೂರ್ಣ ಹಿಡಿತ ಸಾಧಿಸಿದ ಅವರು ಸುಲಭವಾಗಿ ಜಯಿಸಿದರು. ಆದರೆ, ಎರಡನೇ ಗೇಮ್‌ನಲ್ಲಿ ತಿರುಗಿಬಿದ್ದ ಚೀನಾದ ಆಟಗಾರರು ಸೊಗಸಾದ ಸ್ಟ್ರೋಕ್‌ಪ್ಲೇ ಮೂಲಕ ಗೇಮ್‌ನಲ್ಲಿ ಮೇಲುಗೈ ಪಡೆದು ಸಮಬಲ ಸಾಧಿಸಿದರು.

ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಲಯ ಕಂಡುಕೊಂಡ ಭಾರತದ ಜೋಡಿಯು ಆರಂಭದಲ್ಲಿ 10–3ರಿಂದ ಮುನ್ನಡೆ ಪಡೆದು ಬಲವಾದ ಹಿಡಿತ ಸಾಧಿಸಿತು. ಇನ್ನೇನು ಪ್ರಶಸ್ತಿ ಗೆದ್ದೇಬಿಟ್ಟಿತು ಎನ್ನುವಷ್ಟರಲ್ಲಿ ಮತ್ತೆ ಪುಟಿದೆದ್ದ ಕೆಂಗ್– ಚಾಂಗ್ ಜೋಡಿಯು ಫ್ರಂಟ್ ಕೋರ್ಟ್‌ನಲ್ಲಿ ಪ್ರಾಬಲ್ಯ ಮೆರೆದು 12–12ರ ಸಮಬಲ ಸಾಧಿಸಿತು. ನಂತರದಲ್ಲಿ ಫ್ಲಾಟ್‌ಪುಷ್ ಮತ್ತು ಡ್ರಾಪ್‌ಶಾಟ್ ವೇಳೆ ಭಾರತದ ಆಟಗಾರರು ಎಡವಿದರು.

ಸಾತ್ವಿಕ್ ಮತ್ತು ಚಿರಾಗ್ ಅವರು ಚೀನಾದ ಈ ಜೋಡಿಯೊಂದಿಗೆ ಒಟ್ಟು 5 ಬಾರಿ ಮುಖಾಮುಖಿಯಾಗಿದ್ದು, ನಾಲ್ಕು ಬಾರಿ ಸೋತಿದ್ದಾರೆ. ಆದರೆ, ಕಳೆದ ವರ್ಷ ಕೊರಿಯಾ ಓಪನ್ ಸೂಪರ್ 500 ಟೂರ್ನಿಯಲ್ಲಿ ಮಾತ್ರ ಭಾರತದ ಆಟಗಾರರು ಗೆಲುವು ಸಾಧಿಸಿದ್ದರು.



ಮಲೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್ ಆದ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ಎಡ) ಮತ್ತು ಚಾಂಪಿಯನ್ ಆದ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ –ಪಿಟಿಐ ಚಿತ್ರ

ಸಾತ್ವಿಕ್– ಚಿರಾಗ್ ಜೋಡಿಯು ನವದೆಹಲಿಯಲ್ಲಿ ಗುರುವಾರ ಆರಂಭವಾಗುವ ಇಂಡಿಯಾ ಓಪನ್ ಸೂಪರ್ 750 ಟೂರ್ನಿಯಲ್ಲಿ ಕಣಕ್ಕೆ ಇಳಿಯಲಿದೆ.

ಆ್ಯಂಟನ್ಸೆನ್, ಯಂಗ್‌ಗೆ ಪ್ರಶಸ್ತಿ: ಡೆನ್ಮಾರ್ಕ್‌ನ ಆ್ಯಂಡರ್ಸ್ ಆ್ಯಂಟನ್ಸೆನ್ ಅವರು ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ 21–14, 21–13 ರಿಂದ ಚೀನಾದ ಶಿ ಯುಕಿ ಅವರನ್ನು ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ದಕ್ಷಿಣ ಕೊರಿಯಾದ ಆನ್ ಸೆ ಯಂಗ್ ಅವರು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು. ಅವರು ಫೈನಲ್‌ನಲ್ಲಿ 10–21, 21–10, 21–18 ರಿಂದ ತೈವಾನ್‌ನ ತೈ ತ್ಸು–ಯಿಂಗ್ ಅವರನ್ನು ಮಣಿಸಿದರು.

ಟೆನಿಸ್: ಒರೆಲ್ ಕಿಮ್ಹಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಡ್ಯ: ಇಸ್ರೇಲ್‌ನ ಒರೆಲ್ ಕಿಮ್ಹಿ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ಮಂಡ್ಯ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಫೈನಲ್ ಪಂದ್ಯದಲ್ಲಿ 3ನೇ ಶ್ರೇಯಾಂಕದ ಒರೆಲ್ ಕಿಮ್ಹಿ ನೆದರ್ಲೆಂಡ್ಸ್‌ನ ಜೆಲ್ಲೆ ಸೆಲ್ಸ್ ಅವರನ್ನು 6–2, 6–4 ನೇರ ಸೆಟ್‌ಗಳಿಂದ ಪರಾಭವಗೊಳಿಸಿ ತಮ್ಮ 3ನೇ ಐಟಿಎಫ್ ಪ್ರಶಸ್ತಿ ಬಾಚಿಕೊಂಡರು.

ಬಹುಮಾನದ ರೂಪವಾಗಿ ₹ 2.98 ಲಕ್ಷ ಮೊತ್ತದ ಚೆಕ್ ಜೊತೆಗೆ 25 ಎಟಿಪಿ ಪಾಯಿಂಟ್‌ಗಳನ್ನು ಕಿಮ್ಹಿ ಗಳಿಸಿಕೊಂಡರು. ರನ್ನರ್ ಅಪ್ ಆದ ಜೆಲ್ಲೆ ಸೆಲ್ಸ್ ₹ 1.75 ಲಕ್ಷ ಬಹುಮಾನ ಪಡೆದರು. ಜೊತೆಗೆ 16 ಎಟಿಪಿ ಪಾಯಿಂಟ್ ಗಳಿಸಿದರು.



ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದ ಒರೆಲ್ ಕಿಮ್ಹಿ ಟ್ರೋಫಿಯೊಂದಿಗೆ

ಪ್ರಬಲ ಪೈಪೋಟಿ: 2 ಗಂಟೆ 2 ನಿಮಿಷ ನಡೆದ ಹೋರಾಟದಲ್ಲಿ ಸೆಲ್ಸ್ ಆಕ್ರಮಣಕಾರಿ ಆಟದ ಮೂಲಕ ಗೆಲುವಿಗೆ ಪ್ರಯತ್ನಿಸಿದರೆ, ಕಿಮ್ಹಿ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಲೇ ಟ್ರೋಫಿಗೆ ಮುತ್ತಿಟ್ಟರು. ಮೊದಲ ಸೆಟ್‌ನ ಮೊದಲಿನ ನಾಲ್ಕೂ ಗೇಮ್‌ಗಳಲ್ಲಿ ಆಟಗಾರರಿಬ್ಬರೂ ತಮ್ಮ ಸರ್ವಿಸ್‌ಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. 5ನೇ ಗೇಮ್‌ನಲ್ಲಿ ಕಿಮ್ಹಿ ನೆದರ್ಲೆಂಡ್ಸ್ ಆಟಗಾರನ ಸರ್ವಿಸ್ ಮುರಿದರು. 7ನೇ ಆಟದಲ್ಲಿ ಮತ್ತೆ ಎದುರಾಳಿಯ ಸರ್ವಿಸ್ ಬ್ರೇಕ್ ಮಾಡಿದರು.

2ನೇ ಸೆಟ್‌ನಲ್ಲಿ ಇಬ್ಬರ ನಡುವೆ ಪ್ರಬಲ ಪೈಪೋಟಿ ಕಂಡುಬಂದಿತು. ಒಂದು ಹಂತದಲ್ಲಿ ಸೆಲ್ಸ್ 3–1ರ ಮುನ್ನಡೆ ಸಾಧಿಸಿದ್ದು, ನಂತರದ ಗೇಮ್‌ನಲ್ಲಿ ಸರ್ವಿಸ್ ಉಳಿಸಿಕೊಳ್ಳುವಲ್ಲಿ ವಿಫಲರಾದರು.

2ನೇ ಸೆಟ್ 4–4ರಲ್ಲಿ ಸಮಸ್ಥಿತಿಯ-ಲ್ಲಿದ್ದಾಗ 9ನೇ ಗೇಮ್‌ನಲ್ಲಿ 3 'ಗೇಮ್ ಪಾಯಿಂಟ್' ಉಳಿಸಿಕೊಂಡು ಕಿಮ್ಹಿ 5–4ರಿಂದ ಮುನ್ನಡೆ ಸಾಧಿಸಿದರು. ನಂತರ ಸರ್ವಿಸ್ ಉಳಿಸಿಕೊಂಡು ಗೆದ್ದರು.

ಮಹಿಳಾ ಟೆನಿಸ್: ರಶ್ಮಿಕಾಗೆ ಮುನ್ನಡೆ

ಬೆಂಗಳೂರು: ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ಇಲ್ಲಿನ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೂರ್ನಿಯ ಕ್ವಾಲಿಫೈಯರ್‌ನ ಎರಡನೇ ಸುತ್ತಿಗೆ ಮುನ್ನಡೆದರು. ಅವರು ರಷ್ಯಾದ ಎಕತ್ರಿನಾ ಯಾಶಿನಾ ವಿರುದ್ಧ 7-5, 7-6 (5) ರಿಂದ ಜಯ ಗಳಿಸಿದರು.

ಟೂರ್ನಿಯ ಪ್ರಧಾನ ಸುತ್ತಿನ ಸ್ಪರ್ಧೆಗಳು ಮಂಗಳವಾರ ಆರಂಭವಾಗಲಿದೆ. ಈ ಸುತ್ತಿಗೆ ಕ್ವಾಲಿಫೈಯರ್ ಸುತ್ತಿನಿಂದ ಎಂಟು ಆಟಗಾರ್ತಿಯರು ಸೋಮವಾರ ಸ್ಥಾನ ಖಚಿತಪಡಿಸಿ-ಕೊಳ್ಳಲಿದ್ದಾರೆ. ಝೀಲ್ ದೇಸಾಯಿ ಮತ್ತು ವೈದೇಹಿ ಚೌಧರಿ ಕ್ವಾಲಿಫೈಯರ್‌ನ ಎರಡನೇ ಸುತ್ತು ಪ್ರವೇಶಿಸಿದ ಭಾರತದ ಇತರ ಆಟಗಾರ್ತಿಯರು.

ಕ್ವಾಲಿಫೈಯರ್ ಸುತ್ತಿನ ಪಂದ್ಯಗಳ ಫಲಿತಾಂಶ: ಲಾಟ್ವಿಯಾದ ಡಯಾನಾ ಮಾರ್ಸಿಂಕೆವಿಕಾ 6–2, 6–1 ರಿಂದ ಭಾರತದ ಲಕ್ಷ್ಮಿ ಗೌಡ ವಿರುದ್ಧ; ಜಪಾನ್ ಮೇ ಯಮಗುಚಿ 6-2, 6-0ಯಿಂದ ಸ್ವದೇಶದ ಯುಕಿನಾ ಸೈಗೊ ವಿರುದ್ಧ; ಜಪಾನ್‌ನ ಸಾಕಿ ಇಮಾಮುರಾ 6-1, 6-2 ರಿಂದ ಚೀನಾ ತೈಪೆಯ ಯು-ಯುನ್ ಲಿ ವಿರುದ್ಧ; ಥಾಯ್ಲೆಂಡ್‌ನ ಪುನ್ನಿನ್ ಕೊವಾಪಿಟುಕ್ಟೆಡ್ 6-0, 6-3 ರಿಂದ ಡೆನ್ಮಾರ್ಕ್‌ನ ಎಲೆನಾ ಜಮ್ಮಿದಿ ವಿರುದ್ಧ; ಸ್ಲೋವಾಕಿಯಾದ ವಿಕ್ಟೋರಿಯಾ ಮೊರ್ವಯೋವಾ 6-2, 6-4 ರಿಂದ ಭಾರತದ ಆಕಾಂಕ್ಷಾ ದಿಲೀಪ್ ವಿರುದ್ಧ; ಭಾರತದ ಝೀಲ್ ದೇಸಾಯಿ 6-3, 6-0 ಯಿಂದ ಸ್ವದೇಶದ ಸೌಮ್ಯಾ ವಿರುದ್ಧ ಗೆಲುವು ಸಾಧಿಸಿದರು.

ಆಸ್ಟ್ರೇಲಿಯಾದ ಟೀನಾ ನಡಿನ್ ಸ್ಮಿತ್ 6-0, 6-1 ರಿಂದ ಭಾರತದ ಪ್ರತಿಭಾ ನಾರಾಯಣ ಪ್ರಸಾದ್ ಎದುರು; ಜಪಾನ್‌ನ ಮನ ಕವಾಮುರಾ 6-2, 6-4 ರಿಂದ ಭಾರತದ ವಂಶಿತಾ ಪಟಾನಿಯಾ ಎದುರು; ಜಪಾನ್‌ನ ನಹೋ ಸಾಟೊ 6-0, 6-0 ಯಿಂದ ಭಾರತದ ಶ್ರಾವ್ಯಾ ಶಿವಾನಿ ಎದುರು; ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ 7-5, 7-6 (5) ರಿಂದ ರಷ್ಯಾದ ಎಕತ್ರಿನಾ ಯಾಶಿನಾ ಎದುರು; ಭಾರತದ ವೈದೇಹಿ ಚೌಧರಿ 6–1, 6–1 ರಿಂದ ಸ್ವದೇಶದ ಕಾಶ್ವಿ ಸುನಿಲ್ ಎದುರು; ಜಪಾನ್‌ನ ರಿನಾ ಸೈಗೊ 6-4, 6-0 ಯಿಂದ ಭಾರತದ ಸ್ಮೃತಿ ಭಾಸಿನ್ ಎದುರು; ಜಪಾನ್‌ನ ಎರಿ ಶಿಮಿಜು 6-4, 6-1 ರಿಂದ ಭಾರತದ ಶರ್ಮದಾ ಬಾಲು ಎದುರು; ಜರ್ಮನಿಯ ಲೀನಾ ಪಾಪಡಕಿಸ್ 6-2, 7-5 ರಿಂದ ಭಾರತದ ವೈಷ್ಣವಿ ಅಡ್ಕರ್ ಎದುರು; ಥಾಯ್ಲೆಂಡ್‌ನ ಥಾಸಪೋರ್ನ್ ನಕ್ಲೊ 6–2, 6–0 ಯಿಂದ ಭಾರತದ ಪಾವನಿ ಪಾಠಕ್ ಎದುರು; ಜೆಕ್ ಗಣರಾಜ್ಯದ ಅನ್ನಾ ಸಿಸ್ಕೋವಾ 6-2, 6-1 ರಿಂದ ಭಾರತದ ಹುಮೇರಾ ಬಹರ್ಮಸ್ ಎದುರು ಜಯ ಗಳಿಸಿದರು.



ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ

ಮಾನವಜಿತ್ ಅನರ್ಹ: ಬೇಸರ

ನವದೆಹಲಿ (ಪಿಟಿಐ): ಕುವೈತ್‌ನಲ್ಲಿ ಈಚೆಗೆ ನಡೆದ ಏಷ್ಯಾ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಆಯೋಜಕರು ಟ್ರ್ಯಾಪ್ ಶೂಟರ್ ಮಾನವಜಿತ್ ಸಿಂಗ್ ಅವರನ್ನು ಅನರ್ಹಗೊಳಿಸಿರುವುದನ್ನು ರಾಷ್ಟ್ರೀಯ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ (ಎನ್‌ಆರ್‌ಎಐ) ವಿರೋಧಿಸಿದೆ.

'ಈ ಕ್ರಮವು ಪಕ್ಷಪಾತ ಧೋರಣೆಯಾಗಿದ್ದು, ಅನ್ಯಾಯವಾಗಿದೆ' ಎಂದು ಸಂಸ್ಥೆಯು ತೀವ್ರವಾಗಿ ಖಂಡಿಸಿದೆ.

ದೋಷಪೂರಿತ ಬಂದೂಕು ದಾಸ್ತಾನು ಕಾರಣದಿಂದಾಗಿ ಮಾಜಿ ವಿಶ್ವ ಚಾಂಪಿಯನ್ ಸಿಂಗ್ ಅವರನ್ನು ಸ್ಪರ್ಧೆಯಿಂದ ನಿಷೇಧಿಸುವಾಗ ಏಷ್ಯನ್ ಶೂಟಿಂಗ್ ಕಾನ್ಫೆಡರೇಶನ್ (ಎಎಸ್‌ಸಿ) ಉಲ್ಲೇಖಿಸಿದ ನಿಯಮಗಳು 'ಆಧಾರರಹಿತ' ಮತ್ತು 'ಕ್ಷುಲ್ಲಕ' ಎಂದು ಎನ್‌ಆರ್‌ಎಐ ಹೇಳಿದೆ.

ಮಾನವಜಿತ್ ಅವರಿಗೆ ಶನಿವಾರ ಸ್ಪರ್ಧಾಪೂರ್ವ ತರಬೇತಿ ಯಲ್ಲಿ ಭಾಗವಹಿಸಲು ಅವಕಾಶವಿರಲಿಲ್ಲ ಮತ್ತು ಭಾನುವಾರ ಅವರನ್ನು ಸ್ಪರ್ಧೆಯಿಂದ ಅನರ್ಹಗೊಳಿಸಲಾಯಿತು.

'ತಾಂತ್ರಿಕ ನಿರ್ದೇಶಕ ಅಬ್ದುಲ್ಲಾ ಹಮೀದಿ ರಾಜಕೀಯ ಮಾಡುತ್ತಿದ್ದಾರೆ' ಎಂದು ಮಾನವಜಿತ್ ಶನಿವಾರ ಆರೋಪಿಸಿದ್ದರು.

ಫೆ.21ರಿಂದ ಸಂತೋಷ್ ಟ್ರೋಫಿ ಅಂತಿಮ ಸುತ್ತು

ನವದೆಹಲಿ (ಪಿಟಿಐ): ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಅಂತಿಮ ಸುತ್ತು ಫೆಬ್ರವರಿ 21ರಂದು ಇಟಾನಗರದಲ್ಲಿ ಆರಂಭವಾಗಲಿದ್ದು, ಎಲ್ಲಾ ಪಂದ್ಯಗಳು ಗೋಲ್ಡನ್ ಜುಬಿಲಿ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಎಐಎಫ್‌ಎಫ್ ಭಾನುವಾರ ಪ್ರಕಟಿಸಿದೆ.

ಮಾರ್ಚ್ 9 ರಿಂದ ನಡೆಯಲಿರುವ 12 ತಂಡಗಳ ಟೂರ್ನಿಯಲ್ಲಿ ಆತಿಥೇಯ ಅರುಣಾಚಲ ಪ್ರದೇಶ ಹಾಗೂ ಕರ್ನಾಟಕ, ಮೇಘಾಲಯ ತಂಡಗಳು ನೇರ ಪ್ರವೇಶ ಪಡೆದಿವೆ.

ಗೋವಾ, ದೆಹಲಿ, ಮಣಿಪುರ, ಅಸ್ಸಾಂ, ಸರ್ವಿಸಸ್, ಮಹಾರಾಷ್ಟ್ರ, ಕೇರಳ, ಮಿಜೋರಾಂ ಮತ್ತು ರೈಲ್ವೆ ತಂಡಗಳು ಕಣದಲ್ಲಿರುವ ಇತರ ತಂಡಗಳಾಗಿವೆ.

ಅರುಣಾಚಲ ಪ್ರದೇಶ, ಮೇಘಾಲಯ, ಗೋವಾ, ಅಸ್ಸಾಂ, ಸರ್ವಿಸಸ್ ಮತ್ತು ಕೇರಳ ತಂಡಗಳು 'ಎ' ಗುಂಪಿನಲ್ಲಿ ಸ್ಥಾನ ಪಡೆದಿವೆ.

'ಬಿ' ಗುಂಪಿನಲ್ಲಿ ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಮಣಿಪುರ, ಮಿಜೋರಾಂ ಮತ್ತು ರೈಲ್ವೇಸ್ ತಂಡಗಳಿವೆ.

ಈ ಪಂದ್ಯದಲ್ಲಿ ಆಡುವ ಬೆಂಗಳೂರು ಬುಲ್ಸ್– ಬೆಂಗಾಲ್ ವಾರಿಯರ್ಸ್

ಪ್ರೊ ಕಬಡ್ಡಿ ಲೀಗ್‌ಗೆ ಸಾವಿರ ಪಂದ್ಯದ ಸಂಭ್ರಮ

• ನಾಗೇಶ್ ಶೆಣೈ

ಜೈಪುರ: ಹತ್ತನೇ ಋತುವನ್ನು ಕಾಣುತ್ತಿರುವ ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಇಂದು ಪ್ರಮುಖ ಮೈಲಿಗಲ್ಲು ತಲುಪಲಿದೆ. ಲೀಗ್‌ನ ಸಾವಿರನೇ ಪಂದ್ಯ ಸೋಮವಾರ ನಡೆಯಲಿದ್ದು, ಇಲ್ಲಿನ ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುವ ದಿನದ ಈ ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್, ಬೆಂಗಾಲ್ ವಾರಿಯರ್ಸ್ ವಿರುದ್ಧ ಆಡಲಿರುವುದು ವಿಶೇಷ.

'ಇದೊಂದು ಕನಸಿನಂತೆ ಕಾಣುತ್ತಿದೆ. ಹತ್ತು ವರ್ಷಗಳ ಹಿಂದೆ (2014) ಲೀಗ್ ಈ ಮಟ್ಟಕ್ಕೇರುತ್ತದೆ ಎಂಬುದನ್ನು ಊಹಿಸಿಯೇ ಇರಲಿಲ್ಲ. ಇದು ಹೆಮ್ಮೆಯ ವಿಷಯ' ಎಂದು ಪ್ರೊ ಕಬಡ್ಡಿ ಲೀಗ್‌ನ ತಾಂತ್ರಿಕ ನಿರ್ದೇಶಕ ಇ.ಪ್ರಸಾದ್ ರಾವ್ ಅವರು ಸಂಭ್ರಮದಿಂದ ಹೇಳಿದರು.

'ಲೀಗ್ ಆರಂಭಿಸಿದಾಗ ಜನರು ಸ್ವೀಕರಿಸುತ್ತಾರೆಯೇ ಎಂಬ ಅಳುಕು ಇತ್ತು. ಕಬಡ್ಡಿ ನಮ್ಮ ಜನಪ್ರಿಯ ಆಟ. ಆದರೆ ಆಗಲೇ ಇತರ ಕ್ರೀಡೆಗಳಲ್ಲಿ ಮೂರು– ನಾಲ್ಕು ಲೀಗ್‌ಗಳು ಆರಂಭವಾಗಿ ಕೆಲವು ವರ್ಷಗಳಾಗಿ-ದ್ದವು. ಹೀಗಾಗಿ ಇದು ಸವಾಲಾಗಿತ್ತು. ಆದರೆ ಕೆಲವು ಬದಲಾವಣೆಗಳೊ-ಡನೆ ಆರಂಭವಾದ ಲೀಗ್ ಅನ್ನು ಜನರು ಸ್ವೀಕರಿಸಿದರು. ಇದರ ಶ್ರೇಯ ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಮತ್ತು ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್‌ಗೆ ಸಲ್ಲಬೇಕು' ಎಂದು ಅವರು ಅಭಿಪ್ರಾಯಪಟ್ಟರು.



ಇ. ಪ್ರಸಾದ್ ರಾವ್

'ಮಣ್ಣಿನ ಅಂಕಣದಿಂದ ಮ್ಯಾಟ್ ಮೇಲೆ ಕಬಡ್ಡಿ ನಡೆಯಿತು. ರೈಡ್‌ಗೆ ಕಾಲಾವಧಿ ನಿಗದಿ ಮಾಡಿದೆವು. ಡು ಆರ್ ಡೈ (ಮಾಡು– ಮಡಿ) ರೈಡ್ ಕಡ್ಡಾಯಗೊಳಿಸಿದೆವು. ಜನಪ್ರಿಯಗೊಳಿಸಲು ನಿಯಮಗಳನ್ನು ಬದಲಾಯಿಸಿದೆವು. ಈ ಲೀಗ್ ಕಬಡ್ಡಿಯ ಅತಿ ದೊಡ್ಡ ಪ್ರಯೋಗಾಲಯ' ಎಂದು ಅವರು ವಿವರಿಸಿದರು.

ಮುಂದೆಯೂ ಬದಲಾವಣೆಗಳು ಇರಲಿವೆ. ಮುಖ್ಯವಾಗಿ ಟಚ್ ಪಾಯಿಂಟ್, ಗೆರೆಯ ನಿರ್ಣಯ ಕುರಿತು ಕ್ರಿಕೆಟ್‌ನ ಮಾದರಿಯಲ್ಲಿ ತಂತ್ರಜ್ಞಾನದ ನೆರವು ಪಡೆಯಲಾಗುವುದು. ಪಂದ್ಯಗಳು ಟೈ ಆದಲ್ಲಿ ಟೈಬ್ರೇಕ್ ಅಳವಡಿಸುವ ವಿಚಾರದಲ್ಲೂ ಚರ್ಚೆಗಳು ನಡೆದಿವೆ. ಸಲಹೆಗಳನ್ನು ಪಡೆಯುತ್ತಿದ್ದೇವೆ' ಎಂದು ಪ್ರಸಾದ್ ರಾವ್ ಮಾಧ್ಯಮ ಸಂವಾದದಲ್ಲಿ ಹೇಳಿದರು.

ಗೆಲ್ಲುವ ತವಕ: 'ಬುಲ್ಸ್ ಸಾವಿರನೇ ಪಂದ್ಯ ಆಡುತ್ತಿರುವುದು ಹೆಮ್ಮೆ ಮೂಡಿಸಿದೆ. ನಾವೆಲ್ಲ ಈ ಪಂದ್ಯ ಗೆಲ್ಲಲು ತವಕದಿಂದ ಇದ್ದೇವೆ. ಹಿಂದೆ ಮಾಡಿದ ತಪ್ಪುಗಳನ್ನು ಮತ್ತೆ ಮಾಡುವುದಿಲ್ಲ' ಎಂದು ಬೆಂಗಳೂರು ಬುಲ್ಸ್ ನಾಯಕ ಸೌರಭ್ ನಂದಲ್ ವಿಶ್ವಾಸದಿಂದ ಹೇಳಿದರು.

ಬುಲ್ಸ್ ಇದುವರೆಗಿನ ಬಹುತೇಕ ಎಲ್ಲಾ ಪಂದ್ಯಗಳನ್ನು ಗೆದ್ದಿದ್ದು, ಸೋತಿದ್ದು ಎರಡೂ ಕಡಿಮೆ ಅಂತರದಿಂದ. ಏಕೆ ಹೀಗೆ ಎಂಬ ಪ್ರಶ್ನೆಗೆ, 'ಕೆಲವೊಮ್ಮೆ ಅದೃಷ್ಟದ ಬೆಂಬಲವೂ ಬೇಕಾಗುತ್ತದೆ. ನಾವು ಚೆನ್ನಾಗಿ ಆಡಿದರೂ ಕಡೆಗಳಿಗೆಯಲ್ಲಿ ಸಣ್ಣ ತಪ್ಪುಗಳಾಗುತ್ತವೆ. ಸುರ್ಜಿತ್ ಸಿಂಗ್, ಕೆಲದಿನಗಳ ಹಿಂದೆ ಟ್ಯಾಕ್ಲಿಂಗ್‌ನಿಂದಲೇ ಕೊನೆಗಳಿಗೆಯಲ್ಲಿ ಪಂದ್ಯವನ್ನು ಗೆಲ್ಲಿಸಿದ್ದು ಇದೆ' ಎಂದು ಅವರು ಹೇಳಿದರು.

ರಕ್ಷಣೆಯಲ್ಲಿ ಹಿರಿಯ ಆಟಗಾರ ಸುರ್ಜಿತ್ ಅವರಿಗೆ ಸೂಕ್ತ ಬೆಂಬಲ ಸಿಗುತ್ತಿಲ್ಲ ಎಂದು ಒಪ್ಪಿಕೊಂಡ ಅವರು, 'ನಾನೂ ಸೇರಿದಂತೆ ಉಳಿದವರು (ರಣ್ ಸಿಂಗ್, ಅಮನ್) ಲಯ ಕಂಡುಕೊಳ್ಳುವ ವಿಶ್ವಾಸವಿದೆ' ಎಂದರು. 12 ಪಂದ್ಯಗಳಿಂದ 31 ಪಾಯಿಂಟ್ಸ್ ಕಲೆಹಾಕಿರುವ ಬುಲ್ಸ್ ಸದ್ಯ ಎಂಟನೇ ಸ್ಥಾನದಲ್ಲಿದೆ. ಐದು ಗೆದ್ದಿದೆ. ಏಳು ಸೋತಿದೆ.

ಪೈರೇಟ್ಸ್– ದಬಂಗ್ ಪಂದ್ಯ ಟೈ

ಜೈಪುರ: ಪ್ರೊ ಕಬಡ್ಡಿ ಲೀಗ್‌ನ ರೋಚಕ ಪಂದ್ಯದಲ್ಲಿ ಕೊನೆ-ಗಳಿಗೆಯಲ್ಲಿ ಹಿನ್ನಡೆಯಿಂದ ಪುಟಿದೆದ್ದ ಪಟ್ನಾ ಪೈರೇಟ್ಸ್ ತಂಡ 39–39 ರಿಂದ ದಬಂಗ್ ಡೆಲ್ಲಿ ಜೊತೆ ಟೈ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಪಟ್ನಾ ತಂಡದ ರೈಡರ್ ಸಚಿನ್ ಕೊನೆಯ ಐದು ನಿಮಿಷಗಳಲ್ಲಿ ಗಳಿಸಿದ ಆರು ಪಾಯಿಂಟ್‌ಗಳು ಇದಕ್ಕೆ ಕಾರಣವಾಯಿತು.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಲೀಗ್‌ನ (ಇದುವರೆಗೆ ಪಿಕೆಎಲ್‌ನ 999ನೇ) ಪಂದ್ಯದಲ್ಲಿ ಡೆಲ್ಲಿ ತಂಡ ವಿರಾಮದ ವೇಳೆಗೆ 20–14 ಪಾಯಿಂಟ್‌ಗಳಿಂದ ಮುಂದಿತ್ತು. ಡೆಲ್ಲಿ ಪರ ರೈಡರ್ ಆಶು ಮಲಿಕ್ 14 ಪಾಯಿಂಟ್ಸ್ ಗಳಿಸಿ ಮಿಂಚಿದರು. ಪಟ್ನಾ ಪರ ಮಂಜೀತ್ ಮತ್ತು ಸಚಿನ್ 'ಸೂಪರ್ ಟೆನ್' (ತಲಾ ಹತ್ತು ಪಾಯಿಂಟ್ಸ್) ಗಳಿಸಿದರು. ಐದು ನಿಮಿಷ ಉಳಿದಿದ್ದಾಗ ಡೆಲ್ಲಿ 37–29 ಪಾಯಿಂಟ್‌ಗಳಿಂದ ಮುಂದಿತ್ತು. ಆದರೆ ನಂತರ ಒಂದು ಬಾರಿ ಆಲೌಟ್ ಆಯಿತು. ಡೆಲ್ಲಿ ತಂಡ 12 ಪಂದ್ಯಗಳಿಂದ 43 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನದಲ್ಲಿ ಮುಂದುವರಿಯಿತು. ಡೆಲ್ಲಿಗೆ ಇದು ಎರಡನೇ ಟೈ. ಪಟ್ನಾ ತಂಡ ಎಂಟನೇ ಸ್ಥಾನದಲ್ಲಿದೆ.

ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡ 36–31 ಪಾಯಿಂಟ್‌ಗಳಿಂದ (ವಿರಾಮ: 22–12) ತಮಿಳ್ ತಲೈವಾಸ್ ತಂಡವನ್ನು ಸೋಲಿಸಿತು. ಸ್ಟೀಲರ್ಸ್ ಒಟ್ಟು 39 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನಕ್ಕೆ ಏರಿತು.

ವಿನಯ್ ವಿಜೇತ ತಂಡದ ಪರ ಸೂಪರ್ ಟೆನ್ (10 ಅಂಕ) ಗಳಿಸಿದರು. ರಣಜಿತ್ ಚಂದ್ರನ್ ಮಧ್ಯಂತರಕ್ಕೆ ಮೊದಲು ಗಾಯಾಳಾಗಿ ನಿರ್ಗಮಿಸುವ ಮೊದಲು ಏಳು ಪಾಯಿಂಟ್ಸ್ ಗಳಿಸಿದರು. ತಲೈವಾಸ್ ಪರ ರೈಡರ್ ಅಜಿಂಕ್ಯ ಪವಾರ್ (6) ಮತ್ತು ರಕ್ಷಣೆ ವಿಭಾಗದಲ್ಲಿ ಸಾಗರ್ ಐದು ಪಾಯಿಂಟ್ಸ್ ಗಳಿಸಿದರು.

'ಅಪಘಾತ: ಪರಿಹಾರ ಮೊತ್ತ ಪ್ರತಿವರ್ಷವೂ ಹೆಚ್ಚಿಸಬಹುದೇ?'

ನವದೆಹಲಿ (ಪಿಟಿಐ): ಅಪಘಾತ ಮಾಡಿ ಪರಾರಿಯಾದ ಪ್ರಕರಣಗಳ-ಲ್ಲಿ, ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ ನೀಡುವ ಪರಿಹಾರದ ಮೊತ್ತವನ್ನು ಪ್ರತಿವರ್ಷವೂ ಹೆಚ್ಚಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಈ ವಿಚಾರವಾಗಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ತಿಳಿಸಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಏಪ್ರಿಲ್ 22ಕ್ಕೆ ಮುಂದೂಡಿದೆ.

ಅಪಘಾತ ನಡೆಸಿ ಪರಾರಿಯಾದ ಪ್ರಕರಣಗಳಲ್ಲಿ ಗಂಭೀರವಾಗಿ ಗಾಯಗೊಂಡವರಿಗೆ ₹50 ಸಾವಿರ ಹಾಗೂ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ₹2 ಲಕ್ಷ ಅಥವಾ ಕೇಂದ್ರ ಸರ್ಕಾರ ನಿರ್ಧರಿಸುವ ಇನ್ನೂ ಹೆಚ್ಚಿನ ಮೊತ್ತವನ್ನು ಪರಿಹಾರವಾಗಿ ನೀಡಬೇಕು ಎಂಬ ಅಂಶವು ಮೋಟಾರು ವಾಹನ ಕಾಯ್ದೆ –1988ರಲ್ಲಿ ಇದೆ ಎಂದು ಹೇಳಿದೆ.

ಇಂತಹ ಪ್ರಕರಣಗಳ ಸಂತ್ರಸ್ತರಿಗೆ ಈ ವಿಚಾರವನ್ನು ತಿಳಿಸುವ ಕೆಲಸವನ್ನು ಪೊಲೀಸರು ಮಾಡಬೇಕು ಎಂದು ಕೋರ್ಟ್ ಸೂಚಿಸಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೀಡಿರುವ ಮಾಹಿತಿ ಪ್ರಕಾರ 2022ರಲ್ಲಿ ಇಂತಹ 67,387 ಪ್ರಕರಣಗಳು ವರದಿಯಾಗಿವೆ. 2016ರಲ್ಲಿ ಇದು 55,942 ಆಗಿತ್ತು.

ಅಪಘಾತ ನಡೆಸಿ ಪರಾರಿಯಾದ ಪ್ರಕರಣಗಳ ಸಂಖ್ಯೆ ಹಾಗೂ ಪರಿಹಾರ ಕೋರಿ ದಾಖಲಾದ ಪ್ರಕರಣಗಳ ಸಂಖ್ಯೆಯನ್ನು ಹೋಲಿಕೆ ಮಾಡಿ ನೋಡಿದರೆ, ಪರಿಹಾರದ ಪ್ರಯೋ-ಜನವನ್ನು ಪಡೆದುಕೊಂಡವರ ಸಂಖ್ಯೆ ಕಡಿಮೆ ಎಂಬುದು ಗೊತ್ತಾಗುತ್ತದೆ ಎಂದು ಪೀಠ ಹೇಳಿದೆ. ಪರಿಹಾರ ನೀಡುವ ವ್ಯವಸ್ಥೆ ಇದೆ ಎಂಬುದು ಸಂತ್ರಸ್ತರಿಗೆ ಗೊತ್ತಿಲ್ಲದಿರುವುದು ಕೂಡ ಇದಕ್ಕೆ ಒಂದು ಕಾರಣವಾಗಿರಬಹುದು ಎಂದು ಪೀಠ ಹೇಳಿದೆ.

ಪರಿಹಾರ ನೀಡುವ ವ್ಯವಸ್ಥೆಯು ಪರಿ-ಣಾಮಕಾರಿಯಾಗಿ ಜಾರಿಗೆ ಬರಬೇಕು ಎಂಬ ಕೋರಿಕೆ ಇರುವ ಅರ್ಜಿಗಳ ವಿಚಾರಣೆಯನ್ನು ಕೋರ್ಟ್ ನಡೆಸುತ್ತಿದೆ.



ದೆಹಲಿಯಲ್ಲಿ ಭಾನುವಾರ ನಡೆದ ಪೊಂಗಲ್ ಹಬ್ಬದ ಆಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಏಕತೆ ಪ್ರತಿಬಿಂಬಿಸುವ ಪೊಂಗಲ್'

ಚೆನ್ನೈ/ದೆಹಲಿ (ಪಿಟಿಐ): 'ಪೊಂಗಲ್ ಹಬ್ಬವು 'ಏಕ ಭಾರತ–ಶ್ರೇಷ್ಠ ಭಾರತ'ದ ರಾಷ್ಟ್ರೀಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಈ ಏಕತೆಯ ಭಾವನೆಯು 2047ರ ವೇಳೆಗೆ ವಿಕಸಿತ ಭಾರತವನ್ನು ನಿರ್ಮಿಸಲು ದೊಡ್ಡ ಶಕ್ತಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕೇಂದ್ರ ಸಚಿವ ಎಲ್. ಮುರುಗನ್ ಅವರ ದೆಹಲಿ ನಿವಾಸದಲ್ಲಿ ನಡೆದ ಪೊಂಗಲ್ ಆಚರಣೆಯಲ್ಲಿ ಮಾತನಾಡಿದ ಮೋದಿ, 'ತಮಿಳುನಾಡಿನ ಪ್ರತಿ ಮನೆಯಲ್ಲೂ ಹಬ್ಬದ ಸಂಭ್ರಮ ಮನೆ ಮಾಡಿದೆ. ಹಬ್ಬವು ಎಲ್ಲರ ಜೀವನದಲ್ಲಿ ಸಂತೋಷ, ಸಮೃದ್ಧಿ, ನೆಮ್ಮದಿಯನ್ನು ತರಲಿ' ಎಂದು ಹಾರೈಸಿದರು.

ರಾಷ್ಟ್ರದ ಏಕತೆಯನ್ನು ಬಲಪಡಿಸುವ ಸಂಕಲ್ಪಕ್ಕೆ 'ನಮ್ಮನ್ನು ನಾವು ಸಮರ್ಪಿಸಿಕೊಳ್ಳೋಣ' ಎಂದರು. 'ಹೊಸಬೆಳೆಯನ್ನು ದೇವರಿಗೆ ಅರ್ಪಿಸುವುದು ಪೊಂಗಲ್ ಹಬ್ಬದ ಸಂಪ್ರದಾಯ. ಭಾರತದಲ್ಲಿ ಆಚರಿಸುವ ಪ್ರತಿಯೊಂದು ಹಬ್ಬವು ಬೆಳೆ ಮತ್ತು ರೈತರಿಗೆ ಸಂಬಂಧಿಸಿವೆ' ಎಂದರು.

ಪಾಕ್: ಪಿಟಿಐ 'ಕೈ ಜಾರಿದ ಬ್ಯಾಟ್'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷದ ಸಾಂಸ್ಥಿಕ ಚುನಾವಣೆಗಳನ್ನು ಅಸಂವಿಧಾನಿಕ ಎಂದು ಘೋಷಿಸಿದ ಮತ್ತು 'ಕ್ರಿಕೆಟ್ ಬ್ಯಾಟ್'ನ ಚಿಹ್ನೆಯನ್ನು ರದ್ದುಗೊಳಿಸಿದ ಚುನಾವಣಾ ಆಯೋಗದ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಪೇಶಾವರ ಹೈಕೋರ್ಟ್‌ನ ಇಬ್ಬರು ಸದಸ್ಯರ ನ್ಯಾಯಪೀಠವು ಬುಧವಾರದಂದು ಚುನಾವಣಾ ಆಯೋಗ ನೀಡಿದ್ದ ಆದೇಶವನ್ನು ರದ್ದುಗೊಳಿಸಿ, ಪಿಟಿಐಗೆ ಬ್ಯಾಟ್ ಚಿಹ್ನೆಯನ್ನು ಮರಳಿಸಿತ್ತು. ಹೈಕೋರ್ಟ್‌ನ ತೀರ್ಪನ್ನು ಆಯೋಗವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ತ್ರಿಸದಸ್ಯ ಪೀಠವು ಶನಿವಾರ ತಡ ರಾತ್ರಿ ತೀರ್ಪು ಪ್ರಕಟಿಸಿದೆ.

'ಪಿಟಿಐ, ಅದರ ಕಾರ್ಯಕರ್ತರ ರಾಜಕೀಯ ಹಕ್ಕುಗಳನ್ನು ಕಸಿದುಕೊಳ್ಳ-ಲಾಗಿದೆ' ಎಂದು ಪಕ್ಷದ ಅಧ್ಯಕ್ಷ ಘೋರ್ ಖಾನ್ ತೀರ್ಪಿಗೆ ಪ್ರತಿಕ್ರಿಯಿಸಿದ್ದಾರೆ.

'ಈ ತೀರ್ಪಿನಿಂದಾಗಿ ಪಿಟಿಐ ಅಭ್ಯರ್ಥಿಗಳು ಪಕ್ಷದ ಚಿಹ್ನೆಯಿಲ್ಲದೆ ಪಕ್ಷೇತರರಾಗಿ ಸ್ಪರ್ಧಿಸಬೇಕಿದೆ. ಪಕ್ಷದ ಚಿಹ್ನೆ ರದ್ದಾಗಿರಬಹುದು. ಆದರೆ, ಪಕ್ಷವೂ ಇನ್ನೂ ನೋಂದಾಯಿತ ಘಟಕವಾಗಿದೆ. ನಮ್ಮ ಎಲ್ಲಾ ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧಿಸಲಿದ್ದಾರೆ' ಎಂದು ಪಿಟಿಐನ ಅಲಿ ಜಾಫರ್ ಹೇಳಿದ್ದಾರೆ.

ಇಂದಿನಿಂದ 'ಡಬ್ಲ್ಯುಇಎಫ್' ಸಭೆ

ದಾವೋಸ್ (ಪಿಟಿಐ): ದಾವೋಸ್‌ನಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ವಾರ್ಷಿಕ ಸಭೆ ನಡೆಯಲಿದೆ. ಇದಕ್ಕಾಗಿ ಸ್ವಿಟ್ಜರ್‌ಲೆಂಡ್ ಸಜ್ಜಾಗಿದೆ.

ಹವಾಮಾನ ವೈಪರೀತ್ಯ ಸೇರಿ ಹಲವು ಮಹತ್ವದ ವಿಷಯಗಳು ಚರ್ಚೆ ಆಗಲಿವೆ. ಜಗತ್ತನಾದ್ಯಂತದ 2,800ಕ್ಕೂ ಹೆಚ್ಚು ನಾಯಕರು ಐದು ದಿನಗಳ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಉಕ್ರೇನ್ ಶಾಂತಿಯ ಕುರಿತ ಚರ್ಚೆ ಸಭೆಯ ಪ್ರಮುಖಾಂಶವಾಗಿದೆ.

ಸಭೆಯ ವಿಧ್ಯುಕ್ತ ಆರಂಭಕ್ಕೂ ಮುನ್ನಾದಿನದಂದು ದಾವೋಸ್‌ನಲ್ಲಿ ಮೊದಲ ಬಾರಿಗೆ 90 ರಾಷ್ಟ್ರಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆ ನಡೆಯಿತು.

ಟಿ20 ಕ್ರಿಕೆಟ್: ಅಕ್ಷರ್ ಪಟೇಲ್ ಮೋಡಿ, ಯಶಸ್ವಿ, ಶಿವಂ ಅಬ್ಬರದ ಬ್ಯಾಟಿಂಗ್

ಭಾರತ ತಂಡದ ಮಡಿಲಿಗೆ ಸರಣಿ

ಇಂದೋರ್ (ಪಿಟಿಐ): ಯಶಸ್ವಿ ಜೈಸ್ವಾಲ್ ಹಾಗೂ ಶಿವಂ ದುಬೆ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು ಅಫ್ಗಾನಿಸ್ತಾನ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ತನ್ನದಾಗಿಸಿಕೊಂಡಿತು.

ಹೋಳ್ಕರ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆತಿಥೇಯ ಬಳಗವು 6 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ಬೌಲರ್‌ಗಳ ಪರಿಣಾಮಕಾರಿ ದಾಳಿಯನ್ನು ಎದುರಿಸಿ ನಿಂತ ಗುಲ್ಬದೀನ್ ನೈಬ್ (57; 35ಎ, 4X5, 6X3) ಅರ್ಧಶತಕದ ಬಲದಿಂದ ಅಫ್ಗನ್ ತಂಡವು 20 ಓವರ್‌ಗಳಲ್ಲಿ 172 ರನ್ ಗಳಿಸಿತು. ಅರ್ಷದೀಪ್ ಸಿಂಗ್ ಮೂರು ವಿಕೆಟ್ ಗಳಿಸಿದರು.

ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಅಗ್ರ ಕ್ರಮಾಂಕದ ಇಬ್ಬರು ಬ್ಯಾಟರ್‌ಗಳ ವಿಕೆಟ್‌ಗಳನ್ನು ಗಳಿಸಿದರು. ಅಫ್ಗನ್ ನಾಯಕ ಇಬ್ರಾಹಿಂ ಝದ್ರಾನ್ (8 ರನ್) ಮತ್ತು ಗುಲ್ಬದೀನ್ ಅವರು ಅಕ್ಷರ್ ಮೋಡಿಗೆ ಶರಣಾದರು.

ಗುರಿ ಬೆನ್ನಟ್ಟಿದ ಭಾರತ ತಂಡವು ಆರಂಭಿಕ ಬ್ಯಾಟರ್ ಯಶಸ್ವಿ (68; 34ಎ, 4X5, 6X6) ಮತ್ತು ಶಿವಂ (ಔಟಾಗದೆ 63, 32ಎ, 4X5, 6X4) ಅವರ ಅಟದ ಬಲದಿಂದ 15.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 173 ರನ್ ಗಳಿಸಿತು.



ಭಾರತ ತಂಡದ ಶಿವಂ ದುಬೆ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಹೋರಾಟದ ಮೊತ್ತ ಸಾಧಿಸುವ ಹಾದಿಯ ಆರಂಭದಲ್ಲಿಯೇ ಭಾರತ ತಂಡವು ಆಘಾತ ಅನುಭವಿಸಿತ್ತು. ಮೊದಲ ಓವರ್‌ನಲ್ಲಿ ಫಜಲ್ ಹಕ್ ಫಾರೂಕಿ ಎಸೆತದ ವೇಗವನ್ನು ಅಂದಾಜಿಸುವಲ್ಲಿ ವಿಫಲರಾದ ನಾಯಕ ರೋಹಿತ್ ಕ್ಲೀನ್‌ಬೌಲ್ಡ್ ಆದರು. ಸತತ ಎರಡನೇ ಪಂದ್ಯದಲ್ಲಿಯೂ ಅವರು ಖಾತೆ ತೆರೆಯಲಿಲ್ಲ.

ವಿರಾಟ್ ಕೊಹ್ಲಿ ಆರಂಭದಿಂದಲೇ ಆಕ್ರಮಣಶೀಲರಾದರು. 16 ಎಸೆತಗಳಲ್ಲಿ 29 ರನ್ ಗಳಿಸಿದರು. ಅದರಲ್ಲಿ ಐದು ಬೌಂಡರಿಗಳಿದ್ದವು. ಆರನೇ ಓವರ್‌ನಲ್ಲಿ ನವೀನ್ ಉಲ್ ಹಕ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಕೊಹ್ಲಿ ಅವರು ಇಬ್ರಾಹಿಂಗೆ ಕ್ಯಾಚಿತ್ತರು.

ಇಬ್ಬರೂ ಅನುಭವಿಗಳು ಪೆವಿಲಿಯನ್ ಸೇರಿದಾಗ ಕ್ರೀಸ್‌ನಲ್ಲಿ ಯುವ ಆಟಗಾರ ಯಶಸ್ವಿ ಮಾತ್ರ ಎದೆಗುಂದಲಿಲ್ಲ. ಅವರೊಂದಿಗೆ ಜೊತೆಗೂಡಿದ ಶಿವಂ ಕೂಡ ಬೀಸಾಟ ಆರಂಭಿಸಿದರು. ಮೂರನೇ ಓವರ್‌ನಲ್ಲಿ ಯಶಸ್ವಿಗೆ ಒಂದು 'ಜೀವದಾನ' ಸಿಕ್ಕಿತ್ತು. ಅದರ ಲಾಭ ಪಡೆದ ಅವರು ಶಿವಂ ಜೊತೆಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. 13ನೇ ಓವರ್‌ನಲ್ಲಿ ಯಶಸ್ವಿ ಔಟಾದರು.

ಇನಿಂಗ್ಸ್‌ನ ಸಂಪೂರ್ಣ ಹೊಣೆ ಹೊತ್ತುಕೊಂಡ ಶಿವಂ ತಂಡವನ್ನು ಜಯದ ಗಡಿ ಮುಟ್ಟಿಸುವಲ್ಲಿ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರ್: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 172 (ಗುಲ್ಬದೀನ್ ನೈಬ್ 57, ನಜೀಬುಲ್ಲಾ 23, ಕರೀಂ ಜನತ್ 20, ಮುಜೀಬ್ 21, ಅರ್ಷದೀಪ್ ಸಿಂಗ್ 32ಕ್ಕೆ3, ರವಿ ಬಿಷ್ಣೋಯಿ 39ಕ್ಕೆ2, ಅಕ್ಷರ್ ಪಟೇಲ್ 17ಕ್ಕೆ2) ಭಾರತ: 15.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 173 (ಯಶಸ್ವಿ ಜೈಸ್ವಾಲ್ 68, ವಿರಾಟ್ ಕೊಹ್ಲಿ 29, ಶಿವಂ ದುಬೆ ಔಟಾಗದೆ 63, ಕರೀಂ ಜನತ್ 13ಕ್ಕೆ2)

ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ ಹಾಗೂ 2–0ಯಿಂದ ಸರಣಿ ಮುನ್ನಡೆ. ಪಂದ್ಯಶ್ರೇಷ್ಠ: ಅಕ್ಷರ್ ಪಟೇಲ್.

ಕೂಚ್ ಬಿಹಾರ್ ಟ್ರೋಫಿ: ಕರ್ನಾಟಕಕ್ಕೆ ಭಾರಿ ಮುನ್ನಡೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಆರಂಭಿಕ ಆಟಗಾರ ಪ್ರಖರ್ ಚತುರ್ವೇದಿ (ಔಟಾಗದೇ 256:451 ಎಸೆತ, 4x20, 6x1) ದ್ವಿಶತಕ ಹಾಗೂ ಹರ್ಷಿಲ್ ಧರ್ಮಾನಿ (169 , 228 ಎಸೆತ, 4x19, 6x5) ಅವರ ಶತಕದ ಬಲದಿಂದ ಕರ್ನಾಟಕ ತಂಡವು ಇಲ್ಲಿ ಮುಂಬೈ ವಿರುದ್ಧ ನಡೆದಿರುವ ಕೂಚ್ ಬಿಹಾರ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಉತ್ತಮ ಮುನ್ನಡೆ ಗಳಿಸಿದೆ.

ಪಂದ್ಯದ ಮೂರನೇ ದಿನವಾದ ಭಾನುವಾರದ ಅಂತ್ಯಕ್ಕೆ ಕರ್ನಾಟಕ ತಂಡ 6 ವಿಕೆಟ್ ನಷ್ಟಕ್ಕೆ 626 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದ್ದು, 246 ರನ್‌ಗಳ ಮುನ್ನಡೆ ಸಾಧಿಸಿದೆ.

ಪ್ರಖರ್ ಚತುರ್ವೇದಿ (110) ಹಾಗೂ ಹರ್ಷಿಲ್ ಧರ್ಮಾನಿ (102) ಶನಿವಾರ ಶತಕ ಗಳಿಸಿದ್ದರು. ಭಾನುವಾರ ಆಟ ಮುಂದುವರಿಸಿದ ಈ ಇಬ್ಬರೂ, ಒಟ್ಟು 290 ರನ್‌ಗಳ ಜೊತೆಯಾಟದಲ್ಲಿ ಪಾಲ್ಗೊಂಡರು.

ನಾಯಕ ಧೀರಜ್ ಗೌಡ 7 ರನ್ (17 ಎಸೆತ, 4x1) ಹೆಚ್ಚು ಹೊತ್ತು ನಿಲ್ಲದೆ ನೂತನ್ ಬೌಲಿಂಗ್‌ನಲ್ಲಿ ಪ್ರೇಮ್ ದೇವಕರ್‌ಗೆ ಔಟಾದರು. ದ್ವಿಶತಕ ದಾಖಲಿಸಿ ಆಟ ಮುಂದುವರಿಸಿರುವ ಪ್ರಖರ್ ಚತುರ್ವೇದಿ ಅವರಿಗೆ ದಿನದ ಅಂತ್ಯಕ್ಕೆ ಹಾರ್ದಿಕ್ ರಾಜ್ ಔಟಾಗದೇ 5 (24 ಎಸೆತ, 4x1) ಉತ್ತಮ ಸಾಥ್ ನೀಡಿದರು. ಮುಂಬೈ ತಂಡದ ಪರ ಮನನ್ ಭಟ್ 121 ರನ್ ನೀಡಿ 2 ವಿಕೆಟ್ ಹಾಗೂ ನೂತನ್ 22 ರನ್ ನೀಡಿ 2 ವಿಕೆಟ್ ಪಡೆದರು. ಪ್ರೇಮ್ ದೇವಕರ್ ಹಾಗೂ ಆಕಾಶ್ ಪವಾರ್ ತಲಾ ಒಂದು ವಿಕೆಟ್ ಪಡೆದರು. ಮೊದಲು ಬ್ಯಾಟಿಂಗ್ ಮಾಡಿರುವ ಮುಂಬೈ 380 ರನ್ ಗಳಿಸಿದೆ.



ಪ್ರಖರ್ ಚತುರ್ವೇದಿ



ಗೋಲು ದಾಖಲಿಸಿದ ಸಂಭ್ರಮದಲ್ಲಿ ಭಾರತದ ವನಿತೆಯರು –ಪಿಟಿಐ ಚಿತ್ರ

ಹಾಕಿ: ಭಾರತಕ್ಕೆ ಮಣಿದ ಕಿವೀಸ್

ರಾಂಚಿ (ಪಿಟಿಐ): ಉತ್ಸಾಹಭರಿತ ಆಟವಾಡಿದ ಭಾರತದ ವನಿತೆಯರು ಭಾನುವಾರ ನಡೆದ ಎಫ್‌ಐಎಚ್ ಮಹಿಳಾ ಒಲಿಂಪಿಕ್ ಹಾಕಿ ಅರ್ಹತಾ ಟೂರ್ನಿಯ ಪಂದ್ಯದಲ್ಲಿ 3–1ರಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿದರು.

ಶನಿವಾರ ಪ್ರಕಟಗೊಂಡ ವಿಶ್ವ ರ್‍ಯಾಂಕಿಂಗ್‌ನಲ್ಲಿ 6ರಿಂದ ಏಳನೇ ಸ್ಥಾನಕ್ಕೆ ಜಾರಿದ್ದ ಭಾರತ ತಂಡವು ಈ ಟೂರ್ನಿಯಲ್ಲಿ ಉತ್ತಮ ಆರಂಭ ಪಡೆದಿರಲಿಲ್ಲ. ಆದರೆ, ಎರಡನೇ ಪಂದ್ಯದಲ್ಲಿ ಸುಲಭ ಜಯ ಸಾಧಿಸಿ, ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಭರವಸೆ ಜೀವಂತವಾಗಿರಿಸಿಕೊಂಡಿತು. ಭಾರತ ಪರ ಸಂಗೀತಾ (1ನೇ ನಿಮಿಷ), ಉದಿತಾ (12ನೇ ನಿ), ಡಂಗ್ ಡಂಗ್ ಬ್ಯೂಟಿ (14ನೇ ನಿ)ಗೋಲು ದಾಖಲಿಸಿದರು.

ಫಿನ್ ಅಬ್ಬರ: ನ್ಯೂಜಿಲೆಂಡ್‌ಗೆ ಜಯ

ಹ್ಯಾಮಿಲ್ಟನ್, ನ್ಯೂಜಿಲೆಂಡ್ (ಎಪಿ): ಆರಂಭಿಕ ಬ್ಯಾಟರ್ ಫಿನ್ ಅಲೆನ್ ಅಬ್ಬರದ ಬ್ಯಾಟಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ಎದುರಿನ ಟಿ20 ಸರಣಿಯಲ್ಲಿ ಸತತ ಎರಡನೇ ಜಯ ಸಾಧಿಸಿತು.

ಸೆಡಾನ್ ಪಾರ್ಕ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಫಿನ್ ಅಲೆನ್ (74; 41ಎ, 4X7, 6X5) ಮತ್ತು ಡೆವೊನ್ ಕಾನ್ವೆ (20; 15ಎ) ತಂಡಕ್ಕೆ ಉತ್ತಮ ಆರಂಭ ನೀಡಿದರು.. ಪಾಕ್ ತಂಡದ ಬಾಬರ್ ಆಜಂ (66; 43ಎ, 4X7, 6X2) ಮತ್ತು ಫಕಾರ್ ಜಮಾನ್ (50; 25ಎ, 4X3, 6X5) ಅರ್ಧಶತಕ ಗಳಿಸಿದರೂ ಉಳಿದ ಬ್ಯಾಟರ್‌ಗಳು ವಿಫಲರಾದರು. ಕಿವೀಸ್ ಬಳಗದ ಆ್ಯಡಂ ಮಿಲ್ನೆ ನಾಲ್ಕು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 194 (ಫಿನ್ ಅಲೆನ್ 74, ಡೆವೊನ್ ಕಾನ್ವೆ 20, ಮಿಚೆಲ್ ಸ್ಯಾಂಟನರ್ 25, ಹ್ಯಾರಿಸ್ ರವೂಫ್ 38ಕ್ಕೆ3, ಅಬ್ಬಾಸ್ ಆಫ್ರಿದಿ 43ಕ್ಕೆ2) ಪಾಕಿಸ್ತಾನ: 19.3 ಓವರ್‌ಗಳಲ್ಲಿ 173 (ಬಾಬರ್ ಆಜಂ 66, ಫಕಾರ್ ಜಮಾನ್ 50, ಶಾಹೀನ್ ಆಫ್ರಿದಿ 22, ಟಿಮ್ ಸೌಥಿ 31ಕ್ಕೆ2, ಆ್ಯಡಂ ಮಿಲ್ನೆ 33ಕ್ಕೆ4, ಬೆನ್ ಸೀರ್ಸ್ 28ಕ್ಕೆ2, ಈಶ್ ಸೋಧಿ 33ಕ್ಕೆ2) **ಫಲಿತಾಂಶ:** ನ್ಯೂಜಿಲೆಂಡ್‌ಗೆ 21 ರನ್‌ಗಳ ಜಯ ಹಾಗೂ 2–0 ಮುನ್ನಡೆ.

ಆಸ್ಟ್ರೇಲಿಯನ್ ಓಪನ್: ಜೊಕೊವಿಚ್ ಶುಭಾರಂಭ

ಮೆಲ್ಬರ್ನ್, ಆಸ್ಟ್ರೇಲಿಯಾ (ಎಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಭಾನುವಾರ ಶುರುವಾದ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಜಯದ ಆರಂಭ ಮಾಡಿದರು.

ಇಲ್ಲಿ ನಡೆದ ಪಂದ್ಯದಲ್ಲಿ ಜೊಕೊವಿಚ್ 6-2, 6-7 (5), 6-3, 6-4 ಸೆಟ್‌ಗಳಿಂದ ಕ್ರೊವೇಷ್ಯಾದ ಡಿನೊ ಪ್ರಿಜ್ಮಿಕ್ ಅವರನ್ನು ಮಣಿಸಿದರು. ಡಿನೊ ಅವರಿಗೆ ಇದು ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪಂದ್ಯವಾಗಿತ್ತು. 18 ವರ್ಷದ ಡಿನೋ ಅವರನ್ನು ಸೋಲಿಸಲು ಜೊಕೊವಿಚ್ 4 ತಾಸು ಸೆಣಸಾಡಿದರು.

ಈ ಪಂದ್ಯದ ಮೊದಲ ಸೆಟ್ ನಿರೀಕ್ಷೆಯಂತೆ ನಡೆಯಿತು. ಜೊಕೊವಿಚ್ ಸುಲಭವಾಗಿ ಗೆದ್ದರು. ಆದರೆ ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದ ಡಿನೋ ಗೆದ್ದರು. ಬಳಿಕ ಎರಡು ಸೆಟ್‌ಗಳನ್ನು ಗೆಲ್ಲುವುದರೊಂದಿಗೆ ಜೊಕೊವಿಚ್ ಪ್ರಾಬಲ್ಯ ಮುಂದುವರಿಯಿತು.



ನೊವಾಕ್ ಜೊಕೊವಿಚ್

ದಿನದ ಇನ್ನುಳಿದ ಪಂದ್ಯಗಳಲ್ಲಿ ಐದನೇ ಶ್ರೇಯಾಂಕದ ಆಂಡ್ರೆ ರುಬ್ಲೆವ್ 7-5, 6-4, 3-6, 4-6, 7-6 (6) ಸೆಟ್‌ಗಳಿಂದ ಥಿಯಾಗೊ ಸೆಬೊತ್ ವೈಲ್ಡ್ ಅವರನ್ನು ಸೋಲಿಸಿದರು. ಪಾದದ ಗಾಯದಿಂದ ಚೇತರಿಸಿಕೊಂಡ 12ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರು ಫಕುಂಡೊ ಡಯಾಜ್ ಅಕೋಸ್ಟಾ ಅವರನ್ನು 4-6, 6-3, 3-6, 6-2, 6-4 ಸೆಟ್ ಗಳಿಂದ ಸೋಲಿಸಿದರು.

ಮಹಿಳೆಯರ ವಿಭಾಗದಲ್ಲಿ ಹಾಲಿ ಚಾಂಪಿಯನ್, ಎರಡನೇ ಶ್ರೇಯಾಂಕದ ಆರ್ಯನಾ ಸಬಲೆಂಕಾ ತಮ್ಮ ಎದುರಾಳಿ ಜರ್ಮನಿಯ ಎಲಾ ಸೀಡೆಲ್ ಅವ ರನ್ನು 6-0, 6-1ರ ಸೆಟ್‌ಗಳಿಂದ ಸೋಲಿಸಿದರು. ಮಾರಿಯಾ ಸಕರಿ ಅವರು ಜಪಾನ್ ನ ನಾವೊ ಹಿಬಿನೊ ಅವರನ್ನು 6-4, 6-1 ಸೆಟ್ ಗಳಿಂದ ಸೋಲಿಸಿದರು.